
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 26, 2008 ರೂ. 12/-



ಣಿ ರೆಡ್ಡಿಗಳ
ಾಂಚಲಿ!



ವಿಕೃತರಿಗೆ ಬಲಿಯಾದ ಕ್ರೀಡಾಪಟು

ಸಾನಿಯಾ ಸೆಕ್ಸ್ ಸೀಡಿ?

ಸರಹಳ್ಳಿ:

ಜೆಪಿ ಏಜೆಂಟನಿಗೆ
ಾಂಗ್ರೆಸ್ ಟಿಕೆಟ್?



ರಸೀಪುರ : ತಹಶೀಲ್ದಾರ್ ನಾಗರಾಜ್ ಹತ್ಯೆ ಯತ್ನ

ಕಳ್ಳ ಪೊಲೀಸ್ ಶ್ರೀಕಂಠಪ್ಪ

ಗಳೂರು: ಶಾಸಕರಾಗಲು ಭೂಗಳ್ಳರ ಲಗ್ಗೆ

ಈ ಸಾಲಿನ ಬಜೆಟ್ ಮಾಂತ್ರಿಕ ಬಜೆಟ್ಟಲ್ಲದೆ ಕೇವಲ ಭ್ರಾಂತಿಕ ಬಜೆಟ್ಟೆಂಬುದನ್ನು ಈ ಅಂಕಣದಲ್ಲಿ ಹೋದ ಸಂಚಿಕೆಯಲ್ಲಿ ಬರೆದದ್ದು ಓದುಗರಿಗೆ ನೆನಪಿರಬಹುದು. ಇದೀ ಬಜೆಟ್ಟನ್ನು ಸಾಲಮನ್ನಾ ಬಜೆಟ್ಟೆಂದು ಚಿತ್ರಿಸಲು ಕಾಂಗ್ರೆಸ್ ಎಷ್ಟು ಪ್ರಯತ್ನ ಪಡುತ್ತಿದೆಯೋ ಪರೋಕ್ಷವಾಗಿ ಆ ಪ್ರಯತ್ನಕ್ಕೆ ಅಷ್ಟೇ ಮಟ್ಟಿಗೆ ಇತರ ಪಕ್ಷಗಳೂ ಸಾಥ್ ಕೊಡುತ್ತಿವೆ. ಹೀಗಾಗಿ ಈ ಪರ, ವಿರೋಧಗಳ ಹುಸಿ ಅಬ್ಬರದಲ್ಲಿ ಈ ಬಜೆಟ್ ಹೇಗೆ ಕಾರ್ಪೊರೇಟ್ ಶಕ್ತಿಗಳಿಗೆ ಅನುಕೂಲಕರವಾಗಿದೆ ಎಂಬುದನ್ನು ಎಲ್ಲರೂ ಸೇರಿ ಮರೆಸುತ್ತಿದ್ದಾರೆ.

ಅದೇನೇ ಇದ್ದರೂ, ರೈತಾಪಿಗೆ 60,000 ಕೋಟಿ ರೂಪಾಯಿಗಳಷ್ಟು ಮೊತ್ತದ ಬೃಹತ್ ಸಾಲಮನ್ನಾವನ್ನು ಘೋಷಿಸಿದ ಆಳುವ ಕಾಂಗ್ರೆಸ್ ಪಕ್ಷ ಆ ಮೂಲಕ ತನ್ನ ವಿರೋಧಿ ಪಕ್ಷಗಳ ಫ್ಯೂಸ್ ತೆಗೆದುಬಿಟ್ಟಿತಷ್ಟೆ! ಆದ್ದರಿಂದಲೇ ಪಾರ್ಲಿಮೆಂಟಿನಲ್ಲಿ ಚಿದಂಬರಂ ಈ ಸಾಲಮನ್ನಾ ಘೋಷಣೆ ಮಾಡಿದಾಗಿನಿಂದ ಈವರೆಗೂ ಬಜೆಟ್ಟಿನಲ್ಲಿ ಪ್ರಸ್ತಾಪಿತವಾಗಿರುವ ಸಾಲಮನ್ನಾ ವಿಚಾರದ ಬಗ್ಗೆ ವಿರೋಧ ಪಕ್ಷಗಳು ಪಾರ್ಲಿಮೆಂಟಿನ ಒಳಗೆ ಮತ್ತು ಹೊರಗೆ ಸತತ ಹುಯಿಲೆಬ್ಬಿಸುತ್ತಿವೆ. ಇದೇ ಕಾಂಗ್ರೆಸ್ ಸರ್ಕಾರವನ್ನು ಬೆಂಬಲಿಸುತ್ತಿರುವ ಸಿಪಿಎಂ ಪಕ್ಷದಿಂದ ಹಿಡಿದು ವಿರೋಧಿ ಬಿಜೆಪಿ ಪಕ್ಷದವರೆಗೆ ಎಲ್ಲರೂ ಚಿತ್ರವಿಚಿತ್ರ ತರ್ಕಗಳನ್ನಿಟ್ಟುಕೊಂಡು ಈ ಸಾಲಮನ್ನಾ ಸವಾಲನ್ನು ಎದುರಿಸಲು ಪ್ರಯತ್ನಿಸುತ್ತಿವೆ.



ಅದರಲ್ಲಿ ಸಿಪಿಎಂ ಪಕ್ಷದ ಪರಿಸ್ಥಿತಿ ಮಾತ್ರ ಹಾಸ್ಯಾಸ್ಪದವಲ್ಲವಾದರೂ ಹಾಸ್ಯಕ್ಕೆ ಆಸ್ಪದ ಮಾಡಿಕೊಡುವಂತಹದ್ದೇ ಆಗಿದೆ! ಸಾಲಮನ್ನಾ ವಿಷಯವನ್ನು ಆ ಪಕ್ಷ ವಿರೋಧಿಸಲು ಬಾರದಿರುವಂತಹ ಬಿಕ್ಕಟ್ಟನ್ನು ಎದುರಿಸುತ್ತಿದೆ. ಏಕೆಂದರೆ ಅದು ರೈತರಿಗೆ ಅನುಕೂಲವಾಗುವ ನೀತಿ ಎಂದೇ ಅದು ಉದ್ದಕ್ಕೂ ಸಾರಿಕೊಂಡುಬಂದಿದೆ. ಹೀಗಾಗಿ ಕಾಮ್ರೇಡ್ ಸೀತಾರಾಂ ಯೆಚೂರಿಯವರ ಮೂಲಕ "ಎಡ ಪಕ್ಷಗಳ ಆಗ್ರಹಗಳಿಂದಾಗಿಯೇ ಕೇಂದ್ರ ಬಜೆಟ್ಟಿನಲ್ಲಿ ಸಾಲ ಮನ್ನಾ ಎಂಬ ಜನಪರ ಕಾರ್ಯಕ್ರಮ ಘೋಷಣೆಯಾಗಿದ್ದು" ಎಂದು ಹೇಳುತ್ತಾ ಅದರ ಸಂಪೂರ್ಣ ಕ್ರೆಡಿಟ್ಟನ್ನು ತಾನೇ ಪಡೆದುಕೊಳ್ಳಲು ಯತ್ನಿಸುತ್ತಿದೆ. ಆದರೆ ಇದೇ ಒತ್ತಡವನ್ನು ಕಳೆದ ನಾಲ್ಕು ವರ್ಷಗಳಿಂದ ಏಕೆ ಹೇರಲಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಲು ಆ ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ.

ತಾವು ಯಾವ ಬಗೆಯಲ್ಲಿ ಎಷ್ಟೇ ಪ್ರಚಾರ ಮಾಡಿದರೂ ಸಾಲಮನ್ನಾ ಸರಿಯಾದ ಜನಪರ ಕಾರ್ಯಕ್ರಮವೆಂಬ ಸರ್ಟಿಫಿಕೇಟ್ ಅನ್ನು ತಾವೇ ಕಾಂಗ್ರೆಸ್ಸಿಗೆ ಅನುದ್ದಿಶ್ಯ ಪೂರ್ವಕವಾಗಿ ನೀಡಿದಂತಾಗುತ್ತದೆ ಮಾತ್ರವಲ್ಲ, ಚುನಾವಣಾ ಸಂದರ್ಭದಲ್ಲಿ ಅದರಿಂದ ತಮಗಿಂತಲೂ ಹೆಚ್ಚಾಗಿ ಕಾಂಗ್ರೆಸ್ಸಿಗೇ ಲಾಭ ಜಾಸ್ತಿ ಎಂಬುದನ್ನು ನಿಧಾನವಾಗಿಯಾದರೂ ಅರ್ಥಮಾಡಿಕೊಂಡ ಸಿಪಿಎಂ ಸದ್ಯಕ್ಕೆ ಆ ಪ್ರಚಾರವನ್ನು ನಿಲ್ಲಿಸಿ "ಇದು ಸಂಪೂರ್ಣ ಕಾರ್ಪೊರೇಟ್ ಶಕ್ತಿಗಳನ್ನು ಒಲೈಸುವ ಬಜೆಟ್" ಎಂದು ತಮ್ಮ ಅನಧಿಕೃತ ಮುಖಪತ್ರಿಕೆಗಳಾದ 'ದಿ ಹಿಂದೂ', 'ಫ್ರಂಟ್‌ಲೈನ್' ಇನ್ನಿತ್ಯಾದಿ ಪತ್ರಿಕೆಗಳಲ್ಲಿ ಬರೆಸುತ್ತಿದ್ದಾರೆ. ಆದರೆ ಕಾಮ್ರೇಡರು ಇಲ್ಲೂ ಒಂದು ವೈರುಧ್ಯವನ್ನು ಎದುರಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಅನುಸರಿಸುತ್ತಿರುವ ಆರ್ಥಿಕ ನೀತಿಯನ್ನೇ ತಾವು ಬಂಗಾಳದಲ್ಲೂ ಅನುಸರಿಸುತ್ತಿರುವುದರಿಂದ ಕಾಂಗ್ರೆಸ್ಸನ್ನು ಸಾರಾಸಗಟಾಗಿ ಆ ನೆಲೆಯಲ್ಲೂ ವಿಮರ್ಶಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಚಾರ್ವಾಕ

ಶಿವಸುಂದರ್

ಇನ್ನು ಬಿಜೆಪಿಯದ್ದೂ ಹೆಚ್ಚುಕಡಿಮೆ ಇದೇ ಸ್ಥಿತಿ. ಆದರೆ ಅವರು ವಿರೋಧ ಪಕ್ಷದಲ್ಲಿದ್ದಾಗಲೂ ಎಂದಿಗೂ ಕಾಂಗ್ರೆಸ್‌ನ ಆರ್ಥಿಕ ನೀತಿಗಳನ್ನು ವಿರೋಧಿಸದೇ ಸಮರ್ಥಿಸುತ್ತಲೇ ಬಂದಿದ್ದರಿಂದ ಅವರ ಜನವಿರೋಧಿ ನಿಲುವುಗಳಲ್ಲಿ ಹೆಚ್ಚು ವೈರುಧ್ಯಗಳಿಲ್ಲ. ಆದರೆ ಇದು ಚುನಾವಣಾ ವರ್ಷವಾದ್ದರಿಂದ ಸಾಲಮನ್ನಾ ನೀತಿಯನ್ನು ಅವರು ವಿರೋಧಿಸಲು ಸಾಧ್ಯವೇ ಇಲ್ಲ. ಹೀಗಾಗಿ ಯಡಿಯೂರಪ್ಪ "ಇದು ನಾನು ಕರ್ನಾಟಕದಲ್ಲಿ ಜಾರಿಗೆ ತಂದ ಯೋಜನೆಯಾಗಿದ್ದು ಅದನ್ನೇ ಚಿದಂಬರಂ ಕೇಂದ್ರದಲ್ಲಿ ಕಾಪಿ ಮಾಡಿದ್ದಾರೆ" ಎಂದು ಹೇಳುತ್ತಾ ಪರೋಕ್ಷವಾಗಿ ಕಾಂಗ್ರೆಸ್ಸಿನ ಸಾಲಮನ್ನಾ ಕಾರ್ಯಕ್ರಮ ಜನಪರ ನೀತಿ ಎಂದು ಸಮರ್ಥಿಸಲಾರಂಭಿಸಿದ್ದರು. ಆದರೆ ಈ ನೆಲೆಯಲ್ಲಿ ಸಾಲಮನ್ನಾ ಕಾಂಗ್ರೆಸ್‌ಪರ ಓಟುಗಳಾಗುವುದನ್ನು ತಡೆಯುವುದು ಕಷ್ಟ ಎಂದು ಅರ್ಥಮಾಡಿಕೊಂಡ ಬಿಜೆಪಿ ಈಗ ಅದರ ಬದಲಿಗೆ "ಸಾಲಮನ್ನಾ ಕೇವಲ ನಾಟಕ" ಎಂಬ ಪ್ರಚಾರ ಶುರು ಮಾಡಿದೆ. ಅಷ್ಟು ಮಾತ್ರವಲ್ಲದೆ ಸಾಲಮನ್ನಾ ನಿಜಕ್ಕೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ಅನುಕೂಲವಾಗುವುದಿಲ್ಲವೆಂದೂ, ಕೃಷಿಯಲ್ಲಿ ಹೆಚ್ಚು ಸಾರ್ವಜನಿಕ ಹೂಡಿಕೆ ಮಾಡಬೇಕಿತ್ತೆಂದು ವಿಮರ್ಶಿಸುತ್ತಿದೆ. ಆದರೆ ತಾವೇ ಐದು ವರ್ಷ ರಾಜ್ಯಭಾರ ಮಾಡಿದಾಗ ಏಕೆ ಹೆಚ್ಚು ಹಣ ಹೂಡಲಿಲ್ಲವೆಂಬ ಪ್ರಶ್ನೆಗೆ ಉತ್ತರವಿಲ್ಲವಾದ್ದರಿಂದ ಸಾಧ್ಯವಾದಷ್ಟು ಬೇಗ ಬಜೆಟ್ಟೇತರ ರಾಜಕೀಯ ವಿಷಯಗಳನ್ನು ಸೃಷ್ಟಿಸಲು ಯತ್ನಿಸುತ್ತಿದೆ.

ಸಾಲಮನ್ನಾ ಎಂಬ ಘೋಷಣೆಯ ಮೂಲಕವೇ ಮುಂದಿನ ಚುನಾವಣೆಯ ಜಯದ ಹಾದಿಯನ್ನು ಸ್ಪಷ್ಟವಾಗಿ ಕಾಣಲು ಪ್ರಾರಂಭಿಸಿರುವ ಕಾಂಗ್ರೆಸ್ ಅದನ್ನು ಇನ್ನಷ್ಟು ಸದೃಢೀಕರಿಸಿಕೊಳ್ಳಲು ರಾಹುಲ್ ಗಾಂಧಿ ಎಂಬ ಅಸ್ತ್ರವನ್ನು ಪ್ರಯೋಗಿಸಿದೆ. ಮೊನ್ನೆ ಸದನದಲ್ಲಿ ಬಜೆಟ್ ಬಗ್ಗೆ ಭಾಷಣ ಮಾಡಿದ ಕಾಂಗ್ರೆಸ್ಸಿನ ಭಾವೀ ಪ್ರಧಾನಿ ರಾಹುಲ್ ಗಾಂಧಿ ಸಾಲಮನ್ನಾ ಯೋಜನೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದು ಮಾತ್ರವಲ್ಲದೆ ಅದು ಇನ್ನಷ್ಟು ಅರ್ಥಪೂರ್ಣವಾಗಿ ಬಳಕೆಯಾಗಬೇಕೆಂದರೆ ಸಾಲಮನ್ನಾ ಫಲಾನುಭವಿಗಳನ್ನು ಗುರುತಿಸಲು ಎರಡೂವರೆ ಹೆಕ್ಟೇರ್ ಜಮೀನು ಮಿತಿಯನ್ನು ಇರಿಸಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದ್ದಾರೆ. ಏಕೆಂದರೆ ಒಣ ಬೇಸಾಯದ ಪ್ರದೇಶದಲ್ಲಿ ಹತ್ತರಿಂದ ಇಪ್ಪತ್ತು ಎಕರೆ ಜಮೀನಿದ್ದರೂ ಆತನ ಸ್ಥಿತಿಗತಿ ಎರಡು ಎಕರೆ ನೀರಾವರಿ ಜಮೀನು ಇರುವವರಿಗಿಂತ ಭೀಕರವಾಗಿರುತ್ತದೆ. ಆದ್ದರಿಂದ ಜಮೀನಿನ ಮಿತಿಯಿಲ್ಲದೆ 50,000 ರೂ.ವರೆಗೆ ಸಾಲ ಮಾಡಿರುವ ಎಲ್ಲಾ ರೈತರ ಸಾಲವನ್ನು ಮನ್ನಾ ಮಡಬೇಕೆಂದು ಭರ್ಜರಿ ಭಾಷಣ ಮಾಡಿದರು. ಈ ಭಾವೀ ಪ್ರಧಾನಮಂತ್ರಿಯ ಸಲಹೆಯನ್ನು ಹಣಕಾಸು ಮಂತ್ರಿ ಚಿದಂಬರಂ ಅವರೂ ಒಪ್ಪಿಕೊಳ್ಳುವ ಭರವಸೆಯನ್ನು ನೀಡಿದರು.

ರಾಜಕೀಯ ಪಕ್ಷಗಳದ್ದು ಈ ಕಥೆಯಾದರೆ ರೈತರ ಆತ್ಮಹತ್ಯೆಗಳಾಗುತ್ತಿರುವಾಗ ತಮ್ಮದೇ ಸ್ವರ್ಗದಲ್ಲಿ ತೇಲುತ್ತಿದ್ದ ಈ ದೇಶದ ಪಂಡಿತರು ಮತ್ತು ಕೈಗಾರಿಕೋದ್ಯಮಿಗಳು "ರೈತರಿಗೆ ಸಾಲಮನ್ನಾ ಮಾಡಿದರೆ ಬ್ಯಾಂಕುಗಳ ಆರೋಗ್ಯ ಹಾಳಾಗುತ್ತದೆ" ಎಂದು ಊಳಿಡುತ್ತಿದ್ದಾರೆ. ಆದರೆ ಇದೇ ಜನ ಕೈಗಾರಿಕೋದ್ಯಮಿಗಳು ಬ್ಯಾಂಕುಗಳಿಗೆ ಬಾಕಿ ನೀಡಬೇಕಿರುವ 1,50,000 ಕೋಟಿ ರೂಪಾಯಿಗಳಿಂದ ಮತ್ತು ಅದನ್ನು ನಾನ್ ಪರ್ಫಾರ್ಮಿಂಗ್ ಆಸೆಟ್ ಎಂದು ಘೋಷಿಸಿ ಮನ್ನಾ ಮಾಡುವುದರಿಂದ ಬ್ಯಾಂಕುಗಳ ಆರೋಗ್ಯ ಎಷ್ಟು ಸುಧಾರಿಸಿದೆ ಎಂಬ ಬಗ್ಗೆ ಮಾತ್ರ ಚಕಾರವೆತ್ತುತ್ತಿಲ್ಲ. 60,000 ಕೋಟಿ ರೂ. ಸಾಲಮನ್ನಾದಿಂದ ಬ್ಯಾಂಕ್ ಆರೋಗ್ಯ ಎಷ್ಟು ಹಾಳಾಗುತ್ತದೋ ಅದರ ಎರಡೂವರೆ ಪಟ್ಟಷ್ಟು ಕೈಗಾರಿಕೋದ್ಯಮಿಗಳ ಸಾಲವನ್ನು ಮನ್ನಾ ಮಾಡುವುದರಿಂದ ಹಾಳಾಗಬೇಕಲ್ಲವೇ? ಅಥವಾ ಕೈಗಾರಿಕೋದ್ಯಮಿಗಳ ಸಾಲಮನ್ನಾದಿಂದ ದೇಶ ಉದ್ಧಾರವಾಗುತ್ತದೆ ಎಂದಾದರೆ ರೈತರ ಸಾಲಮನ್ನಾದಿಂದಲೂ ದೇಶದ ಆರೋಗ್ಯ ಸುಧಾರಿಸಬೇಕಲ್ಲವೇ?

ಹಾಗೆ ನೋಡಿದರೆ ಈ ಬಜೆಟ್ ಮೂಲಭೂತವಾಗಿ ಕೈಗಾರಿಕೋದ್ಯಮಿಗಳ ಪರವಾದ ಬಜೆಟ್ಟೇ. ಕಳೆದ ವರ್ಷ ಜಿಡಿಪಿ ಅಭಿವೃದ್ಧಿ ದರ ಶೇ.9ರ ಬದಲು ಶೇ.8.5ಕ್ಕೆ ಇಳಿದಿದೆ. ಅದಕ್ಕೆ ಕಾರಣವನ್ನು ಸರಳವಾಗಿ ಹೇಳುವುದಾದರೆ ಜನರು ಕೊಳ್ಳುವುದನ್ನು ಕಡಿಮೆ ಮಾಡಿದ್ದಾರೆ. ಬಳಕೆದಾರರ ಮಾರುಕಟ್ಟೆಯಲ್ಲಿ ಅಂದರೆ ಕಾರು, ಬೈಕು, ಸೋಪು, ಸಾಬೂನು, ಕಂಪ್ಯೂಟರ್ ಇನ್ನಿತ್ಯಾದಿಗಳನ್ನು ಕೊಳ್ಳುವ ಮಧ್ಯಮ ವರ್ಗದ ಜನರ ಕಿಸೆಯಲ್ಲಿ ಕೊಳ್ಳುವ ಹಣ ಕಡಿಮೆಯಾಗುತ್ತಿದೆ. ಹೀಗಾಗಿ ಈ ವರ್ಷದ ಬಜೆಟ್ಟಿನ ಪ್ರಯಾಸವೆಲ್ಲಾ ಆರ್ಥಿಕತೆಯಲ್ಲಿ ಮತ್ತಷ್ಟು ಚಲನೆ ತರುವ ದೃಷ್ಟಿಯಿಂದ ಕೊಳ್ಳುವ ಮಧ್ಯಮ ವರ್ಗದ ಜನರ ಕಿಸೆಯಲ್ಲಿ ಜಾಸ್ತಿ ಹಣ ಉಳಿಯುವಂತೆ ಮಾಡುವುದೇ ಆಗಿದೆ. ಆದ್ದರಿಂದಲೇ ಬಹಳಷ್ಟು ಗ್ರಾಹಕ ಸಾಮಗ್ರಿಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಮತ್ತು ಮಧ್ಯಮ ವರ್ಗದವರ ಆದಾಯದ ಮೇಲೆ ಹೆಚ್ಚು ತೆರಿಗೆ ಹಾಕದಿರುವುದು ಮಾತ್ರವಲ್ಲದೆ ಆದಾಯ ತೆರಿಗೆಯ ಮಿತಿಯನ್ನು ಹೆಚ್ಚಿಸಿ ಕಿಸೆಯಲ್ಲಿ ಹಣವನ್ನು ಉಳಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಮಧ್ಯಮ ವರ್ಗದ ವೇತನದಾರರ ಬಳಿ ವರ್ಷಕ್ಕೆ ಏನಿಲ್ಲವೆಂದರೂ 40-50,000 ರೂ.ಗಳನ್ನು ಉಳಿಸಲಾಗಿದೆ.

ಇನ್ನೊಂದು ಅಂದಾಜಿನ ಪ್ರಕಾರ ಅತಿ ಸಣ್ಣ ರೈತರಿಗೆ ಈ ಸಾಲಮನ್ನಾದಿಂದ ಏನೂ ಲಾಭವಿಲ್ಲ. ಆದರೆ ಮಧ್ಯಮ ರೈತರಿಗೆ 23,000 ಕೋಟಿ ರೂ. ಸಾಲಮನ್ನಾದ ಲಾಭ ಸಿಗುತ್ತದೆ ಎಂದಾದರೂ ಅವರಿಗೆ ವರ್ಷಕ್ಕೆ 3,100 ರೂ. ಮಾತ್ರ ಲಭ್ಯವಾಗುತ್ತದೆ. ಇದೆಲ್ಲವನ್ನು ಮತ್ತೆ ಈ ಮಧ್ಯಮ ವರ್ಗ ಕಾರ್ಪೊರೇಟ್ ಉದ್ಯಮಿಗಳ ಬೈಕು, ಕಾರು ಇನ್ನಿತ್ಯಾದಿ ಸರಕುಗಳನ್ನು ಕೊಳ್ಳಲೆಂದೇ ವ್ಯಯ ಮಾಡುವುದರಿಂದ ಇದರ ಲಾಭ ಪ್ರತ್ಯಕ್ಷವಾಗಿ ಕಾರ್ಪೊರೇಟ್ ಉದ್ಯಮಿಗಳಿಗೇ ದಕ್ಕುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಸರ್ಕಾರವು ವಾಹನಗಳ ಮೇಲೆ

(18ನೇ ಪುಟಕ್ಕೆ)

No Comments



"ನಾನು ಪಕ್ಷದಲ್ಲಿದ್ದಾಗ ಐದು ವರ್ಷಗಳ ಕಾಲ ಪಕ್ಷದ ಕಚೇರಿಯಲ್ಲಿ ಕುಮಾರಸ್ವಾಮಿಯವರ ಮುಖವನ್ನೇ ನೋಡಿರಲಿಲ್ಲ."

-ಸಿದ್ಧರಾಮಯ್ಯ

"ನಿಜವಾದ ಮೂರನೇ ರಂಗ ಚುನಾವಣೆಯ ನಂತರ ರೂಪುಗೊಳ್ಳುತ್ತದೆ."

-ದೇವೇಗೌಡ

"ನಿಷ್ಪಕ್ಷಪಾತ ನ್ಯಾಯಂಗ ವ್ಯವಸ್ಥೆ, ಪೂರ್ವಗ್ರಹಗಳಿಲ್ಲದ ನ್ಯಾಯಾಧೀಶ, ಮುಕ್ತ ವಿಚಾರಣಾಧಿಕಾರಿ ಇವುಗಳಿಲ್ಲದೆ ನಿಷ್ಪಕ್ಷಪಾತವಾದ ನ್ಯಾಯದಾನ ವ್ಯವಸ್ಥೆ ಸಾಧ್ಯವಿಲ್ಲ. ಕಣ್ಣೆದುರಿಗಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸುವುದನ್ನೂ ನಿರಾಕರಿಸುವ ಸಂದರ್ಭದಲ್ಲಿ ಖಂಡಿತವಾಗಿ ನಿಷ್ಪಕ್ಷಪಾತ ನ್ಯಾಯದಾನ ಪ್ರಕ್ರಿಯೆ ಆಗುತ್ತದೆ ಎಂದು ಭಾವಿಸಲು ಸಾಧ್ಯವಿಲ್ಲ."

-ಜಸ್ಟೀಸ್ ಪಸಾಯತ್, ಸುಪ್ರೀಂ ಕೋರ್ಟಿನ ನ್ಯಾಯಾಧೀಶರು, ಮಧ್ಯಪ್ರದೇಶದಲ್ಲಿ ಎಬಿವಿಪಿ ಗೂಂಡಾಗಳು ಅಧ್ಯಾಪಕ ಸಬರ್‌ವಾಲ್‌ರನ್ನು ಕೊಂದುಹಾಕಿದ ಪ್ರಕರಣದ ವಿಚಾರಣೆಯ ಕುರಿತು

"ವಿಶ್ವದಲ್ಲಿ ಸರಾಸರಿ ಶೇ.23ರಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ನೊಂದಾವಣೆಗೊಳ್ಳುತ್ತಿದ್ದರೆ ಭಾರತದಲ್ಲಿ ಅದರ ಪ್ರಮಾಣ ಕೇವಲ ಶೇ.10!"

-ಡಾ. ಗೋವರ್ಧನ್ ಮೆಹ್ತಾ, ನ್ಯಾಕ್ ಅಧ್ಯಕ್ಷ

"ಅಂಪೈರಿಂಗ್ ನಮ್ಮ ವಿರುದ್ಧವಿದ್ದಿದ್ದರಿಂದಲೇ ನಾವು ಸೋಲಬೇಕಾಯಿತು."

-ಕರ್ವಾಲೋ, ಭಾರತದ ಹಾಕಿ ತಂಡದ ಕೋಚ್

"ಮತಚಲಾಯಿಸಿ ನಿದ್ದೆ ಮಾಡಲಾಗದು. ಏಕೆಂದರೆ ಚುನಾವಣಾ ಪಕ್ಷಗಳು ನಮ್ಮ ಹಿತಾಸಕ್ತಿಯನ್ನು ಕಾಯುತ್ತವೆ ಎಂದು ನಂಬಲಾಗುವುದಿಲ್ಲ."


-ಇತ್ತೀಚಿನ ಸಭೆಯೊಂದರಲ್ಲಿ ಜನದನಿ

ನಂಬಿದ್ರೆನಂಬಿ ಬಿಟ್ರೆಬಿಡಿ



"ಏಪ್ರಿಲ್ 21ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ರೈತ ಸಮಾವೇಶದಲ್ಲಿ ಐದು ಲಕ್ಷ ರೈತರು ಭಾಗವಹಿಸಲಿದ್ದಾರೆ."

-ಕೋಡಿಹಳ್ಳಿ ಚಂದ್ರಶೇಖರ್, ರೈತ ಸಂಘದ ಅಧ್ಯಕ್ಷರು



"ಕ್ರಾಂತಿಕಾರಿ ವಿಚಾರಧಾರೆಗಳುಳ್ಳ ಬಸವೇಶ್ವರರ ವಚನಗಳನ್ನು ಸ್ಪಾನಿಷ್ ಭಾಷೆಗೆ ಅನುವಾದಿಸಬೇಕು."

-ದೇಜಗೌ

"ಈ ಬಾರಿ ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬರುತ್ತದೆ."

-ಚಿತ್ರ ನಟ ಶ್ರೀನಾಥ್

"ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ರಾಜ್ಯದ ಎಲ್ಲಾ ಸಂಸದರು ಮತ್ತು ಕನ್ನಡಾಭಿಮಾನಿಗಳೊಂದಿಗೆ ದಿಲ್ಲಿ ಚಲೋ ಮಾಡುತ್ತೇವೆ."

-ಚಂಪಾ



"ಒರಿಸ್ಸಾ ಪ್ರವಾಸದಲ್ಲಿ ನಾನು ಭದ್ರತಾ ನಿಯಮಗಳನ್ನು ಉಲ್ಲಂಘಿಸಿದ್ದು ನಾಯಕ ಹಾಗೂ ಜನರ ನಡುವಿನ ಅಂತರವನ್ನು ಕಡಿಮೆ ಮಾಡಲು."

-ರಾಹುಲ್ ಗಾಂಧಿ

"ಆಫ್ರಿಕಾ ಬೆಳಕಿನ ಖಂಡ. ನಾಡಿನ ಸೂರ್ಯ ಬೆಳಗಲಿರುವುದು ಅಲ್ಲಿಯೇ."

-ತರುಣ್ ದಾಸ್, ಭಾರತದ ಪ್ರಮುಖ ಉದ್ಯಮಿ

ಈ ಭಾರತವು ಇಂಡಿಯಾದಲ್ಲೇ ಇದೆ!

"ವಿಶ್ವದ ಶ್ರೀಮಂತ ಬಲಿಯನ್ನರುಗಳ ಸಂಖ್ಯೆಯಲ್ಲಿ ಭಾರತ ಐದನೇ ಸ್ಥಾನಕ್ಕೇರಿದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 128ನೇ ಸ್ಥಾನಕ್ಕಿಳಿದಿದೆ. 30 ಕೋಟಿ ಮಧ್ಯಮ ವರ್ಗದವರಿದ್ದಾರೆ. ಅಷ್ಟೇ ಸಂಖ್ಯೆಯ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. 2010ರ ವೇಳೆಗೆ ಇಂಗ್ಲಿಷ್ ಮಾತಾಡುವವರ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆ ಇದೆ. ಆದರೆ ಅನಕ್ಷರತೆ ದೂರವಾಗಿಲ್ಲ. ಏಳು ಕೋಟಿಗೂ ಹೆಚ್ಚು ಜನ ಸೆಲ್ ಬಳಸುತ್ತಾರೆ. ಆದರೆ ಇಂದಿಗೂ ಎಷ್ಟೋ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನೂ ದೊರಕಿಸಲಾಗಿಲ್ಲ."

-ಡಾ. ಗೋವರ್ಧನ್ ಮೆಹ್ತಾ, ನ್ಯಾಕ್ ಅಧ್ಯಕ್ಷ

ಅಭಾವ ವೈರಾಗ್ಯ ಆದರೂ ಸತ್ಯ



"ವಿಧಾನಸಭಾ ಚುನಾವಣೆಯಲ್ಲಿ ಜನರಿಂದ ತಿರಸ್ಕೃತಗೊಂಡಿದ್ದ ಕೃಷ್ಣ ಅವರಿಗೆ ರಾಜ್ಯಪಾಲರ ಹುದ್ದೆ ನೀಡಿದ್ದೇ ತಪ್ಪು, ಅವರನ್ನು ಮತ್ತೆ ರಾಜ್ಯ ರಾಜಕಾರಣಕ್ಕೆ ಹೇರಿರುವುದು ಕೆಳಮಟ್ಟದ ರಾಜಕೀಯ ಕ್ರಮ."

-ಮಾಲೂರು ನಾಗರಾಜ್, ನಂಜೇಗೌಡ

ಹಾಕಿ ಗೆಲ್ಲುವುದು ಫೇಕ್ ಎನ್‌ಕೌಂಟರ್ ಮಾಡಿದಷ್ಟು ಸುಲಭವಲ್ಲ



"ಹಾಕಿ ತಂಡ ಒಲಂಪಿಕ್ಸ್‌ನ ಅರ್ಹತಾ ಸುತ್ತಿನಲ್ಲಿ ವಿಫಲವಾಗಿರುವುದನ್ನು ನಾನು ಸವಾಲೆಂದು ಸ್ವೀಕರಿಸುತ್ತೇನೆ. ಈ ಸೋಲು ಪ್ರತಿಭೆಯ ಕೊರತೆಯಿಂದ ಸಂಭವಿಸಿದ್ದಲ್ಲ ಎಂದು ಲೋಕಕ್ಕೆ ಸಾರುತ್ತೇನೆ. ಭಾರತೀಯ ಹಾಕಿಯನ್ನು ಮತ್ತೆ ವೈಭವದ ದಿನಗಳಿಗೆ ಕೊಂಡೊಯ್ಯುತ್ತೇನೆ."

-ಕೆ.ಪಿ.ಎಸ್. ಗಿಲ್

ಕಳ್ಳ ಮತ್ತು ದರೋಡೆಕೋರರ ನಡುವಿನ ಸಂವಾದ!

"ಭಾರತದ ಮಣ್ಣು ಮತ್ತು ಅದಿರನ್ನು ಮಾರಾಟ ಮಾಡಿ ಹಣ ಮಾಡುತ್ತಿರುವ ಜನಾರ್ದನ್ ರೆಡ್ಡಿ ದೇಶದ್ರೋಹಿ."

-ಚನ್ನಿಗಪ್ಪ

'ಕಾಮಾ'ಲೆ ಕಣ್ಣು!



"ಈಗಿನ ಕಾಲದ ಯುವಕರಿಗೆ ಪ್ರೇಮಪತ್ರವನ್ನು ಬರೆಯಲೂ ಬರುವುದಿಲ್ಲ."

-ಸಿರಿಯಾಕ್ ಜೋಸೆಫ್, ಮುಖ್ಯ ನ್ಯಾಯಾಧೀಶರು



ಕಂಡಹಾಗೆ

■ ಗೌರಿ ಲಂಕೇಶ್

ಸಮಾರಂಭದ ನೆನಪಿನ ಗುಂಗಿನಲ್ಲಿ




ಮಾರ್ಚ್ 8ರ ಶನಿವಾರ ನಡೆದ ಸಮಾರಂಭವನ್ನು ...ನೆನೆದುಕೊಳ್ಳುತ್ತಿದ್ದೇನೆ. ಅವತ್ತು ಅದೆಷ್ಟೇ ...ಪಟ್ಟರೂ ರವೀಂದ್ರ ಕಲಾಕ್ಷೇತ್ರಕ್ಕೆ 3.30ಕ್ಕೆ ಮುನ್ನ ...ಗಲಾಗಲಿಲ್ಲ. 'ಲಂಕೇಶ್ 73' ಕಾರ್ಯಕ್ರಮ ...ಭವಾಗಬೇಕಿದ್ದು ನಾಲ್ಕು ಗಂಟೆಗೆ. ಆದರೆ ಕೊನೇ ... ತನಕ ಸಿದ್ಧತೆ ನಡೆದೇ ಇತ್ತು. (ಯಾವುದೇ ...ರ್ಯಕ್ರಮವನ್ನು ಆಯೋಜಿಸಿರುವವರಿಗೆ ಈ ...ರಿಗಳ ತಲೆನೋವು ಅರ್ಥವಾಗುತ್ತದೆ!) ಆದರೂ ... ಹುಡುಗರಿಗಿಂತ ನಾನೇ ಮೊದಲು ಹಾಜರಾದೆ. ...ರ್ ತುಂಬಾ ಅಂದು ಬಿಡುಗಡೆಗೊಳ್ಳಲಿದ್ದ ಪುಸ್ತಕಗಳ ...ರ್‌ಗಳು, ಅಂದಿನ ಕಾರ್ಯಕ್ರಮಕ್ಕೆ ಬೇಕಿದ್ದ ಇತರ ...ಣೆಗಳಿದ್ದವು. ನಮ್ಮ ಆಫೀಸ್ ಹುಡುಗ ಗೋಪಾಲ್ (...ನ ಚುರುಕಾದ ಈತ ನಟ ದರ್ಶನ್‌ನ ಪರಮಭಕ್ತ!) ... ನಾನು ಪುಸ್ತಕದ ಬಂಡಲ್‌ಗಳನ್ನು ...ಂದ ಇಳಿಸಿ ಕಲಾಕ್ಷೇತ್ರದ ಅಂಗಳದಲ್ಲಿ ...ಪ್ರಾರಂಭಿಸಿದೆವು. ಆಗ ಅದ್ಯಾರೋ ನನ್ನ ...ನಿಂದ ಅಪ್ಪಟ ಉತ್ತರ ಕರ್ನಾಟಕದ ...ದಲ್ಲಿ "ಇಲ್ಲೊಂದಿಷ್ಟು ಕೊಡಿ" ಅಂದರು. ... ನೋಡುತ್ತೇನೆ, ಬಿರಾದಾರ್ ನನ್ನ ಹಿಂದೆ ...ದ್ದರು. ಬಿಜಾಪುರದಲ್ಲಿ 'ಚಾಣಕ್ಯ ಕೆರಿಯರ್ ...ಡೆಮಿ' ಎಂಬ ಪ್ರತಿಷ್ಠಿತ ಮತ್ತು ತುಂಬಾ ...ಸ್ವಿ ಸಂಸ್ಥೆಯನ್ನು ನಡೆಸುವ ಬಿರಾದಾರ್ ...ನ ನಮ್ಮ ಕಾರ್ಯಕ್ರಮದ ಅತಿಥಿಗಳಲ್ಲಿ ...ಾಗಿದ್ದರು. "ಬೇಡ, ನೀವು ನಮ್ಮ ಅತಿಥಿ. ... ತರುತ್ತೇನೆ. ನಮ್ಮ ಹುಡುಗರು ಬರುತ್ತಾರೆ" ... ನಾನೆಷ್ಟೇ ಹೇಳಿದರೂ ಕೇಳದ ...ದಾರ್ ತಾವೂ ಹಲವಾರು ಬಂಡಲ್‌ಗಳನ್ನು ...ಕ್ಷೇತ್ರದ ಅಂಗಳಕ್ಕೆ ಸಾಗಿಸಿದರು. ಅದೇ ...ತ್ತಿಗೆ ಬಂದ ಲೇಖಕ ಸರ್ಜಾ ಶಂಕರ್ ...ಮಠ ಕೂಡ ನಮ್ಮೊಂದಿಗೆ ಕೈಜೋಡಿಸಿ ... ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ನಮ್ಮ ...ಮುಲ್ಲಾಗಲಿ, ನಮ್ಮ ಬಳಗದಲ್ಲಾಗಲಿ ಸೀನಿಯರ್-...ನಿಯರ್ ಎಂಬ ಭೇದಭಾವವಿಲ್ಲದೆ ಎಲ್ಲರೂ ಒಂದು ...ಯರ ಗುಂಪಿನಂತೆ ಇರುವುದನ್ನು ಒಂದು ಸಣ್ಣ ...ಣದ ಮೂಲಕ ತೋರಿಸಲು.

...ಸ್ವಲ್ಪ ಹೊತ್ತಿನಲ್ಲೇ ನಮ್ಮ ಇತರೆ ಅತಿಥಿಗಳಾಗಿದ್ದ ಜಿ. ...ಶೇಖರ, ರಹಮತ್ ತರೀಕೆರೆ ಮತ್ತು ಬಂಜಗೆರೆ ...ಪ್ರಕಾಶ್ ಕೂಡ ಆಗಮಿಸಿದರು. ಆದರೆ ನಾಲ್ಕು ... ಹತ್ತಿರವಾಗುತ್ತಿದ್ದರೂ ಅಂದಿನ ಕಾರ್ಯಕ್ರಮದ ...ಕ್ಷತೆ ವಹಿಸಿದ್ದ ಬರಗೂರು ರಾಮಚಂದ್ರಪ್ಪ ಮತ್ತು ...ಖ್ಯ ಅತಿಥಿ ಅಬ್ದುಸ್ಸಲಾಂ ಪುತ್ತಿಗೆಯವರ ಸುಳಿವೇ ... ಪುತ್ತಿಗೆಯವರೇನೋ ಇನ್ನು ಕೆಲವೇ ಕ್ಷಣಗಳಲ್ಲಿ ...ಸುವುದಾಗಿ ಹೇಳಿದರು. ಆದರೆ ಬರಗೂರರಿಗೆ ಫೋನ್ ಮಾಡಿದರೆ ಅತ್ತಿನಿಂದ "ಯಾರೇ ಕೂಗಾಡಲಿ, ಊರೇ ಹೋರಾಡಲಿ" ಹಾಡು ನಿರಂತರವಾಗಿ ಕೇಳಿಸುತ್ತಿತ್ತೇ ಹೊರತು ಅವರು ನನ್ನ ಕರೆಗಳನ್ನೇ ಸ್ವೀಕರಿಸುತ್ತಿಲ್ಲ.

ಅಷ್ಟೊತ್ತಿಗಾಗಲೇ ನಾಲ್ಕು ಗಂಟೆ, ಐದು ನಿಮಿಷವಾಗಿತ್ತು. "ಅಧ್ಯಕ್ಷರೇ ಇಲ್ಲದೆ ಈಗೇನು ಮಾಡೋದು" ಎಂದು ಚಿಂತಿಸುತ್ತಿರುವಾಗಲೇ ಫೋನ್ ಮಾಡಿದ ಬರಗೂರು "ನಾನಾಗಲೇ ಕಲಾಕ್ಷೇತ್ರದ ಒಳಗೆ ಇದ್ದೇನೆ. ನನ್ನ ಮೊಬೈಲ್‌ಅನ್ನು ಸೈಲೆನ್ಸ್ ಮಾಡಿದ್ದರಿಂದ ಗೊತ್ತಾಗಲಿಲ್ಲ" ಎಂದಮೇಲೆ ನನ್ನ ನೆಮ್ಮದಿಗಂತೂ ಇನ್ನು ಭಂಗ ಇಲ್ಲ ಎಂದು ಯೋಚಿಸಿದೆ!

ಅಮ್ಮ (ಇಂದಿರಾ) ಅಂದು ಆರು ಪುಸ್ತಕಗಳನ್ನು ಸಾಂಕೇತಿಕವಾಗಿ ಬಿಡುಗಡೆ ಮಾಡಿದ ನಂತರ ಅತಿಥಿಗಳ ಭಾಷಣ. ತಮ್ಮ 'ಕರ್ಮಭೂಮಿ'ಯಾಗಿರುವ ಉಡುಪಿಯಿಂದ ಹೊರಬರಲು ಸದಾ ನಿರಾಕರಿಸುವ ಜಿ. ರಾಜಶೇಖರ ಅವರನ್ನು ಅದು ಹೇಗೋ ಒಪ್ಪಿಸಿ ಕರೆಸಿದ್ದೆ. ಅಪ್ಪನ 'ಟೀಕೆ-ಟಿಪ್ಪಣಿ ಸಂಪುಟ 3' ಪುಸ್ತಕ ಕುರಿತು ಮಾತನಾಡಿದ ಜಿ. ರಾಜಶೇಖರ ಪ್ರಸ್ತುತ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಮನಮಿಡಿಯುವಂತೆ ಮಾತನಾಡಿದರು. ಅವರ ನಂತರ 'ಸಾಹಿತಿ, ಸಾಹಿತ್ಯ, ವಿಮರ್ಶೆ' ಪುಸ್ತಕದ ಬಗ್ಗೆ ಮಾತನಾಡಿದ ರಹಮತ್ ತರೀಕೆರೆ ಕನ್ನಡ ಸಾಹಿತ್ಯವನ್ನು ಪ್ರವೇಶಿಸಲು ಆ ಪುಸ್ತಕ ಹೇಗೆ ನೆರವಾಗುತ್ತದೆ ಎಂದು ಮಾತನಾಡಿದರು. ಬಂಜಗೆರೆ ಜಯಪ್ರಕಾಶ್ ಲಂಕೇಶ್ ಮತ್ತು ಎಸ್.ಎಫ್. ಯೋಗಪ್ಪನವರು 'ರೂಪಕ ಲೇಖಕರನ್ನು' ಸಾಹಿತ್ಯಾಸಕ್ತರಿಗೆ ತೆರೆದಿಟ್ಟಿದ್ದಾರೆಂದು ಹೇಳಿದರು. ಅವರ ನಂತರ ಶಿವಸುಂದರ್‌ರವರು ಬರೆದಿರುವ 'ರೈತರ ಆತ್ಮ-ಹತ್ಯೆ' ಪುಸ್ತಕ ಕುರಿತು ಮಾತನಾಡಿದ ಅಬ್ದುಸ್ಸಲಾಂ ಪುತ್ತಿಗೆಯವರು ಸರ್ಕಾರಗಳ ಆರ್ಥಿಕ ನೀತಿಗಳನ್ನು ಖಂಡಿಸಿದರು.





ನಮ್ಮ ಇಡೀ ಕಾರ್ಯಕ್ರಮಕ್ಕೆ ಉತ್ತರ ಕರ್ನಾಟಕದ ಅಚ್ಚಕನ್ನಡದ ಸ್ಪರ್ಶ ನೀಡಿದವರು ಬಿರಾದಾರ್. ನಮ್ಮ ಸಂಸ್ಥೆಯ ಯಶಸ್ವಿ ಮಾಸಿಕವಾದ 'ಗೈಡ್' ಪತ್ರಿಕೆಯನ್ನು ಕುರಿತು ಮಾತನಾಡಿದ ಅವರು ಇತರೆ ಸ್ಪರ್ಧಾ ಪತ್ರಿಕೆಗಳಿಗಿಂತ 'ಗೈಡ್' ಹೇಗೆ ಭಿನ್ನ, ಹೇಗೆ ಅದೊಂದು ಸಮಾಜವಾದಿ ತಲೆಮಾರನ್ನೇ ಹುಟ್ಟುಹಾಕುತ್ತಿದೆ ಎಂದು ತಮ್ಮದೇ ಚೆಂದದ ಕನ್ನಡದ ಧಾಟಿಯಲ್ಲಿ ಮಾತನಾಡಿ ನಮ್ಮ ಬಳಗವನ್ನು ಪ್ರಶಂಶಿಸಿದರು.

ಬಿರಾದಾರ್ ನಂತರ ನನ್ನ ಸರದಿ. ಅಪ್ಪನಂತೆ ನನಗೂ ಭಾಷಣ ಮಾಡುವುದೆಂದರೆ ಅದೇನೋ ಒಂಥರ. ಹೇಳಬೇಕೆಂದಿರುವ ಹತ್ತಾರು ಅಂಶಗಳು ಹಿಂದುಮುಂದಾಗಿ ಗೊಂದಲವಾಗುತ್ತದೆ. ಒಂದೆರಡು ಅಂಶಗಳು ಭಾಷಣ ಮುಗಿದ ನಂತರ ನೆನಪಾಗುತ್ತವೆ. ಮಾತನ್ನಾಡುತ್ತಿರುವಾಗಲೇ ಅವು ಜನರಿಗೆ ತಾಕುತ್ತಿದೆಯೇ ಎಂಬ ಆತಂಕ ಮೂಡುತ್ತದೆ. ಎಲ್ಲಾ ಮುಗಿದ ಮೇಲೆ "ಛೆ, ಹೇಳಿದ್ದನ್ನೇ ಇನ್ನಷ್ಟು ಚೆಂದಾಗಿ, ಸ್ಪಷ್ಟವಾಗಿ, ನೇರವಾಗಿ ಹೇಳಬಹುದಿತ್ತಲ್ಲ" ಎಂದು ತಪ್ಪದೇ ಅನಿಸುತ್ತದೆ!

ಇದೆಲ್ಲದರೊಂದಿಗೆ ನಮ್ಮದೇ ಸಂಸ್ಥೆಯ ಕಾರ್ಯಕ್ರಮ ಅಂದರೆ ಅದೆಂಥದ್ದೋ ಚಡಪಡಿಕೆ! ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆಯಾ, ಯಾವುದೇ ಸಮಸ್ಯೆ ಇದೆಯಾ ಎಂಬೆಲ್ಲಾ ಚಿಂತನೆಗಳೊಂದಿಗೆ ಮೈಕ್ ಮುಂದೆ ನಿಂತು ಮಾತನಾಡಬೇಕಿರುವ ಅನಿವಾರ್ಯ ಅಗತ್ಯತೆ!

ಇದೆಲ್ಲ ಗೊಂದಲಗಳ ನಡುವೆ ಹೆಚ್ಚಿನ ಮಾಧ್ಯಮಗಳು ಇವತ್ತು ತಮ್ಮ ಜವಾಬ್ದಾರಿಯನ್ನು ಮರೆತು ವರ್ತಿಸುತ್ತಿರುವ ರೀತಿ, ಹೆಚ್ಚಾಗುತ್ತಿರುವ ಹಿಂದೂತ್ವವಾದಿಗಳ ಫ್ಯಾಸಿಸ್ಟ್ ಧೋರಣೆ, ಜನಪರವಾಗಿ ನಿಲ್ಲಬೇಕಿರುವ ನಮ್ಮ ಪತ್ರಿಕೆಯ ಹೊಣೆ ಇತ್ಯಾದಿಗಳ ಬಗ್ಗೆ ಮಾತನಾಡಿದೆ.

ಪ್ರೊ. ಬರಗೂರು ರಾಮಚಂದ್ರಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಇವತ್ತು ಸಿದ್ಧಾಂತರಹಿತ ರಾಜಕೀಯದಲ್ಲಿ ನಾಯಕರು ತೊಡಗಿರುವುದನ್ನು ಖಂಡಿಸಿದರಲ್ಲದೆ ಪ್ರಸ್ತುತ ಸಾಮಾಜಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ತಮ್ಮದೇ ಆದ ಶೈಲಿಯಲ್ಲಿ ಬಿಡಿಸಿದರು.

ಅಲ್ಲಿಗೆ ಅಂದಿನ ಕಾರ್ಯಕ್ರಮದ 'ಪುಸ್ತಕ ಸಂಭ್ರಮ' ಭಾಗ ಮುಕ್ತಾಯಗೊಂಡಿತ್ತು. ಇದಾದನಂತರ 'ಟಿಂಗ್ರ್ಯಾ' ಚಿತ್ರದ ನಿರ್ದೇಶಕ ಮಂಗೇಶ್ ಹಡಾವಲೆಗೆ 'ಲಂಕೇಶ್ ಚಿತ್ರ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಪ್ರಾರಂಭವಾಯಿತು. ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಪದಕವನ್ನು ನೀಡಿದರೆ, ಹಿರಿಯ ಬರಹಗಾರ್ತಿ ಡಾ. ವಿಜಯ ಪಾರಿತೋಷಕವನ್ನು ನೀಡಿ ಗೌರವಿಸಿದರು. 'ಟಿಂಗ್ರ್ಯಾ' ಚಿತ್ರದ ಕತೆ ರೈತರ ಆತ್ಮಹತ್ಯೆಯನ್ನು ಹಿನ್ನೆಲೆಯಾಗಿ ಹೊಂದಿರುವುದರಿಂದ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ರಾಜ್ಯ ರೈತರ ಪ್ರತಿನಿಧಿಯಾಗಿ ಚುಕ್ಕಿ ನಂಜುಂಡಸ್ವಾಮಿಯನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಅಂದಿನ ಕಾರ್ಯಕ್ರಮದ ಈ ಭಾಗದ ರೂವಾರಿ ನನ್ನ ತಂಗಿ ಬೇಬಿ (ಕವಿತಾ).

'ಟಿಂಗ್ರ್ಯಾ' ಚಿತ್ರಪ್ರದರ್ಶನ ಪ್ರಾರಂಭವಾಗುವ ಮುನ್ನ ಒಂದು ಚಿಕ್ಕ ಟೀ ಬ್ರೇಕ್. ಆ ಬ್ರೇಕ್ ಸಮಯದಲ್ಲೇ ಅಂದಿನ ಸಮಾರಂಭಕ್ಕೆ ಬಂದಿದ್ದ ಅದೆಷ್ಟೋ ಮಿತ್ರರನ್ನು ಭೇಟಿ ಆಗಲು ಸಾಧ್ಯವಾಗಿದ್ದು. ಅಪ್ಪನ ಸಹಪಾಠಿಯಾಗಿದ್ದ ಕೆಂಚಪ್ಪನವರು, ನಮ್ಮ ಎಚ್.ಎಲ್. ಕೇಶವಮೂರ್ತಿ, ಅಜ್ಜಂಪುರ ವೆಂಕಟೇಶ್, ಶಿವಮೊಗ್ಗದ ಶಶಿಕಲಾ, ತುಮಕೂರಿನ ಯೋಗೀಶ್ ಸೂರಪ್ಪ ಕೊಡಗಿನ ರಂಗಪ್ಪ ಕನಕಪುರದ ಎಂ.ಪಿ. ನಾಗರಾಜ್, ಕಲ್ಕೆರೆಯ ಕೆ.ಎಸ್. ದೀಪಕ್, ಮೈಸೂರಿನಿಂದ ಡಾ. ರವೀಂದ್ರ ಮತ್ತು ಬೆಂಗಳೂರಿನಿಂದ ಇನ್ನು ಅದೆಷ್ಟೋ ಸ್ನೇಹಿತರು, ಎಲ್ಲರೂ ಅಂದಿನ ಕಾರ್ಯಕ್ರಮಕ್ಕೆ ಬಂದಿದ್ದರು.


ಸಿನಿಮಾ ನೋಡಿದ ನಂತರ ಬಹಳಷ್ಟು ಜನ ಮಂಗೇಶ್ ಹಡಾವಲೆಯನ್ನು ಅಭಿನಂದಿಸಿದರಲ್ಲದೆ, ಅಂತಹ ಸಿನಿಮಾಗೆ ಪ್ರಶಸ್ತಿ ನೀಡಿ ಅದನ್ನು ಪ್ರದರ್ಶಿಸುವ ಮೂಲಕ ಎಲ್ಲರಿಗೂ ಅದನ್ನು ನೋಡುವ ಅವಕಾಶ ಮಾಡಿಕೊಟ್ಟದ್ದ ಬೇಬಿಯನ್ನು ಪ್ರಶಂಶಿಸಿದರು. ಅಷ್ಟೊತ್ತಿಗಾಗಲೇ ರಾತ್ರಿ 9 ಗಂಟೆ ಆಗಿತ್ತು.

ಕಾರ್ಯಕ್ರಮ ಮುಗಿದ ನಂತರ ನಮ್ಮ ಆಫೀಸಿನಲ್ಲೇ ಒಂದು ಪುಟ್ಟ ಔತಣಕೂಟ. ಮಂಗೇಶ್ ಕೂಡ ನಮ್ಮನ್ನು ಸೇರಿಕೊಂಡಿದ್ದರಿಂದ ಅವರ 'ಟಿಂಗ್ರ್ಯಾ' ಬಗ್ಗೆಯೇ ಮಾತುಕತೆ ಶುರುವಾಯಿತು. ಆ ಚಿತ್ರದಲ್ಲಿ ಅಸಹಾಯಕತೆಯ ಅಂಚಿಗೆ ದೂಡಲ್ಪಟ್ಟಿರುವ ರೈತನೊಬ್ಬ ಹೇಗೆ ಕೊನೆಗೆ ತನ್ನ ಭೂಮಿ, ಬದುಕು ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಮನೆಯಲ್ಲಿರುವ ಹಸುವೊಂದನ್ನು ಮಾರಲು ನಿರ್ಧರಿಸುತ್ತಾನೆ, ಆದರೆ ಆ ಹಸುವನ್ನು ತುಂಬಾ ಹಚ್ಚಿಕೊಂಡಿರುವ ಆ ರೈತನ ಮಗ ಟಿಂಗ್ರ್ಯಾ ಆ ನಿರ್ಧಾರವನ್ನು ವಿರೋಧಿಸುತ್ತಾನೆ ಎಂದು ತೋರಿಸಲಾಗಿದೆ.



















ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಈ ಚಿತ್ರದ ನಿರೂಪಣೆ ಸ್ವಲ್ಪ ಲಯ ತಪ್ಪಿದ್ದರೂ ಅದು 'ಗೋಮಾತೆ', 'ಗೋಹತ್ಯೆ ನಿಷೇಧ', 'ಮನುಷ್ಯರ ಜೀವಕ್ಕಿಂತ ಗೋವಿನ ಜೀವ ಮುಖ್ಯ' ಎಂಬಂತಹ ಹಿಂದೂತ್ವವಾದಿ 'ಸ್ಲೋಗನ್'ಗಳಿಗೆ ಬಲಿಯಾಗುವ ಅಪಾಯವಿತ್ತು. ಆದರೆ ಎಲ್ಲೂ ಧರ್ಮ ಅಥವಾ ಧರ್ಮಾಂಧತೆ ಮೂಡದಂತೆ, ಧಾರ್ಮಿಕ ಸೌಹಾರ್ದವೇ ಸಹಜವೆಂಬಂತೆ ಎಚ್ಚರ ವಹಿಸಿರುವ ಮಂಗೇಶ್ ಮಾನವೀಯ ಸಂಬಂಧಗಳನ್ನು ಎತ್ತಿಹಿಡಿಯುವಲ್ಲಿ ಸಫಲರಾಗಿದ್ದಾರೆ ಎಂಬುದು ಅಲ್ಲಿದ್ದವರ ಅಭಿಪ್ರಾಯವಾಗಿತ್ತು.

ಇದನ್ನು ಕೇಳಿ ಸ್ವತಃ ಮಂಗೇಶ್‌ಗೆ ಅಚ್ಚರಿಯಾಯಿತು. ಅವರೇ ಹೇಳಿದಂತೆ "ಇಲ್ಲಿಯವರೆಗೂ ನನ್ನ ಚಿತ್ರಕ್ಕೆ ವಿಭಿನ್ನ ರೀತಿಯ ಅಭಿಪ್ರಾಯಗಳು ವ್ಯಕ್ತ ಆಗಿವೆ. ಹೈಟೆಕ್ ವೃತ್ತಿಯಲ್ಲಿರುವವರು ಚಿತ್ರದಲ್ಲಿನ ಗ್ರಾಮೀಣ ಸೊಗಡನ್ನು ಮೆಚ್ಚಿಕೊಂಡಿದ್ದಾರೆ. ಬಹಳಷ್ಟು ಮಕ್ಕಳು ತಾವೂ ತಮ್ಮ ನಾಯಿಗಳನ್ನು ಟಿಂಗ್ರ್ಯಾ ತನ್ನ ಹಸುವನ್ನು ಪ್ರೀತಿಸುವಂತೆಯೇ ಪ್ರೀತಿಸುತ್ತೇವೆ ಎಂದಿದ್ದಾರೆ. ಇನ್ನು BMW ನಂತಹ ಐಷಾರಾಮಿ ಕಾರುಗಳಲ್ಲಿ ಬಂದವರು ತಾವೇ ಚಿತ್ರದ ರೈತನಿಗೆ ಧನಸಹಾಯ ಮಾಡಲು ಸಿದ್ಧ ಎಂದಿದ್ದಾರೆ. ಆದರೆ ಇದೇ ಪ್ರಥಮ ಬಾರಿ ನನ್ನ ಚಿತ್ರಕ್ಕೆ ರಾಜಕೀಯ ಪ್ರತಿಕ್ರಿಯೆ ವ್ಯಕ್ತವಾಗಿರುವುದು. ಇದನ್ನು ಕೇಳಿ ನನಗೆ ತುಂಬಾ ಸಂತೋಷವಾಗಿದೆಯಲ್ಲದೆ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ" ಎಂದರು.

ಅಂದಹಾಗೆ ಅಂದು ಬಿಡುಗಡೆಗೊಂಡ ಪುಸ್ತಕಗಳೆಲ್ಲ ಎಷ್ಟು ಬಿರುಸಿನಿಂದ ಮಾರಾಟವಾಗುತ್ತಿದೆ ಎಂದರೆ ಆಗಲೇ 'ರೈತರ ಆತ್ಮ-ಹತ್ಯೆ' ಪುಸ್ತಕದ ಪ್ರತಿಗಳು ಖಾಲಿಯಾಗಿ ಎರಡನೇ ಮುದ್ರಣಕ್ಕೆ ಹೋಗಿದೆ. ಹಾಗೆಯೇ ಅಪ್ಪನ 'ಟೀಕೆ-ಟಿಪ್ಪಣಿ ಸಂಪುಟ 3' ಬಹಳಷ್ಟು ಪುಸ್ತಕ ಮಳಿಗೆಗಳಲ್ಲಿ 'ನಂ. 1' ಸ್ಥಾನ ಪಡೆದಿದೆ.

ಅವತ್ತಿನ ಕಾರ್ಯಕ್ರಮಕ್ಕೆ ಬಂದು ಭಾಗವಹಿಸಬೇಕು ಎಂಬ ಆಶೆ ಬಹಳಷ್ಟು ಜನರಲ್ಲಿದ್ದರೂ ವಿವಿಧ ಕಾರಣಕ್ಕೆ ಸಾಧ್ಯವಾಗಲಿಲ್ಲ ಎಂದು ಫೋನ್ ಮಾಡಿದ್ದೀರಿ, ಎಸ್‌ಎಂಎಸ್‌ಗಳನ್ನು ಕಳುಹಿಸಿದ್ದೀರಿ, ಪತ್ರ ಬರೆದಿದ್ದೀರಿ. ಅದ್ದರಿಂದ ಅಂದಿನ ಸಮಾರಂಭ, ಸಂಭ್ರಮ, ಸಂತೃಪ್ತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಮತ್ತು ಅವತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇಷ್ಟನ್ನು ಇಲ್ಲಿ ಬಿಚ್ಚಿಟ್ಟಿದ್ದೇನೆ...

■ ಗೌರಿ ಲಂಕೇಶ್



...ಚಿತ್ರಗಳೊಂದಿಗೆ ಇಂದಿರಾ ಲಂಕೇಶ್



ಚುಕ್ಕಿ, ಮಂಗೇಶ್ ಹಡಾವಲೆ, ಕಾಸರವಳ್ಳಿ, ಡಾ.ವಿಜಯಾ, ಕವಿತಾ ಲಂಕೇಶ್, ದೀಪು, ಇಸ್ಮಾಯಿಲ್

ಹೊಸದಾಗಿ ಹುಟ್ಟಿಕೊಂಡ ದಾಸರಹಳ್ಳಿ ವಿಧಾನಸಭಾ ಕ್ಷೇತ್ರವನ್ನು ನಿರಾಯಾಸವಾಗಿ ನುಂಗಿಹಾಕುವ ಬಿಜೆಪಿ ತಂತ್ರಕ್ಕೆ ಕಾಂಗ್ರೆಸ್ಸೇ ನಿಂತು ಚಪ್ಪಾಳೆ ತಟ್ಟಿಬಿಟ್ಟರೆ ಹೇಗಿರುತ್ತೆ?


ಮರಿಯಮ್ಮ

ಕೆ.ಸಿ. ಅಶೋಕ್ ಎಂಬ ದಾಸರಹಳ್ಳಿ ನಗರಸಭೆಯ ಮಾಜಿ ಅಧ್ಯಕ್ಷನಿಗೇನಾದರೂ ಕಾಂಗ್ರೆಸ್ ಟಿಕೆಟ್ ಕೊಟ್ಟದ್ದೇ ಆದರೆ ಬಿಜೆಪಿ ನಾಯಕ ಆರ್. ಅಶೋಕ್ ತೋಡಿದ ಖೆಡ್ಡಾಕ್ಕೆ ಕಾಂಗ್ರೆಸ್ಸೇ ಬಂದು ಬಿದ್ದಂತಾಗುತ್ತದೆ ಮತ್ತು ಸ್ವತಃ ಅಶೋಕ್ ಸಹೋದರ ರವಿ ಬಿಜೆಪಿ ಅಭ್ಯರ್ಥಿಯಾಗಿ ಗೆದ್ದು ಎಮ್ಮೆಲ್ಲೇಯಾಗುವುದು ಶತಸ್ಸಿದ್ಧ!

ಇದು ಉತ್ತರಹಳ್ಳಿಯ ಕಾಂಗ್ರೆಸ್ ಕಾರ್ಯಕರ್ತರ ಆತಂಕವಷ್ಟೇ ಆಗಿದ್ದರೆ ಆ ಮಾತು ಬೇರೆ. ಅದು ಬಿಜೆಪಿಯ ಹುನ್ನಾರ ಕೂಡ. ನಿನ್ನೆಮೊನ್ನೆಯ ತನಕ ಉತ್ತರಹಳ್ಳಿ ಶಾಸಕ ಮತ್ತು ಮಾಜಿ ಆರೋಗ್ಯ ಮಂತ್ರಿ ಆರ್. ಅಶೋಕ್ ಆಸ್ಥಾನದ ಕಾಯಂ ವಿದೂಷಕನಂತಿದ್ದ ಕೆ.ಸಿ. ಅಶೋಕ್ ಎಂಬ ಲ್ಯಾಂಡ್ ಗ್ರಾಬರ್ ಕಂ ನಕಲಿ ಕಾಂಗ್ರೆಸ್ ಖದೀಮನಿಗೇ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಡಿಸುತ್ತೇನೆಂದು ಖರ್ಗೆ ಅಳಿಯ ರಾಧಾಕೃಷ್ಣ ಡೀಲು ಕುದುರಿಸಿದ್ದಾನೆಂಬುದು ಒಂದು ವದಂತಿಯಾದರೆ; ಮತ್ತೊಂದೆಡೆ ಐದು ಕೋಟಿ ಕೊಟ್ಟಾದರೂ ಕಾಂಗ್ರೆಸ್ ಟಿಕೆಟ್ ತರ್ತೀನಿ ಎಂದು ಸ್ವತಃ ಕೆ.ಸಿ. ಅಶೋಕ್ ಟಾಂಟಾಂ ಹಾಕುತ್ತಿದ್ದಾನೆ.

ದಾಸರಹಳ್ಳಿ
ವಿಧಾನಸಭಾ
ಕ್ಷೇತ್ರ

ದಾಸರಹಳ್ಳಿ ಇತ್ತೀಚೆಗಷ್ಟೇ ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಹುಟ್ಟಿಕೊಂಡ ಬೆಂಗಳೂರಿನ ಹೊಚ್ಚ ಹೊಸ ವಿಧಾನಸಭಾ ಕ್ಷೇತ್ರ. ಈ ಹಿಂದೆ ದಾಸರಹಳ್ಳಿ ನಗರಸಭೆಗಿದ್ದ 35 ವಾರ್ಡುಗಳ ಪೈಕಿ ಲಗ್ಗೆರೆ ಮತ್ತು ರಾಜರಾಜೇಶ್ವರಿನಗರದ ನಾಲ್ಕು ವಾರ್ಡುಗಳನ್ನು ಹೊರತುಪಡಿಸಿ ಚಿಕ್ಕಬಾಣಾವರ, ಕೆರೆಗುಡದಹಳ್ಳಿ, ಕಮ್ಮಗೊಂಡನಹಳ್ಳಿ, ಹೆಗ್ಗನಹಳ್ಳಿ, ದಾಸರಹಳ್ಳಿ, ನೆಲಗದರನಹಳ್ಳಿ, ಅಂಧ್ರಹಳ್ಳಿ, ಚೊಕ್ಕಸಂದ್ರ, ಲಗ್ಗೆರೆಯ ಕೆಲಭಾಗ ಮತ್ತು ಚಿಕ್ಕಸಂದ್ರ ಇತ್ಯಾದಿ 30 ವಾರ್ಡುಗಳ ಮೊತ್ತವೇ ದಾಸರಹಳ್ಳಿ ಕ್ಷೇತ್ರ. ನಿನ್ನೆಮೊನ್ನೆಯ ತನಕ ಉತ್ತರಹಳ್ಳಿಯ ಅವಿಭಾಜ್ಯ ಅಂಗವಾಗಿದ್ದ ದಾಸರಹಳ್ಳಿ ನಗರಸಭೆಗೆ ಒಂದಲ್ಲ ಎರಡು ಬಾರಿಗೆ ಅಧ್ಯಕ್ಷನಾಗಿದ್ದವನು ಕಾಂಗ್ರೆಸ್ ಖದೀಮ ಕೆ.ಸಿ. ಅಶೋಕ್.


ರಾಧಾಕೃಷ್ಣ


ಮೊದಲ ಬಾರಿಗೆ ಅಂದರೆ 1996 ರಲ್ಲಿ ಬಿಜೆಪಿ ನಾಯಕ ಆರ್. ಅಶೋಕ್ ಕಾಲಿಗೆ ಬಿದ್ದೇ ಸಿಎಂಸಿ ಅಧ್ಯಕ್ಷನಾದ ಕೆ.ಸಿ. ಅಶೋಕ್ ಶಾಸ್ತ್ರಕ್ಕಷ್ಟೇ ಹುಟ್ಟಾ ಕಾಂಗ್ರೆಸ್ಸಿಗನಾದರೂ ಒಳಗೊಳಗೇ ಆರ್. ಅಶೋಕ್‌ನ ನೆಚ್ಚಿನ ಬಂಟ. ಅದಕ್ಕೆ ಮುಖ್ಯ ಕಾರಣ ಆರ್. ಅಶೋಕ್‌ರ ಖಾಸಾ ತಮ್ಮ ರವಿಯ ಜೊತೆಗಿನ ಈತನ ಲ್ಯಾಂಡ್ ಡೀಲುಗಳು. ಜೊತೆಗೆ ಪಕ್ಕಾ ಆರೆಸ್ಸೆಸ್ ಧೂರ್ತ ಶೆಟ್ಟಳ್ಳಿ ಮುನಿರಾಜು ಜೊತೆಗೂ ಈತ ರಿಯಲ್ ಎಸ್ಟೇಟ್ ಪಾರ್ಟ್‌ನರ್. ಪೀಣ್ಯದ ಭಾರತಿ ಥೇಟರ್, ಅದರ ಪಕ್ಕದ ಕೆ.ಬಿ. ಕಲ್ಯಾಣಮಂಟಪ, ಚಿಕ್ಕ ಬಾಣಾವರದಲ್ಲಿ ತನ್ನದೇ ಹೆಸರಿನ ಮತ್ತೊಂದು ಥೇಟರು, ಹೆಸರುಘಟ್ಟದಲ್ಲಿ ಡಾಬಾ, ಕಮ್ಮಗೊಂಡನಹಳ್ಳಿಯಲ್ಲಿ ಮಿಲೇನಿಯಂ ಸ್ಕೂಲ್ ಹೆಸರಿನ ಇಂಗ್ಲಿಷ್ ಕಾನ್ವೆಂಟು, ಯಶವಂತಪುರದ ತ್ರಿವೇಣಿ ರಸ್ತೆಯಲ್ಲೊಂದು ಕಾಂಪ್ಲೆಕ್ಸ್, ಗಂಗಮ್ಮ ಸರ್ಕಲ್ಲಿನಲ್ಲಿ ಅದ್ದೂರಿಯ ಇನ್ನೂ ಮೂರು ಕಾಂಪ್ಲೆಕ್ಸುಗಳು, ನೆಲಮಂಗಲದ ಬೈಪಾಸ್ ರಸ್ತೆಯಲ್ಲಿ ಭಾರೀ ಎಸ್ಟೇಟ್, ಬಗಲಗುಂಟೆ ರಸ್ತೆಯಲ್ಲಿ ವಿಜಯಶ್ರೀ ಇಂಟರ್‌ನ್ಯಾಷನಲ್ ಸ್ಕೂಲ್, ಕಮ್ಮಗೊಂಡನಹಳ್ಳಿಯಲ್ಲಿ ಮತ್ತೊಂದು ಫಾರ್ಮ್‌ಹೌಸ್- ಹೀಗೆ ಕಮ್ಮಿಯೆಂದರೂ ಎಪ್ಪತ್ತು ಕೋಟಿಯ ಆಸ್ತಿವಂತನಾದ ಅಶೋಕ್ ಮೂಲತಃ ಕಮ್ಮಗೊಂಡನಹಳ್ಳಿಯ ಗಿತ್ತಪ್ಪನಾಯ್ಡು ಎಂಬ ಬಡ್ಡಿ ಗಿರಾಕಿಯ ಮಗ. ಹೇಗೋ ಸ್ಲಂ ರಮೇಶ್ ಪಟಾಲಮ್ಮಿಗೆ ಜಮೆಯಾದ ಅಶೋಕ್ 1996 ರಲ್ಲಿ ಕಮ್ಮಗೊಂಡನಹಳ್ಳಿ ವಾರ್ಡಿನಿಂದ ದಾಸರಹಳ್ಳಿ ಸಿಎಂಸಿ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತ. ತಮಾಷೆಯೆಂದರೆ ಈತನ ಥೇಟರಿನಲ್ಲಿ ಟಿಕೆಟ್ ಕೊಡುತ್ತಿದ್ದ ದೇವೇಗೌಡನೇ ಈತನ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದ!

ಮತ ಎಣಿಕೆಯಲ್ಲಿ ದೇವೇಗೌಡ ಒಂದು ಓಟಿನಿಂದ ಗೆದ್ದುಬಿಟ್ಟ. ಆದರೆ ಮರುಎಣಿಕೆಗೆ ಗಂಟುಬಿದ್ದು ಗಲಾಟೆಗಿಳಿದ ಅಶೋಕ್ ವ್ಯವಸ್ಥಿತವಾಗಿ ದೇವೇಗೌಡನ ಪರವಿದ್ದ ಎರಡು ಮತಪತ್ರಗಳನ್ನು ಶಿವನಹಳ್ಳಿ ಪುಟ್ಟಿ ಮತ್ತು ಡಾಬಾ ಸೀನರನ್ನು ಬಿಟ್ಟು ದಾಂಧಲೆ ಮಾಡಿಸಿ ನುಂಗಿಸಿಬಿಟ್ಟ. ಮೋಸ ಹೋದ ದೇವೇಗೌಡ ಅಶೋಕ್ ವಿರುದ್ಧ ಕ್ರಿಮಿನಲ್ ಕೇಸು ಹಾಕಿದ. ಎರಡು ಬ್ಯಾಲೆಟ್ ಪೇಪರ್ ನಾಪತ್ತೆ ಮಾಡಿದ್ದೂ ಇನ್ನೇನು ಕೋರ್ಟಿನಲ್ಲಿ ಸಾಬೀತಾಗಬೇಕೆನ್ನುವಷ್ಟರಲ್ಲಿ ಅಶೋಕ್ ದಾಸರಹಳ್ಳಿ ಸಿಎಂಸಿಗೆ ಅಧ್ಯಕ್ಷನಾಗಿದ್ದ. ಆ ಹೊತ್ತಿಗಾಗಲೇ ಬಿಜೆಪಿ ನಾಯಕ ಆರ್. ಅಶೋಕ್ ಉತ್ತರಹಳ್ಳಿಯ ಶಾಸಕನಾಗಿದ್ದನಲ್ಲ; ಕೆ.ಸಿ. ಅಶೋಕ್ ಸೀದಾ ಅಶೋಕ್ ಕಾಲಿಗೆ ಬಿದ್ದಿದ್ದೇ ತನ್ನ ವಿರುದ್ಧ ಬಿಜೆಪಿಯ ದೇವೇಗೌಡ ಹಾಕಿದ್ದ ಕೇಸನ್ನು ವಾಪಸ್ಸು ಪಡೆಯುವಂತೆ ನೋಡಿಕೊಂಡ.

ಬಿಜೆಪಿ ನಾಯಕ ಅಶೋಕ್ ಮತ್ತು ಕೆ.ಸಿ. ಅಶೋಕ್ ಮಧ್ಯೆ ಸಂಬಂಧ ಕುದುರಿದ್ದೇ ಈ ಕಾರಣಕ್ಕೆ. ತನ್ನನ್ನು ಬಚಾವು ಮಾಡಿದ ಆರ್. ಅಶೋಕ್ ಋಣ ತೀರಿಸುವುದಕ್ಕೆಂದೇ ಬಿಜೆಪಿಯ ಕುಂಟ ಕೃಷ್ಣಪ್ಪನನ್ನು ಕೆ.ಸಿ. ಅಶೋಕ್ ಸ್ಥಾಯಿ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದ. ಒಟ್ಟು 35 ಮಂದಿ ಕೌನ್ಸಿಲರ್‌ಗಳಿದ್ದ ದಾಸರಹಳ್ಳಿ ಸಿಎಂಸಿಯಲ್ಲಿ ಆಗಿನ್ನೂ 16 ಮಂದಿ ಕಾಂಗ್ರೆಸ್ ಕೌನ್ಸಿಲರ್‌ಗಳಿದ್ದರು. ಜೆಡಿಎಸ್‌ಗೆ 11 ಮಂದಿ ಕೌನ್ಸಿಲರ್‌ಗಳ ಒಲವಿತ್ತು. ಕೇವಲ ಎಂಟು ಕೌನ್ಸಿಲರ್‌ಗಳಿದ್ದ ಬಿಜೆಪಿಯ ಕೃಷ್ಣಪ್ಪ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದು ಪವಾಡವೇ ಆಗಿತ್ತಾದರೂ ಒಳಗಿಂದೊಳಗೇ ಕೆ.ಸಿ. ಅಶೋಕ್‌ನ ಕೈಚಳಕವಿತ್ತು!

ತನಗೆ ನಿಷ್ಠರಾಗಿದ್ದ ಆರು ಮಂದಿ ಕಾಂಗ್ರೆಸ್ ಕೌನ್ಸಿಲರ್‌ಗಳು ಮತ್ತು ಇಬ್ಬರು ಜೆಡಿಎಸ್ ಕೌನ್ಸಿಲರ್‌ಗಳ ಮೂಲಕ ಬಿಜೆಪಿಗೆ ಒಟ್ಟು 19 ಓಟು ಬೀಳುವಂತೆ ನೋಡಿಕೊಂಡಿದ್ದು ಇದೇ ಕೆ.ಸಿ. ಅಶೋಕ್.

ಮುಂದೆ 2001 ರ ಸಿಎಂಸಿ ಎಲೆಕ್ಷನ್ ಬಂತಲ್ಲ; ಈ ಬಾರಿ ಕಮ್ಮಗೊಂಡನಹಳ್ಳಿಯಲ್ಲೇ ನಿಂತರೆ ಠೇವಣಿ ಕೂಡ ಹುಟ್ಟುವುದಿಲ್ಲ ಎಂಬುದು ಆತನಿಗೆ ಗ್ಯಾರಂಟಿಯಾಗಿತ್ತು. ಏಕೆಂದರೆ ಈ ಹೊತ್ತಿಗಾಗಲೇ ಲೋಕಾಯುಕ್ತ ವೆಂಕಟಾಚಲ ದಾಸರಹಳ್ಳಿ ಸಿಎಂಸಿಗೆ ರೇಡು ಮಾಡಿ 30 ಕೋಟಿ ರೂಪಾಯಿಗಳ ಅಕ್ರಮವನ್ನು ಪತ್ತೆ ಮಾಡಿದ್ದರು. ಒಂದೆಡೆ ಲೋಕಾಯುಕ್ತ ದಾಳಿ ಮಾಡಿದ್ದರೆ ಇನ್ನೊಂದೆಡೆ ಅಧ್ಯಕ್ಷ ಅಶೋಕ್ ಸಿಎಂಸಿಯ ಕಾಂಟ್ರ್ಯಾಕ್ಟ್‌ಗೆ ಸಂಬಂಧಿಸಿದ್ದ ಸಿಎಂಸಿಯ ಎಲ್ಲಾ ದಾಖಲೆಗಳ ಫೈಲುಗಳನ್ನೊಯ್ದು ಸುಟ್ಟುಬಿಟ್ಟ. ಈ ಬಗ್ಗೆ ಅಶೋಕ್ ವಿರುದ್ಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸಾಯಿತಾದರೂ ಅದನ್ನು ಮುಚ್ಚಿ



ಕೆ.ಸಿ. ಅಶೋಕ್: ಬಿಜೆಪಿ ಏಜೆಂಟನಿಗೆ ಕಾಂಗ್ರೆಸ್ ಟಿಕೆಟ್ಟು?

ಟೆನ್ನಿಸ್ ತಾರೆ ಸಾನಿಯಾ ಮಿರ್ಜಾಳ ಅಶ್ಲೀಲ ಭಂಗಿಗಳುಳ್ಳ ಸೆಕ್ಸ್ ಸೀಡಿ ಎಂಬುದು ಉಂಟಾ? ಕೋಟಿ ಲೆಕ್ಕದಲ್ಲಿ ದುಡ್ಡು ಕೊಟ್ಟರೂ ಭಾರತದಲ್ಲಿ ಆಡಲೊಪ್ಪದ ಸಾನಿಯಾ ಹೋಗಿ ಹೋಗಿ ಬ್ಲೂಫಿಲ್ಮ್‌ನಲ್ಲಿ ನಟಿಸುವುದು ಎಲ್ಲಾದರೂ ಉಂಟಾ?

ನಂಬಿದರೆ ನಂಬಿ ಬಿಟ್ಟರೆ ಬಿಡಿ; ಸದ್ಯ ಬೆಂಗಳೂರಿನ ಅತೃಪ್ತ ಆತ್ಮಗಳ ವಲಯದಲ್ಲಿ ಸಾನಿಯಾ ಸೆಕ್ಸ್ ಸೀಡಿಯಂತೂ ಮಿಂಚಂತೆ ಸಂಚರಿಸುತ್ತಿದೆ. ಒಂದು ಸೀಡಿಗೆ ಮುನ್ನೂರು ರೂಪಾಯಿ. ಇಲ್ಲಿಗೆ ವಾರದ ಹಿಂದೆ ಮೆಜೆಸ್ಟಿಕ್‌ನ ನ್ಯಾಷನಲ್ ಮಾರ್ಕೆಟ್ಟಿನ ಅಮಿತ್ ವೀಡಿಯೋ ಎಂಬ ಸೆಕ್ಸ್ ಸೀಡಿ ಅಡ್ಡೆಯ ಮುಂದೆ ಸೀಡಿಗೆಂದೇ ತಮಿಳಿನಲ್ಲಿ ಶೀರ್ಷಿಕೆಯುಳ್ಳ ಹೊದಿಕೆಯಿದೆ. ಆದರಲ್ಲಿ ಯುವತಿಯೊಬ್ಬಳು ಅರೆನಗ್ನಳಾಗಿ ಸ್ನಾನ ಮಾಡುವ ಚಿತ್ರವಿದೆ. ಯಾವುದೋ ಕೋನದಿಂದಷ್ಟೇ ಸಾನಿಯಾಳನ್ನು ಹೋಲುವ ಸದರಿ ಮಾಡೆಲ್ ಹುಡುಗಿಯ ಮುಖದಲ್ಲಿ ಸಾನಿಯಾಳನ್ನು ಕಷ್ಟಪಟ್ಟು ಹುಡುಕಬೇಕಷ್ಟೇ!

ಒಂದು
ಸೀಡಿಗೆ ಐನೂರ್
ರೂಪಾಯ್!

ತಮಾಷೆಯೆಂದರೆ ಬೆಂಗಳೂರಿನ ವಿಕೃತ ವರ್ಗವೊಂದು ಇದನ್ನೇ ಸಾನಿಯಾ ಸೆಕ್ಸ್ ಸೀಡಿಯೆಂದು ಇವತ್ತಿಗೂ ನಂಬುತ್ತಿದೆ. ಕೇವಲ ಸಾನಿಯಾ ದೃಶ್ಯವಿದೆ. ಬುದ್ಧಿ ನೆಟ್ಟಗಿರುವ ಯಾರಿಗಾದರೂ ಒಂದೇ ನೋಟಕ್ಕದು ಬಿಪಾಷಾಳ ತದ್ರೂಪಿಯ ಸೆಕ್ಸ್ ಸೀಡಿಯೆಂಬುದು ಗೊತ್ತಾಗಿಬಿಡುತ್ತದೆ.

ಹಾಗಂತ ಸೆಕ್ಸ್ ಸಿಡಿ ಹುಚ್ಚರ ಭ್ರಮೆ ಕಳಚಬೇಕಲ್ಲ; ಅವರಿಗೆ ಈಕೆ ನಕಲಿ ಸಾನಿಯಾ, ಬಂಡಲ್ ಬಿಪಾಷಾ ಬಸು ಎಂದು ಗೊತ್ತಾದರೂ ಅದನ್ನು ಒಪ್ಪಿಕೊಳ್ಳುವ ಮನಸ್ಸಿಲ್ಲ. ತದ್ರೂಪಿಯನ್ನೇ ನೋಡಿ ಆಕೆಯಲ್ಲೇ ಸಾನಿಯಾ, ಬಿಪಾಷಾಳನ್ನು ಕಲ್ಪಿಸಿಕೊಳ್ಳುವ ವಿಕೃತಿಯದು. ಸಾನಿಯಾಳಂಥ ಸ್ಟಾರ್ ಒಬ್ಬಾಕೆ ಬ್ಲೂಫಿಲ್ಮ್‌ನಲ್ಲಿ ಪಾತ್ರ


ಸಾನಿಯಾ ಸೆಕ್ಸ್ ಸೀಡಿ?

ನೆರೆದ ಪುಂಡರ ಗುಂಪಿತ್ತಲ್ಲ; ಅದು ರಾಜ್ಯಪಾಲರ ಜನತಾದರ್ಶನವನ್ನೇ ನಾಚಿಸುವಂತಿತ್ತು. ಅವತ್ತು ಸಾನಿಯಾ ಸೀಡಿಯೊಂದಕ್ಕೆ ಕೆಲವರು ಐನೂರು ರೂಪಾಯಿ ತೆತ್ತು ಬ್ಲಾಕ್‌ನಲ್ಲಿ ಕೊಂಡಿದ್ದೇನು? ಮೆಜೆಸ್ಟಿಕ್ ಫುಟ್‌ಪಾತ್‌ಗಳಲ್ಲಿ ಸಿನಿಮಾ ಟಿಕೆಟ್ಟುಗಳನ್ನು ಕಾಳಸಂತೆಯಲ್ಲಿ ಕೂಗಿ ಮಾರುವಂತೆ ಸಾನಿಯಾ ಸೀಡಿಗಳನ್ನು ಕದ್ದೂ ಮುಚ್ಚಿ ಮಾರಿದ್ದೇನು? ಒಂದಾ.. ಎರಡಾ?

ನಿಜಕ್ಕೂ ಟೆನ್ನಿಸ್ ಸೆನ್ಸೇಷನ್ ಸಾನಿಯಾಳ ಸೆಕ್ಸ್ ಸೀಡಿ ಎಂಬುದು ಉಂಟಾ?

ಈ ಪ್ರಶ್ನೆಗೆ ಉತ್ತರ ಸೋಕಾಲ್ಡ್ ಸೆಕ್ಸ್ ಸೀಡಿಯಲ್ಲೇ ಇದೆ. ಈ ವರದಿಗಾರನಿಗೆ ಸಿಕ್ಕ ಸೀಡಿಯಲ್ಲಿ ಥೇಟು ಸಾನಿಯಾಳನ್ನೇ ಹೋಲುವ ಯುವತಿಯೊಬ್ಬಳು ವಿದೇಶಿ ಯುವಕನೊಬ್ಬನ ಜೊತೆ ಕಾಮಕೇಳಿ ನಡೆಸುವ ದೃಶ್ಯಾವಳಿಯಿದೆ ನಿಜ. ಆದರೆ ಅವಳು ಟೆನ್ನಿಸ್ ತಾರೆ ಸಾನಿಯಾ ಅಲ್ಲ, ಹೆಚ್ಚೆಂದರೆ ಸಾನಿಯಾಳ ಅಕ್ಕನಂತೆಯೋ ಅಥವಾ ಚಿಕ್ಕಮ್ಮ ನಂತೆಯೋ ಕಾಣುತ್ತಾಳೆ.

ಮಾತ್ರವೇ ಅಲ್ಲ ಹಿಂದಿನಟಿ ಬಿಪಾಷಾ ಬಸು ಸೆಕ್ಸ್ ಸೀಡಿಗೂ ಅಷ್ಟೇ ಡಿಮ್ಯಾಂಡಿದೆ. ಥೇಟು ಬಿಪಾಷಾಳಂತೆಯೇ ಕಾಣುವ ಯುವತಿಯೊಬ್ಬಳ ನಗ್ನಚಿತ್ರವುಳ್ಳ ರಕ್ಷಾ ಕವರ್ ಹೊತ್ತ ಸೆಕ್ಸ್ ಸೀಡಿಯೊಂದಕ್ಕೆ ಸದ್ಯ ನ್ಯಾಷನಲ್ ಮಾರ್ಕೆಟ್ ಮತ್ತು ಬರ್ಮಾ ಬಜಾರ್‌ಗಳಲ್ಲಿ ಇನ್ನೂರು ರೂಪಾಯಿಯ ರೇಟಿದೆ. ಇದರಲ್ಲೂ ವಿದೇಶಿ ದಾಂಡಿಗನೊಬ್ಬನ ಜೊತೆ ಸುಂದರಿಯೊಬ್ಬಳ ಚಕ್ಕಂದದ


ಸಾನಿಯಾ ಮತ್ತು ಬಿಪಾಷಾಳನ್ನು ಹೋಲುವ ಹುಡುಗಿಯರು

ವಹಿಸುತ್ತಾಳೆಂದರೆ ಒಂದೋ ಆಕೆಗೆ ಹುಚ್ಚು ಹಿಡಿದಿರಬೇಕು ಅಥವಾ ದುಡ್ಡೂಕಾಸಿನ ದಾರಿದ್ರ್ಯವಿರಬೇಕು. ಸಾನಿಯಾ ನಟಿಸುತ್ತಾಳೆಂದರೆ ಹಿಂದಿ ಸಿನಿಮಾ ನಿರ್ಮಾಪಕರೇ ಕೋಟಿ ಲೆಕ್ಕದಲ್ಲಿ ಕಾಸು ಬಿಚ್ಚುತ್ತಾರೆ. ಅದೆಷ್ಟೇ ದುಡ್ಡು ಕೊಟ್ಟರೂ ಆಕೆ ಮೊನ್ನೆ ನಡೆದ ಬೆಂಗಳೂರು ಓಪನ್ ಟೆನ್ನಿಸ್ ಟೂರ್ನಿಗೆ ಬಂದು ಆಡಲೊಪ್ಪದೇ ಹೋಗಿರುವಾಗ ಯಾರೋ ಖದೀಮನೊಬ್ಬನ ಚಿಲ್ಲರೆ ಕಾಸಿಗೆ ಕೈಚಾಚಿ ಏಕೆ ಆ ಮಟ್ಟಕ್ಕಿಳಿಯುತ್ತಾಳೆ? ಇದು ಕಾಮನ್ ಸೆನ್ಸ್.

ಸೆಕ್ಸ್ ಸೀಡಿ, ಬ್ಲೂಫಿಲ್ಮ್ ದಂಧೆಯೆಂದರೆ ಕಾನೂನುಬದ್ಧವಾಗಿ ಸಿನಿಮಾ ತೆಗೆದು ಸೆನ್ಸಾರ್ ಮಾಡಿಸಿ ಥೇಟರುಗಳಿಗೆ ಬಿಟ್ಟು ದುಡ್ಡು ಎಣಿಸಿಕೊಳ್ಳುವ ವ್ಯವಹಾರವಲ್ಲ, ಅದೊಂದು ಪರಮಪಾಪದ ಕಳ್ಳ ದಂಧೆ. ನಟಿಗೋ ಅಥವಾ ಜನಪ್ರಿಯ ಮಾಡೆಲ್ ಒಬ್ಬಳಿಗೋ ಕೋಟಿಗಟ್ಟಲೇ ದುಡ್ಡು ಸುರಿದು ಆಕೆಯ ಬ್ಲೂಫಿಲ್ಮ್ ತೆಗೆದು ಅದರ ಲಕ್ಷಾಂತರ ಸೀಡಿಗಳನ್ನು ಮಾಡಿ ಬರ್ಮಾ ಬಜಾರಿಗೋ, ನ್ಯಾಷನಲ್ ಮಾರ್ಕೆಟ್ಟಿಗೋ ಕೊಟ್ಟು ಮಾರುವಂತಿಲ್ಲ, ಗೊತ್ತಾದರೆ ಪೊಲೀಸರೇ ಹಿಡಿದು ಜೈಲಿಗೆ ದಬ್ಬುತ್ತಾರೆ. ಸೆಕ್ಸ್ ಸೀಡಿಯಲ್ಲಿ ಭಾಗವಹಿಸಿದ ಪುರುಷ-ಸ್ತ್ರೀ ಪಾತ್ರಧಾರಿಗಳನ್ನೂ ಜೈಲಿಗೆ ಹಾಕುತ್ತಾರೆ. ಹಾಗೊಮ್ಮೆ ಕದ್ದುಮುಚ್ಚಿ ಸೆಕ್ಸ್ ಸೀಡಿಗಳನ್ನು ಮಾರುಕಟ್ಟೆಗೆ ಬಿಟ್ಟರೂ ಅಂಥ ಒಂದೇ ಒಂದು ಸೀಡಿ ಸಿಕ್ಕರೂ ಇನ್ನಾರೋ ದಗಾಕೋರನೊಬ್ಬ ಅದರ ಸಹಸ್ರಾರು ನಕಲಿ ಸೀಡಿಗಳನ್ನು ಸೃಷ್ಟಿಸಿ ಮಾರುಕೊಳ್ಳುತ್ತಾನೆ.

ತನ್ನ ಸೆಕ್ಸ್ ಸೀಡಿಗಳನ್ನು ನಕಲು ಮಾಡಿ ಮಾರಿಕೊಂಡವನ ವಿರುದ್ಧ ಮೂಲ ಸೆಕ್ಸ್ ಸೀಡಿಯ ಸೃಷ್ಟಿಕರ್ತನಾದವನು ಪೊಲೀಸರಿಗೆ ದೂರು ಕೊಡುವಂತಿಲ್ಲ, ಕೊಟ್ಟರೆ ಮೊದಲು ಆತನನ್ನೇ ಹಿಡಿದು ಜೈಲಿಗೆ ಹಾಕುತ್ತಾರೆ. ಇಷ್ಟೆಲ್ಲಾ ರಿಸ್ಕ್ ತೆಗೆದುಕೊಂಡು ಪುಡಿ ಲಾಭಕ್ಕಾಗಿ ಅಪಾಯಕಾರಿ ಕೆಲಸಕ್ಕೆ ಕೈಹಾಕುವ ತಾಕತ್ತಾದರೂ ಯಾರಿಗಿದೆ? ನಿಜಕ್ಕೂ ಸೆಕ್ಸ್ ಸೀಡಿ ದಂಧೆಯೇ ಲಾಭವಿಲ್ಲದ, ಕಾನೂನುಬಾಹಿರವಾದ ಶಿಕ್ಷಾರ್ಹ ಅಪರಾಧ.


ಇಂಥದ್ದರಲ್ಲಿ ಸಾನಿಯಾ ಮಿರ್ಜಾಳ ಸೆಕ್ಸ್ ಸೀಡಿಯೋ, ಬಿಪಾಷಾ ಬಸು, ಶ್ರೀದೇವಿ, ಕರೀನಾ ಕಪೂರ್‌ಳಂಥ ನಟಿಮಣಿಯರ ಸೆಕ್ಸ್ ಸೀಡಿಯೋ ಇದೆಯೆಂದರೆ ಒಂದೋ ಅದು ಪವಾಡವಾಗಿರಬೇಕು ಅಥವಾ ಮೋಸವಾಗಿರಬೇಕು.

ಇದು ಗೊತ್ತಿದ್ದೂ ಸೆಕ್ಸ್ ಸೀಡಿ ಅಡ್ಡೆಗಳ ಮುಂದೆ ಕುರಿಮಂದೆಯಂತೆ ಸಾಲುಗಟ್ಟಿ ನಿಲ್ಲುವವರ ಮನಸ್ಥಿತಿಯೇ ವಿಚಿತ್ರ. ಈ ಪೈಕಿ ಬಹುತೇಕರು ನಲವತ್ತೈದರ ವಯಸ್ಸಿನಾಚೆಯ ಅತೃಪ್ತ ಅನುಕೂಲಸ್ಥರು. ಹೆಚ್ಚಿನವರು ಈ ಹಿಂದೆ ಕಾಯಮ್ಮಾಗಿ ಲೈವ್‌ಬ್ಯಾಂಡ್ ಗಿರಾಕಿಗಳಾಗಿದ್ದ ಮಾರ್ವಾಡಿಗಳು. ಜೊತೆಗೆ 'ದೇವರ ಚಿತ್ರಗಳ' ಫಲಾನುಭವಿಗಳೂ ಸೆಕ್ಸ್ ಸೀಡಿಯ ಕಾಯಂ ಗಿರಾಕಿಗಳು. ಮೆಜೆಸ್ಟಿಕ್‌ನ ನ್ಯಾಷನಲ್ ಮಾರ್ಕೆಟ್, ಬರ್ಮಾ ಬಜಾರ್, ಹಾಂಕಾಂಗ್ ಬಜಾರ್ ಮತ್ತು ಸುಖಸಾಗರ್ ಮಾಲ್‌ನ ಅಸಂಖ್ಯಾತ ಸೆಕ್ಸ್ ಸೀಡಿ ಅಂಗಡಿಗಳೇ ಇದರ ಅನಧಿಕೃತ ಮಾರುಕಟ್ಟೆ. ಅದೆಷ್ಟು ವ್ಯವಸ್ಥಿತವಾಗಿ ಮತ್ತು ರಹಸ್ಯವಾಗಿ ಇಂಥ ಸೀಡಿಗಳ ಮಾರಾಟ ನಡೆಯುತ್ತದೆಯೆಂದರೆ ಆಯಾ ಸೆಕ್ಸ್ ಸೀಡಿ ಅಡ್ಡೆಕೋರರ ಬಳಿ ತನ್ನ ಕಾಯಂ ಗಿರಾಕಿಗಳ ಫೋನು, ಮೊಬೈಲ್ ನಂಬರಿರುತ್ತದೆ. ಸುಮ್ಮನೇ ಫೋನ್ ಮಾಡಿಬಿಟ್ಟರೆ ಸಾಕು ಒಬ್ಬನೇ ಹತ್ತಾರು ಸೀಡಿಗಳನ್ನೊಯ್ದು ತನ್ನ ಸಮಾನಮನಸ್ಕರಿಗೆ

...ಶಾಸಕ ಎಂಎಲ್‌ಎ ಅಶೋಕ್‌ರ ಶಿರಶ್ಚೇಯಿತ್ತು!
...ನೇ ಬಾರಿಗೆ ದಾಸರಹಳ್ಳಿಯ ಅಯ್ಯಪ್ಪಸ್ವಾಮಿ
...ದ ವಾರ್ಡಿಗೆ ನಿಂತು ಕೇವಲ ನಾನೂರು
...ಮತ್ತು, ಓಟು ಗಿಟ್ಟಿಸಿದ
...ಗೆದ್ದಿದ್ದು ಕೇವಲ
...ತು ಮತಗಳ ಅಂತರದಿಂದ.
...ಇಬ್ಬರು ಪಕ್ಷೇತರರನ್ನು
...ದಂತ ಕಾಂಗ್ರೆಸ್‌ಗೆ ಒಟ್ಟೂ
...ನ್ಸಿಲರ್‌ಗಳ ನಿಲವಿತ್ತು.
...ನಿಂದ ಒಂಭತ್ತು ಮಂದಿ
...ಬಿಜೆಪಿ ಕೇವಲ ಆರರಲ್ಲಿ
... ಎರಡನೇ ಬಾರಿಯೂ
...ಸಿಎಂಸಿ ಅಧ್ಯಕ್ಷನಾದ ಕೆ.ಸಿ.
... ಈ ಬಾರಿ ತನ್ನ ಇಬ್ಬರು
...ಗಳು ಸೇರಿದಂತೆ ಒಟ್ಟು
...ಮಂದಿ ಚೇಲಾಗಳನ್ನು
... ಮಾಡಿದ್ದ. ಪಕ್ಷದ ವರಿಷ್ಠರ
... ಅಧ್ಯಕ್ಷಗಾದಿಯನ್ನು ತಲಾ
...ಗಳ ಲೆಕ್ಕದಲ್ಲಿ ಲಗ್ಗೆರೆ
...ರ್ ಶಿವಣ್ಣನ ಜೊತೆ
...ಳ್ಳುತ್ತೇನೆಂದು ಮೊದಲೇ ಲಿಖಿತವಾಗಿ
...ಕ್ಕೂ ಸಹಿ ಹಾಕಿದ್ದ.

...ರೆ ಪೂರ್ತಿ ಎರಡೂವರೆ ವರ್ಷವನ್ನು
...ನೇ ಅಧ್ಯಕ್ಷನಾಗಿ ಅನುಭವಿಸಿದ ಅಶೋಕ್
... ಅಧ್ಯಕ್ಷಗಿರಿ ತನ್ನ ಕೈತಪ್ಪಿ ಮತ್ತೊಬ್ಬ ಕಾಂಗ್ರೆಸ್
... ಪಾಲಾಗುತ್ತದೆ ಎನ್ನುವಾಗ ತನ್ನವರನ್ನೇ
...ಅಧ್ಯಕ್ಷಗಾದಿ ಈ ಬಾರಿ ಮಹಿಳೆಯರಿಗೆ
...ಂದು ನ್ಯಾಯಾಲಯದಿಂದ ತಡೆ ತಂದ. ಅಲ್ಲಿಗೆ
... ವರ್ಷ ದಾಸರಹಳ್ಳಿ ಸಿಎಂಸಿಗೆ ಅಧ್ಯಕ್ಷರೇ
...ದಂತಾಯ್ತು. ಕೊನೆಗೆ ಮಹಿಳೆಯೇ
...ಾಗಬೇಕೆಂದು ಕೋರ್ಟ್ ಆದೇಶ ಕೊಟ್ಟ
...ದರೂ ಕಾಂಗ್ರೆಸ್ಸಿನ ಮಹಿಳಾ ಕೌನ್ಸಿಲರ್ ಒಬ್ಬರನ್ನು
...ನ್ನಾಗಿಸಬೇಕಿತ್ತಲ್ಲವೆ?

... ಹೊರತಾಗಿ ಕಾಂಗ್ರೆಸ್ಸಿನ ಬೇರಾರೂ ಬೆಳೆಯಲೇ
...ಬಾರದು ಅಶೋಕ್‌ನ ದುರ್ಬುದ್ಧಿ. ಹೇಗೂ
...ಸಂಬಂಧಿಗಳಾದ ಗೋಪಮ್ಮ ನರಸಿಂಹಮೂರ್ತಿ
... ಡಿ.ಎಂ. ವೆಂಕಟೇಶರನ್ನು ಕೌನ್ಸಿಲರ್‌ಗಳಾಗಿ
...ಲ್ಲದೇ ವರಲಕ್ಷ್ಮಿ, ಚಂದ್ರಪಾನ್ಸಿಸ್, ಶ್ರೀನಿವಾಸ್
...ಜಯಂತಿಯಂಥ ಚೇಲಾಗಳನ್ನೂ ಗೆಲ್ಲಿಸಿದ್ದನಲ್ಲ;



ಇನ್ನೇನು ಅಧ್ಯಕ್ಷ ಚುನಾವಣೆ ಹತ್ತಿರಾಗುತ್ತಿದ್ದಂತೆ ಇವರೆಲ್ಲರನ್ನೂ ಅಶೋಕನೇ ನಿಂತು ನಾಪತ್ತೆ ಮಾಡಿಸಿಬಿಟ್ಟ. ಹತ್ತೊಂಭತ್ತು ಮಂದಿ ಕೌನ್ಸಿಲರ್‌ಗಳಿದ್ದಾಗ್ಯೂ ಹನ್ನೊಂದು ಮಂದಿಯಿದ್ದ ಜೆಡಿಎಸ್‌ನ ಲಲಿತಾ ತಿಮ್ಮನಂಜಯ್ಯ ಅಧ್ಯಕ್ಷರಾದರು. ಕೇವಲ 6 ಮಂದಿಯಿದ್ದ ಬಿಜೆಪಿಯ ಸೌಂದರ್ಯ ರಮೇಶ್ ಉಪಾಧ್ಯಕ್ಷೆಯಾದರು.


ಕಾಂಗ್ರೆಸ್ಸಿಗೆ ಇದಕ್ಕಿಂತ ದ್ರೋಹವುಂಟೆ? ಜೆಡಿಎಸ್‌ನ ಲಲಿತಾ ತಿಮ್ಮನಂಜಯ್ಯರಿಂದ 25 ಲಕ್ಷ ಮತ್ತು ಬಿಜೆಪಿಯ ಆರ್. ಅಶೋಕ್‌ರಿಂದ 20 ಲಕ್ಷದಂತೆ ಒಟ್ಟು 45 ಲಕ್ಷ ಕಿತ್ತಿದ್ದ ಕೆ.ಸಿ. ಅಶೋಕ್ ತನ್ನದೇ ಕಾಂಗ್ರೆಸ್ಸಿನ ಮರಿಯಮ್ಮ ರಾಜಣ್ಣ ಅಧ್ಯಕ್ಷೆಯಾಗುವುದನ್ನು ತಪ್ಪಿಸಿಬಿಟ್ಟ. ಸಾಲದ್ದಕ್ಕೆ ಮರಿಯಮ್ಮ ರಾಜಣ್ಣರಿಂದಲೂ ಲಕ್ಷಗಟ್ಟಲೇ ದುಡ್ಡು ಕಿತ್ತಿದ್ದ. ಇದಕ್ಕೆಂದು ದಾಸರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಷೀರ್‌ನನ್ನೂ ಶಾಮೀಲು ಮಾಡಿಕೊಂಡಿದ್ದ. ಮರಿಯಮ್ಮ ರಾಜಣ್ಣರ ಪರವಾಗಿ ವಿಪ್ ಕೊಟ್ಟಾಗಲೂ ಅದನ್ನು ಉಲ್ಲಂಘಿಸಿ ನಾಪತ್ತೆಯಾದ ಆರು ಮಂದಿ ಕೆ.ಸಿ. ಅಶೋಕ್ ಚೇಲಾ ಕೌನ್ಸಿಲರ್‌ಗಳನ್ನು ಪಕ್ಷದಿಂದ ಸಸ್ಪೆಂಡ್ ಮಾಡಬೇಕಾಗಿತ್ತು.

ಆದರೆ ಅಧ್ಯಕ್ಷಗಾದಿಯನ್ನೇ ಜೆಡಿಎಸ್ ಮತ್ತು ಬಿಜೆಪಿಗೆ ಮಾರಿಕೊಂಡಿದ್ದ ಕೆ.ಸಿ. ಅಶೋಕ್ ದ್ರೋಹವೆಸಗಿದ ಆರೂ ಮಂದಿ ಕೌನ್ಸಿಲರ್‌ಗಳ ಪರನಿಂತು ಅವರ ಮೇಲೆ ಏನೇನೂ ಕ್ರಮ ಜರುಗದ ಹಾಗೇ ನೋಡಿಕೊಂಡ.

ಇದು ಕೆ.ಸಿ. ಅಶೋಕ್‌ನ ಕಾಂಗ್ರೆಸ್ ನಿಷ್ಠೆಗೆ ಒಂದು ಸ್ಯಾಂಪಲ್ ಮಾತ್ರ. 2005 ರ ಏಪ್ರಿಲ್ 13 ರಂದು ನಡೆದ ದಾಸರಹಳ್ಳಿ ನಗರಸಭೆಯ ಬಜೆಟ್ ಅಧಿವೇಶನದಲ್ಲಿ ಜಿಲ್ಲಾಧಿಕಾರಿಯ ಗೈರುಹಾಜರಿಯಲ್ಲಿ ಕೌನ್ಸಿಲರ್ ಒಬ್ಬರು ಹಂಗಾಮಿ ಅಧ್ಯಕ್ಷತೆ ವಹಿಸಬೇಕಾದಾಗ ಇದೇ ಕೆ.ಸಿ. ಅಶೋಕ್ ಅಧ್ಯಕ್ಷತೆಗೆ ಸೂಚಿಸಿದ್ದು ಜೆಡಿಎಸ್‌ನ ತಿಮ್ಮಕ್ಕ ನಾರಾಯಣಸ್ವಾಮಿಯ ಹೆಸರನ್ನು!

ಕಾಂಗ್ರೆಸ್ಸಿನಲ್ಲೇ ಆರು ಮಂದಿ ಮಹಿಳಾ ಕೌನ್ಸಿಲರ್‌ಗಳಿದ್ದಾಗ್ಯೂ ಜೆಡಿಎಸ್‌ನವರ ಹೆಸರನ್ನು ಕೆ.ಸಿ. ಅಶೋಕ್ ಸೂಚಿಸಿದ್ದಕ್ಕೆ, ಸಿಎಂಸಿಯ ಬಜೆಟ್ ದಾಖಲೆಯೇ ಸಾಕ್ಷಿಯಂತಿದೆ. ಚಿಕ್ಕ ಬಾಣಾವರದಲ್ಲಿ ತನ್ನದೇ ಹೆಸರಿನ ಥೇಟರ್ ಕಟ್ಟಿ ಅದರ ಉದ್ಘಾಟನೆಗೆಂದು ಬಿಜೆಪಿ ನಾಯಕ ಅಶೋಕ್‌ನನ್ನು ಕರೆಸುತ್ತಾನೆ. ತನ್ನ ಕಮ್ಮಗೊಂಡನಹಳ್ಳಿಯ ಮಿಲೇನಿಯಂ ಸ್ಕೂಲ್‌ನ ಕಾರ್ಯಕ್ರಮಕ್ಕೆ ಕಾಟಾಚಾರಕ್ಕೂ ಕಾಂಗ್ರೆಸ್ ನಾಯಕ ಸೋಮಶೇಖರ್‌ರನ್ನಾಗಲಿ, ಸಂಸದೆ ತೇಜಸ್ವಿನಿಯನ್ನಾಗಲಿ ಕರೆಸದೇ ತನ್ನ ವಿರೋಧಿ ಬಿಜೆಪಿಯ ಆರ್. ಅಶೋಕ್‌ರನ್ನು ಕರೆಸಿ ಸನ್ಮಾನಿಸುತ್ತಾನೆ. ಊರ ತುಂಬ ಬಿಜೆಪಿ ನಾಯಕ ಆರ್. ಅಶೋಕ್‌ರ ಕಟೌಟ್ ಹಾಕಿಸಿ ಅದರೊಳಗೇ ತನ್ನದೊಂದು ಫೋಟೋ ಹಾಕಿಕೊಳ್ಳುತ್ತಾನೆ. ತಾನು ಭಾಗವಹಿಸಿದ ಸಭೆಗಳಲ್ಲೆಲ್ಲ ನಾಚಿಕೆಗೆಟ್ಟು ಆರ್. ಅಶೋಕ್‌ರನ್ನು 'ಜನಪ್ರಿಯ ಶಾಸಕರು' ಎಂದು ಡೈಲಾಗ್ ಹೊಡೆಯುತ್ತಾನೆ.

ತನ್ನದೇ ಕಮ್ಮಗೊಂಡನಹಳ್ಳಿಯಲ್ಲಿ ತಾನೇ ಕಟ್ಟಿಸಿದ ಕರುಮಾರಿಯಮ್ಮನ ದೇವಸ್ಥಾನದ ಉದ್ಘಾಟನೆಯನ್ನು ಕೂಡ ಆರ್. ಅಶೋಕ್ ಕೈಯಲ್ಲೇ ಮಾಡಿಸುತ್ತಾನೆ.



ಯಾರಾದರೂ ಇದನ್ನು ಕಾಂಗ್ರೆಸ್ ನಿಷ್ಠೆ ಎನ್ನುತ್ತಾರಾ?

ಇನ್ನು ಲ್ಯಾಂಡ್ ಡೀಲ್ ವಿಷಯಕ್ಕೆ ಬಂದರೆ ಬಿಜೆಪಿ ನಾಯಕ ಆರ್. ಅಶೋಕ್ ಮತ್ತು ಕಾಂಗ್ರೆಸ್ ಖದೀಮ ಕೆ.ಸಿ. ಅಶೋಕ್ ಇಬ್ಬರೂ ಅವಳಿಜವಳಿಗಳಿದ್ದಂತೆ. ನೆಲಮಂಗಲ ರಸ್ತೆಯ ಮಾಕಳಿಯ ಸಂಜಯ್‌ಖಾನ್‌ನ ರೆಸಾರ್ಟ್ ಹಿಂಭಾಗದಲ್ಲಿ ಇಬ್ಬರೂ ಸೇರಿ ಎಂಭತ್ತು ಎಕರೆ ಜಮೀನು ಖರೀದಿಸಿ ಅದನ್ನು ಮಾರ್ವಾಡಿಯೊಬ್ಬನಿಗೆ ಮಾರಿದ ಬಗ್ಗೆ ದಾಖಲೆಗಳಿವೆ. ಬಂದ ಲಾಭದಲ್ಲಿ ಇಬ್ಬರೂ ಪಾಲುದಾರಿಕೆಯಲ್ಲಿ ಮತ್ತೆ 90 ಎಕರೆ ಖರೀದಿಸಿದ್ದಕ್ಕೂ ದಾಖಲೆಗಳಿವೆ. ಇವತ್ತಿಗೂ ಪಹಣಿಯಲ್ಲಿ ಇಬ್ಬರೂ ಅಶೋಕ್‌ಗಳ ಹೆಸರೇ ಬರುತ್ತದೆ. ಕನಿಷ್ಠ ತಾನು ಎಮ್ಮೆಲ್ಲೆ ಆಗುವುದಕ್ಕಾದರೂ ದಾಸರಹಳ್ಳಿ ಸುತ್ತಮುತ್ತ ಕಾಂಗ್ರೆಸ್ಸನ್ನಾದರೂ ಬೆಳೆಸಬೇಕಿತ್ತು ಹಾಗೆ?

ವಾಸ್ತವವೇನೆಂದರೆ ಈತ ಅಧ್ಯಕ್ಷನಾಗುವುದಕ್ಕೂ ಮುನ್ನ, ಅಂದರೆ 1996 ರ ವಿಧಾನಸಭಾ ಚುನಾವಣೆಯಲ್ಲಿ ದಾಸರಹಳ್ಳಿ ಸಿಎಂಸಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ಸಿಗೆ 15 ಸಾವಿರ ಮತಗಳ ಲೀಡ್ ಬರುತ್ತಿದ್ದದ್ದು ಈತ ಅಧ್ಯಕ್ಷನಾದ 1999 ರ ಹೊತ್ತಿಗೆ ಬಿಜೆಪಿಗೆ 8 ಸಾವಿರ ಮತಗಳ ಲೀಡ್ ಬಂತು. 2004 ರ ಹೊತ್ತಿಗೆ ಈತ ಎರಡನೇ ಬಾರಿ ಅಧ್ಯಕ್ಷನಾದನಲ್ಲ; ಆಗ ಮತ್ತೆ ಬಿಜೆಪಿಗೆ 15 ಸಾವಿರದಷ್ಟು ಲೀಡ್ ಸಿಕ್ಕಿತ್ತು!

ತನ್ನದೇ ಪಕ್ಷದ ಮರಿಯಮ್ಮ ರಾಜಣ್ಣ ಸಿಎಂಸಿಗೆ ಅಧ್ಯಕ್ಷರಾಗಬಾರದೆಂದು ಜೆಡಿಎಸ್-ಬಿಜೆಪಿಯನ್ನು ಬೆಂಬಲಿಸಿದವನು, ತನ್ನ ಪಕ್ಷದಲ್ಲೇ ಇದ್ದ ಮಹಿಳಾ ಕೌನ್ಸಿಲರ್‌ಗಳನ್ನು ಅವಮಾನಿಸಿ ಜೆಡಿಎಸ್‌ನ ತಿಮ್ಮಕ್ಕನ ಹೆಸರನ್ನು ಸೂಚಿಸುವವನು, ಪ್ರತಿನಿತ್ಯ ಬಿಜೆಪಿ ನಾಯಕ ಆರ್. ಅಶೋಕ್ ಮನೆಯಲ್ಲೇ ಅಡ್ಡೆ ಹಾಕುವವನು, ವಿರೋಧಿ ಬಿಜೆಪಿಯ ಅಶೋಕ್ ಜೊತೆಗೇ ಪಾಲುದಾರನಾಗಿ ರಿಯಲ್ ಎಸ್ಟೇಟ್ ದಂಧೆಗೆ ನಿಂತವನು ಈಗ ದಾಸರಹಳ್ಳಿ ವಿಧಾನಸಭೆಗೆ ಕಾಂಗ್ರೆಸ್ ಟಿಕೆಟ್ ಕೇಳುತ್ತಾನೆಂದರೆ, ಅದಕ್ಕೆಂದು ಖರ್ಗೆ ಅಳಿಯನಿಗೆ ಎರಡು ಕೋಟಿ ಕೊಡುವುದಕ್ಕೂ ರೆಡಿಯಾಗಿದ್ದಾನೆಂದರೆ ಕಾಂಗ್ರೆಸ್ ದುರ್ಗತಿಗೆ ಇದಕ್ಕಿಂತ ಬೇಕೆ?

ಇದು ದಾಸರಹಳ್ಳಿಯ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರ ಪ್ರಶ್ನೆ. ಜೆಡಿಎಸ್‌ನಿಂದ ಕ್ರಿಕೆಟ್ ಆಟಗಾರ ದೊಡ್ಡ ಗಣೇಶ್ ನಿಲ್ಲಬಹುದು. ಬಿಜೆಪಿಯಿಂದ ಸ್ವತಃ ಅಶೋಕ್ ಅಥವಾ ಅವರ ಖಾಸಾ ತಮ್ಮ ರವಿ ನಿಲ್ಲುವುದಂತೂ ಗ್ಯಾರಂಟಿ. ಹಾಗೊಮ್ಮೆ ಕಾಂಗ್ರೆಸ್ ನಾಯಕರೇನಾದರೂ ಖದೀಮ ಕೆ.ಸಿ. ಅಶೋಕ್‌ಗೆ ಟಿಕೆಟ್ ಮಾರಿಕೊಂಡರೆಂದರೆ ಅಲ್ಲಿಗೆ ದಾಸರಹಳ್ಳಿಯನ್ನು ಹರಿವಾಣದಲ್ಲಿಟ್ಟು ಬಿಜೆಪಿಗೆ ಒಪ್ಪಿಸಿದಂತೆ ತಾನೆ?

ಕಾಂಗ್ರೆಸ್ ದುರಂತಕ್ಕೆ ಇದಕ್ಕಿಂತ ಬೇಕೆ? ■





ಸುಖಸಾಗರ್ ಮಾಲ್   ಮೆಜೆಸ್ಟಿಕ್‌ನ ನ್ಯಾಷನಲ್ ಮಾರ್ಕೆಟ್

...ಳ್ಳುತ್ತಾನೆ ಅಥವಾ ಗಿರಾಕಿ ಇದ್ದಲ್ಲಿಗೇ ಸೀಡಿ ಬಂದು ತಲುಪುತ್ತದೆ. ...ಬೆಂಗಳೂರು ದೊಡ್ಡ ಮಾರುಕಟ್ಟೆಯಾದರೂ ಇಲ್ಲಿಂದಲೇ ಹುಬ್ಬಳ್ಳಿ, ...ರು, ಮಂಡ್ಯ, ಮೈಸೂರು, ಶಿವಮೊಗ್ಗ, ಭಟ್ಕಳದಂಥ ಊರುಗಳಿಗೆ ...ರಾಗುತ್ತದೆ. ಈ ದಂಧೆಯ ಮೂಲ ಪುರುಷನೇ ಎಸ್.ಪಿ. ರೋಡಿನ ...ನ್. ವೀಡಿಯೋ ಧಣಿ ಕೇಶವಮೂರ್ತಿ. ಇಲ್ಲಿಗೆ ತಿಂಗಳ ಹಿಂದೆ ...ಪೊಲೀಸರು ಈತ ವೀಡಿಯೋ ಅಡ್ಡೆಯ ...ದಾಳಿ ಮಾಡಿ ಒಂದು ಲಾರಿ ಲೋಡಿನಷ್ಟು ...ಡಿಗಳನ್ನು ವಶಪಡಿಸಿಕೊಂಡರು. ಆದರೆ ...ಮೂರ್ತಿ ಮಾತ್ರ ಈತನಕ ಸಿಕ್ಕಿಬಿದ್ದಿಲ್ಲ. ...ವ ಮುನ್ಸೂಚನೆ ಹೇಗೋ ಪೊಲೀಸ ... ಸಿಕ್ಕಿರುತ್ತದೆ. ಅನ್ಯಾಯವಾಗಿ ಕೆಲಸದ ...ರು ಜೈಲು ಪಾಲಾಗುತ್ತಾರೆ.

ಕೇಶವಮೂರ್ತಿ ವಿಜೆಂಟನೇ ಹೊರತು ...ಸೃಷ್ಟಿಕರ್ತರಿರುವುದು ದೂರದ ಚೆನ್ನೈನಲ್ಲಿ. ...ಬರ್ಮಾ ಬಜಾರ್ ಇದರ ಮೂಲಸ್ಥಾನ. ...ಚಿತ್ರಲಿ ದೇಹಕ್ಕೆ ಯಾವ ನಟಿಯ ಮುಖವನ್ನು ಗ್ರಾಫಿಕ್ಸ್ ಮಾಡಬೇಕು, ...ದ ಶೂಟಿಂಗ್ ಮಾಡಿಸಬೇಕು, ಯಾರ್‍ಯಾರನ್ನು ನಗ್ನಗೊಳಿಸಬೇಕು ...ಗಳನ್ನೆಲ್ಲ ಚೆನ್ನೈ ಖದೀಮರೇ ಪೂರೈಸುತ್ತಾರೆ. ಅಲ್ಲಿಂದ ಬಂದ ...ನ್ನು ಅಗಡೀ ದರಕ್ಕೆ ಖರೀದಿಸುವ ಕೇಶವಮೂರ್ತಿ ಅದನ್ನು ...ಮಾರ್ಕೆಟ್ಟಿನ ಮೂವರು ಹರಾಮಿಗಳಿಗೆ ವಹಿಸಿಕೊಡುತ್ತಾನೆ. ...ನ್ಯಾಷನಲ್ ಮಾರ್ಕೆಟ್ಟಿನ ಮಾರ್ವಾಡಿ ಅಶೋಕ್, ಸಿಂಧಿ ಹಿತೇಶ್ ಬಾಬ್ಸನ್ ಮತ್ತು ಚಂದ್ರು.



ಸೆಕ್ಸ್ ಸಿಡಿ ಖದೀಮ ಹಿತೇಶ್



ಅಮಿತ್ ವಿಡಿಯೋ ಧಣಿ ಅಶೋಕ್

ಈ ಪೈಕಿ ಅಶೋಕ್ ನ್ಯಾಷನಲ್ ಮಾರ್ಕೆಟ್ಟಿನ ಶಾಪ್ ನಂಬರ್ 85 ರ ಅಮಿತ್ ವೀಡಿಯೋದ ಮಾಲೀಕ. ಈತನ ಪಕ್ಕದ್ದೇ ಹಿತೇಶ್ ಉರ್ಫ್ ಬಾಬ್ಸನ್‌ನ ಶಾಪ್ ನಂಬರ್ 43. ಈತನ ಪಕ್ಕದ ಟೈಟಾನಿಕ್ ಷೋರೂಂ ಎದುರಿನ ಶಾಪ್ ನಂಬರ್ 71 ರ ವರ್ಷಾ ಎಲೆಕ್ಟ್ರಾನಿಕ್ಸ್ ಒಡೆಯನೇ ಚಂದ್ರು. ಅಶೋಕ್ ಒಬ್ಬನೇ ದಿನವೊಂದಕ್ಕೆ ಕನಿಷ್ಠ ಇಂಥ ಮೂರು ಸಾವಿರ ಸೀಡಿಗಳನ್ನು ಮಾರುತ್ತಾನೆಂದರೆ ಇದಕ್ಕಿಂತ ಲಾಭದಾಯಕ ದಂಧೆ ಬೇಕೆ?

ಒಂದಾನೊಂದು ಕಾಲಕ್ಕೆ ಲಡಾಸಿ ಬೈಕುಗಳಲ್ಲಿ ಸೀಡಿ ದಂಧೆ ಮಾಡಿಕೊಂಡಿದ್ದ ಅಶೋಕ್ ಮತ್ತು ಬಾಬ್‌ಸನ್ ಇವತ್ತು ಕೋಟ್ಯಾಧಿಪತಿಗಳು. ಉಪ್ಪಾರಪೇಟೆ ಪೊಲೀಸರೇ ರೇಡ್ ಮಾಡಲಿ, ಸಿಸಿಬಿ ಪೊಲೀಸರೇ ದಾಳಿ ನಡೆಸಲಿ; ಈತನಕ ಜೈಲು ಕಂಡುಬಂದಿದ್ದು ಇವರ ಬಳಿ ಕೆಲಸಕ್ಕಿರುವ ಅಬ್ಬೇಪಾರಿ ಹುಡುಗರೇ ಹೊರತು ಈ ಮೂವರನ್ನು ಈತನಕ ಹಿಡಿಯಲಾಗಿಲ್ಲ. ಇವರಲ್ಲದೇ ಸುಖಸಾಗರ್ ಶಾಪಿಂಗ್ ಮಾಲ್‌ನ ಭರತ್, ನಾರಾಯಣ, ಪಿ.ಕೆ. ಅಹ್ಮದ್, ಗೋವಿಂದ, ಅಹಮನ್ ಮುಂತಾದವರೂ ಸೆಕ್ಸ್ ಸೀಡಿಕೋರರೆ. ಹಾಂಕಾಂಗ್ ಬಜಾರ್, ಬರ್ಮಾ ಬಜಾರ್, ನ್ಯಾಷನಲ್ ಮಾರ್ಕೆಟ್, ಸುಖಸಾಗರ ಮಾಲ್‌ಗಳ ಸರಿಸುಮಾರು 200 ಸೀಡಿ ಅಂಗಡಿಗಳ ಮುಖ್ಯ ಆದಾಯವೇ ಇಂಥ ಅಶ್ಲೀಲ ಸೀಡಿಗಳು.

ವಾರಕ್ಕೊಂದು ಹೊಸ ಸೀಡಿ ಬರುತ್ತಲೇ ಇರುತ್ತದೆ. ಹಿಂದಿನ ವಾರ ಕರೀನಾ ಕಪೂರ್ ಸೀಡಿ ಬಂದರೆ, ಈ ವಾರ ಸಾನಿಯಾ ಸೀಡಿ ಬಿಡುಗಡೆಗೊಂಡಿರುತ್ತದೆ. ಮುಂದಿನವಾರ ದೀಪಿಕಾ ಪಡುಕೋಣೆಯ ಸೀಡಿ ಬಂದರೂ ಅಚ್ಚರಿಯಿಲ್ಲ. ಪುಡಿಕಾಸಿಗೆ ಸೆಕ್ಸ್ ಸೀಡಿಗೆ ಬಟ್ಟೆ ಬಿಚ್ಚುವ ಬದಲು ಸಣ್ಣಪುಟ್ಟ ಐಟಂ ಹಾಡಿಗೆ ಕುಣಿದರೇನೇ ಅದರ ಹತ್ತಿಪ್ಪತ್ತು ಪಟ್ಟು ದುಡ್ಡು ಬರುವಾಗ ಇಂಥ ಅಸಹ್ಯದ ಕೆಲಸಕ್ಕೆ ಯಾವ ನಟಿ ತಾನೇ ಇಳಿಯುತ್ತಾಳೆ? ಇಂಥ ಸರಳ ಸಂಗತಿ ಕೂಡ ಸೆಕ್ಸ್ ಸೀಡಿ ಮೇನಿಯಾಕ್‌ಗಳ ತಲೆಗೆ ತೋಚುವುದಿಲ್ಲ. ಯಾವುದೋ ಬೆತ್ತಲೆ ದೇಹಕ್ಕೆ ಇನ್ನಾರದೋ ತಲೆ ಅಂಟಿಸಿ, ರಕ್ಷಾಕವಚಕ್ಕೆ ಸಾನಿಯಾಳದೊಂದು ಫೋಟೋ ಹಾಕಿ ಕೊಟ್ಟರೂ ನಂಬುವ ಹುಚ್ಚರಿರುವಾಗ ಮಾರುವ ಖದೀಮನಿಗೇನು ಕಷ್ಟ?

ಬೇಕಿದ್ದರೆ ಪೊಲೀಸ್ ಕಮಿಷನರ್ ಅಚ್ಯುತರಾಯರೇ ಮೆಜೆಸ್ಟಿಕ್ಕಿಗೋ ಎಸ್.ಪಿ. ರೋಡಿಗೋ ಬಂದು ನೋಡಲಿ. 'ಅಪ್ಪರಾಣೆ ಇದು ಸಾನಿಯಾದ್ದೇ ಅಸಲಿ ಸೀಡಿ' ಎಂದು ಅವರಿಗೇ ಟೋಪಿ ಹಾಕಿ ಕಳಿಸುವ ಚಾಲಾಕಿಗಳು ಹುಡುಕಿಕೊಂಡೇ ಬಂದು ಕೈಗೊಂದು ಸೀಡಿ ಮಡಗುತ್ತಾರೆ.

ನೀಲಂ ಅಚ್ಯುತರಾಯರೇ ಏನ್ರೀ ಇದೆಲ್ಲ ಅಸಹ್ಯ?

■ ರಾ. ಸೋಮನಾಥ್


ಶಕೀಲಾ ಬೇಕಾ? ಸಿಲ್ಕ್ ಬೇಕಾ?

ಮೆಜೆಸ್ಟಿಕ್ ಮತ್ತು ಎಸ್.ಪಿ. ರೋಡಿನ ಯಾವುದೋ ಸೀಡಿ ಅಂಗಡಿ ಮುಂದೆ ನಿಂತು ಸುಮ್ಮನೇ ಗೋಣು ಬಗ್ಗಿಸಿದರೂ ಸಾಕು; ಅಂಗಡಿಯಾತನಿಗೆ ಅರ್ಥವಾಗಿಬಿಡುತ್ತದೆ. ಆತನೇ ಕೈಬೀಸಿ ಕರೆದು "ಬನ್ನಿ ಸಾರ್... ಶಕೀಲಾ... ಸಿಲ್ಕ್, ರಂಭಾ, ಕಾಜೋಲ್ ಯಾರ್‍ದು ಬೇಕು ಸಾರ್?" ಎನ್ನುತ್ತಾನೆ. ಮಾಮೂಲಿ ಸಿನಿಮಾಗಳ ನಕಲಿ ಸೀಡಿಯೊಂದಕ್ಕೆ ಐವತ್ತೋ ಅರವತ್ತೋ ರೂಪಾಯಿ ರೇಟಾದರೆ ಸೆಕ್ಸ್ ಸೀಡಿಯೊಂದಕ್ಕೆ ಕನಿಷ್ಠ ಇನ್ನೂರು ರೂಪಾಯಿ ಕಕ್ಕಲೇಬೇಕು. ಕೊಂಡಾತ ತನ್ನ ಮನೆಗೆ ಬಂದು ಹಾಕಿ ನೋಡಿದ ಮೇಲೆ ತಾನೇ ಸತ್ಯ ಗೊತ್ತಾಗೋದು?

ಶ್ರೀದೇವಿಯ ಸೆಕ್ಸ್ ಸೀಡಿಗೆ ಇವತ್ತಿಗೂ ಡಿಮ್ಯಾಂಡಿದೆ. ಹಾಗೇ ಸಿಲ್ಕ್ ಸ್ಮಿತಾ ಸೀಡಿಗೂ ಜನ ಮುಗಿಬೀಳುತ್ತಾರೆ. ವಾಸ್ತವವೆಂದರೆ ಯಾರದೋ ಬೆತ್ತಲೆ ದೇಹಕ್ಕೆ ಶ್ರೀದೇವಿ ಮತ್ತು ಸಿಲ್ಕ್‌ಸ್ಮಿತಾರ ಹಾಡಿನ ಮುಖಭಂಗಿಗಳನ್ನು ಗ್ರಾಫಿಕ್ಸ್ ಮಾಡಿ ತೇಪೆ ಹಾಕಿರುತ್ತಾರೆ. ಮಲೆಯಾಳಿ ಸೆಕ್ಸ್ ಬಾಂಬ್ ಶಕೀಲಾಳನ್ನೇ ಹೋಲುವ ದಢೂತಿ ಯುವತಿಯೊಬ್ಬಳನ್ನೇ ಅಶ್ಲೀಲವಾಗಿ ಚಿತ್ರೀಕರಿಸಿ ಅದನ್ನೇ ಅಸಲೀ ಶಕೀಲಾ ಎಂದು ನಂಬಿಸುತ್ತಾರೆ. ಹಾಗೇ ರಮ್ಯಕೃಷ್ಣಳನ್ನು ಹೋಲುವ ಲೈವ್‌ಬ್ಯಾಂಡ್ ಗಾಯಕಿಯೊಬ್ಬಳನ್ನು ಬಳಸಿ ಸೀಡಿ ಮಾಡಿದ್ದಾರೆ.



ಅವಸರಕ್ಕೆ ಬಿದ್ದು ಕದ್ದೂಮುಚ್ಚಿ ಸೀಡಿ ಖರೀದಿಸುವ ವಿಕೃತನಿಗೆ ಸತ್ಯ ಗೊತ್ತಾಗುವುದು ಮನೆಗೆ ಬಂದ ನಂತರವೇ. ಆದರೂ ವಾಪಸ್ಸು ಹೋಗಿ ಕೇಳುವಂತಿಲ್ಲವಲ್ಲ! ಸದ್ಯ ಸಿನಿಮಾಗಳ ನಕಲಿ ಸೀಡಿ ದಂಧೆಗಿಂತಲೂ ಸೆಕ್ಸ್ ಸೀಡಿ ದಂಧೆಯೇ ಭರದಿಂದ ಸಾಗುತ್ತಿದೆ. ಟೆನ್ನಿಸ್ ತಾರೆ ಸಾನಿಯಾ ಇದರ ಲೇಟೆಸ್ಟ್ ಬಲಿಪಶುವಷ್ಟೆ.



ಚಾಮರಾಜನಗರ: ಖೆಡ್ಡಾಕ್ಕೆ ಬಿದ್ದ ಎಸ್ಪಿ ಶ್ರೀಕಂಠಪ್ಪ!

ಲೋಕಾಯುಕ್ತ ಪೊಲೀಸರ ದಕ್ಷತೆ ಎನ್ನಿ ಅಥವಾ ಎಸ್ಪಿ ಶ್ರೀಕಂಠಪ್ಪನ ದುರಾದೃಷ್ಟ ಎನ್ನಿ ಅಂತೂ ಸಮಾಜ ಕಂಟಕ ಕ್ರಿಮಿಯೊಂದು ತೊಲಗಿದಂತಾಗಿದೆ. ಹೌದು, ಮೊನ್ನೆ ಲೋಕಾಯುಕ್ತ ಪೊಲೀಸರು ತೋಡಿದ ಖೆಡ್ಡಾದಲ್ಲಿ ಚಾಮರಾಜನಗರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಬಿ. ಶ್ರೀಕಂಠಪ್ಪ ಬಿದ್ದು ವಿಲವಿಲ ಒದ್ದಾಡುತ್ತಿದ್ದಾನೆ. ಐವತ್ತು ಸಾವಿರು ರೂ.ಗಳನ್ನು ಲಂಚವಾಗಿ ಸ್ವೀಕರಿಸುತ್ತಿರುವಾಗಲೇ ಲೋಕಾಯುಕ್ತ ಪೊಲೀಸರು ಅವನನ್ನು ಅರೆಸ್ಟ್ ಮಾಡಿದ್ದಾರೆ. ಈ ಮೂಲಕ ಕರ್ನಾಟಕದ ಲೋಕಾಯುಕ್ತ ಚರಿತ್ರೆಯಲ್ಲಿ ಲಂಚ ಸ್ವೀಕರಿಸುತ್ತಿರುವಾಗ ಸಿಕ್ಕಿಬಿದ್ದ ಮೊದಲ ಎಸ್ಪಿ ಹಾಗೂ ಎರಡನೇ ಐಪಿಎಸ್ ಆಫೀಸರ್ ಎಂಬ ಕುಖ್ಯಾತಿಗೆ ಶ್ರೀಕಂಠಪ್ಪ ಪಾತ್ರರಾಗಿದ್ದಾರೆ.

ಘಟನೆಯ ಹಿನ್ನೆಲೆ...

ಚಾಮರಾಜನಗರ ಜಿಲ್ಲೆಯ ಪುಣಜನೂರು ಅರಣ್ಯ ತನಿಖಾ ಠಾಣೆಯ ವ್ಯಾಪ್ತಿಯಲ್ಲಿ ಮರಳು ಗಣಿ ಉದ್ಯಮ ನಡೆಸುತ್ತಿದ್ದ ಎಸ್.ಎಂ. ಫಾರೂಕ್ ಎಂಬುವವರಿಗೂ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗೂ ಒಂದಿಷ್ಟು ಜಗಳ ನಡೆದಿತ್ತು. ಇದು ತಾರಕಕ್ಕೇರಿ ಅರಣ್ಯ ಇಲಾಖೆಯವರು ಫಾರೂಕ್ ಅವರ ಮೇಲೆ ಹಲ್ಲೆಯನ್ನೂ ನಡೆಸಿದ್ದರು. ಈ ಕುರಿತಂತೆ ಚಾಮರಾಜನಗರ ಪೂರ್ವ ಠಾಣೆಯಲ್ಲಿ ದೂರು ಮತ್ತು ಪ್ರತಿ ದೂರು ಎರಡೂ ದಾಖಲಾಗಿದ್ದವು. ಇದಾದ ನಂತರದಲ್ಲಿ ಪೊಲೀಸರು ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದರು.

ಆದರೆ, ಎಸ್ಪಿ ಶ್ರೀಕಂಠಪ್ಪ ತಾನು ಹೇಳುವವರೆಗೂ 'ಬಿ' ರಿಪೋರ್ಟ್ ಸಲ್ಲಿಸದಿರುವಂತೆ ಸೂಚಿಸಿದರು. ನಂತರ ಅವರು ತನ್ನನ್ನು ಭೇಟಿಯಾಗುವಂತೆ ಸುಬ್ಬಣ್ಣ ಎಂಬುವವರ ಮೂಲಕ ಫಾರೂಕ್‌ಗೆ ಹೇಳಿಕಳಿಸಿದರು. ಅಂತೆಯೇ ಫಾರೂಕ್ ಬಂದು ಎಸ್ಪಿ ಶ್ರೀಕಂಠಪ್ಪನನ್ನು ಭೇಟಿಯಾದಾಗ ಶ್ರೀಕಂಠಪ್ಪ ಯಾವ ಮುಲಾಜೂ ಇಲ್ಲದೇ ಬರೋಬ್ಬರಿ ಐವತ್ತು ಸಾವಿರ ಲಂಚ ಕೇಳಿಬಿಟ್ಟ. ಅಷ್ಟೇಏಕೆ, ಮರಳು ಗಣಿ ದಂಧೆ ಸುಗಮವಾಗಿ ನಡೆಯಬೇಕೆಂದರೆ ಪ್ರತಿ ತಿಂಗಳು ಇಪ್ಪತ್ತೈದು ಸಾವಿರ ರೂ. ಮಾಮೂಲಿ ಕೊಡಬೇಕೆಂದೂ ಅಪ್ಪಣೆ ಮಾಡಿದ.

ಚಾಲಾಕಿ ಫಾರೂಕ್ ಶ್ರೀಕಂಠಪ್ಪನಿಗೆ ಸೊಪ್ಪು ಹಾಕದೇ ನೇರವಾಗಿ ಲೋಕಾಯುಕ್ತ ಪೊಲೀಸರ ಬಳಿ ಬಂದು ಮೊನ್ನೆ ಬುಧವಾರ ದೂರು ದಾಖಲಿಸಿದರು. ಆಗ ಶುರುವಾಯಿತು ನೋಡಿ ಖೆಡ್ಡಾ ತೋಡುವ ಕೆಲಸ.

ಖೆಡ್ಡಾ ತೋಡಿದ್ದು ಹೀಗೆ...

ಫಾರೂಕ್ ಚಾಮರಾಜನಗರ ಜಿಲ್ಲಾ ಲೋಕಾಯುಕ್ತರ ಪೊಲೀಸರ ಬಳಿ ದೂರು ಕೊಟ್ಟದ್ದೇ ತಡ, ಲೋಕಾಯುಕ್ತ ಎಡಿಜಿಪಿ ರೂಪಕ್‌ಕುಮಾರ್ ದತ್ತ, ಸಂಸ್ಥೆಯ ಡಿಐಜಿ ಚರಣ್ ರೆಡ್ಡಿ ನೇತೃತ್ವದ ಕಾರ್ಯಾಚರಣಾ ತಂಡವೊಂದು ರೂಪುಗೊಂಡು ಶ್ರೀಕಂಠಪ್ಪನನ್ನು ಕೆಡವಲು ಖೆಡ್ಡಾ ತೋಡುವ ಕೆಲಸವನ್ನು ಶುರುಹಚ್ಚಿಕೊಂಡಿತು. ಮೊದಲ ಭಾಗವಾಗಿ ಫಾರೂಕ್ ಅವರ ಮ್ಯಾನೇಜರ್ ಅಕ್ಬರ್ ಅವರಿಂದ ಫಾರೂಕ್ ಮತ್ತು ಶ್ರೀಕಂಠಪ್ಪನ ನಡುವೆ ಮಧ್ಯವರ್ತಿ ಕೆಲಸ ಮಾಡಿದ್ದ ಸುಬ್ಬಣ್ಣನಿಗೆ ಲೋಕಾಯುಕ್ತ ಆಫೀಸಿನಿಂದಲೇ ಫೋನಾಯಿಸಿ ಲಂಚದ ಮೊತ್ತವನ್ನು ಕಡಿಮೆ ಮಾಡಿಕೊಳ್ಳಲು ಕೋರಲಾಯಿತು. ಅದೇ ವೇಳೆಯಲ್ಲಿ ಸುಬ್ಬಣ್ಣನೊಂದಿಗೆ ಮಾತನಾಡಿದ ಶ್ರೀಕಂಠಪ್ಪ 'ಅವನು ಶ್ರೀಮಂತನಾಗಿದ್ದಾನೆ, ಲಂಚದ ಮೊತ್ತವನ್ನು ಕಡಿಮೆ ಮಾಡಲಾಗುವುದಿಲ್ಲ' ಎಂದು ಹೇಳಿದರು. ಫೋನಿನಲ್ಲಿ ಮಾತನಾಡುತ್ತಿರುವುದನ್ನು ಲೋಕಾಯುಕ್ತ ಪೊಲೀಸರು ರೆಕಾರ್ಡ್ ಮಾಡುತ್ತಿದ್ದರು ಎಂಬ ಅರಿವು ಅವನಿಗೆಲ್ಲಿತ್ತು?

ಫೋನಿನ ಸಂಭಾಷಣೆಯನ್ನೆಲ್ಲಾ ರೆಕಾರ್ಡ್ ಮಾಡಿಕೊಂಡ ನಂತರ ಅದೇದಿನ ರಾತ್ರಿ ಲೋಕಾಯುಕ್ತ ಪೊಲೀಸರು ಶ್ರೀಕಂಠಪ್ಪ ವಾಸವಿದ್ದ ಸರ್ಕಾರಿ ವಸತಿಗೃಹದ ಸುತ್ತ ಒಂದಿಷ್ಟು ಸರ್ವೇ ಮಾಡಿ ಬಂದಿದ್ದರು. ಮರುದಿನ, ಅಂದರೆ ಗುರುವಾರ ಬೆಳಗ್ಗೆ ಲೋಕಾಯುಕ್ತರು ಐವತ್ತು ಸಾವಿರ ಲಂಚ ಹಣವನ್ನು ಅಕ್ಬರ್ ಕೈಯಲ್ಲಿ ಕೊಟ್ಟು ಮಧ್ಯವರ್ತಿ ಸುಬ್ಬಣ್ಣನನ್ನು ಭೇಟಿಯಾಗುವಂತೆ ಹೇಳಿ ಕಳಿಸಿದರು.

ಖೆಡ್ಡಾಕ್ಕೆ ಬಿದ್ದಿದ್ದು ಹೀಗೆ....

ಹಣ ಕೊಟ್ಟು ಹೊರಬಂದಿದ್ದೇ ಅಕ್ಬರ್ ಹೊರಗೆ ಕಾಯುತ್ತಿದ್ದ ಲೋಕಾಯುಕ್ತ ಪೊಲೀಸರಿಗೆ ಸನ್ನೆ ಮಾಡಿದ. ಅಲ್ಲಿಗೆ ಮುಗೀತು. ಮೈಸೂರು ಲೋಕಾಯುಕ್ತ ವಿಭಾಗದ ಎಸ್ಪಿ ಈಶ್ವರ್‌ಚಂದ್ರ ವಿದ್ಯಾಸಾಗರ್, ಚಾಮರಾಜನಗರ ಹೆಚ್ಚುವರಿ ಎಸ್ಪಿ ಪುಟ್ಟಸ್ವಾಮಿ, ಡಿವೈಎಸ್‌ಪಿ ಉಪೇಂದ್ರ, ಲೋಕಾಯುಕ್ತ ಡಿವೈಎಸ್‌ಪಿ ಅಣ್ಣಪ್ಪ ನಾಯಕ ಮತ್ತಿತರ ಅಧಿಕಾರಿಗಳನ್ನೊಳಗೊಂಡ ತಂಡ ಶ್ರೀಕಂಠಪ್ಪನ ಮನೆಗೆ ನುಗ್ಗೇಬಿಟ್ಟಿತು. ಒಳನುಗ್ಗಿ ಬರುತ್ತಿದ್ದ ಲೋಕಾಯುಕ್ತರನ್ನು ಕಂಡು ಅರೆಬರೆ ಬನಿಯನ್-ಪಂಚೆ ಉಟ್ಟಿದ್ದ ಶ್ರೀಕಂಠಪ್ಪ ಲಂಚದ ಹಣವನ್ನು ಬನಿಯನ್ ಒಳಗೆ ತುರುಕಿಕೊಳ್ಳಲು ಹರಸಾಹಸ ಮಾಡಿದ. ಆದರೆ, ಕಾಲ ಮೀರಿ ಹೋಗಿತ್ತು. ಲಂಚ ಹಣದ ಸಮೇತವಾಗಿ ಶ್ರೀಕಂಠಪ್ಪನನ್ನು ಲೋಕಾಯುಕ್ತರು ಅರೆಸ್ಟ್ ಮಾಡಿದರು. ಅಲ್ಲಿಯೇ ಫಿನಾಪ್ತಲೀನ್ ವೈಜ್ಞಾನಿಕ ಪರೀಕ್ಷೆ ನಡೆಸಿ ಲಂಚದ ಹಣಕ್ಕೆ ಸಿಂಪಡಿಸಿದ್ದ ರಾಸಾಯನಿಕ ಶ್ರೀಕಂಠಪ್ಪನ ಮೈಕೈಗೆ ಮೆತ್ತಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡು ಅಲ್ಲಿಯೇ ಆತನ ವಿಚಾರಣೆ ನಡೆಸಿದರು.

ಬಿಪಿ ರೈಸ್!

ಲೋಕಾಯುಕ್ತರು ದಾಳಿಯಿಟ್ಟದ್ದೇ ತಡ ಶ್ರೀಕಂಠಪ್ಪನ ರಕ್ತದೊತ್ತಡ ಜಾಸ್ತಿಯಾಗಿ ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಆತನನ್ನು ದಾಖಲಿಸಬೇಕಾಯಿತು.

ಲೋಕಾಯುಕ್ತರು ಒಂದೆಡೆ ಚಾಮರಾಜನಗರದಲ್ಲಿ, ಇನ್ನೊಂದೆಡೆ ಮೈಸೂರಿನಲ್ಲಿ ಏಕಕಾಲದಲ್ಲಿ ದಾಳಿ ನಡೆಸುತ್ತಾ ಶ್ರೀಕಂಠಪ್ಪನ ಚಳಿಬಿಡಿಸುತ್ತಿದ್ದರು. ಮೈಸೂರಿನ ವಿವೇಕನಗರದ 8ನೇ ಹಂತದಲ್ಲಿರುವ ಶ್ರೀಕಂಠಪ್ಪನ ಮೂರು ಅಂತಸ್ತಿನ 'ಸಾಹಿತ್ಯ ಸದನ' ಎಂಬ ಮನೆಯ (ಮನೆ ನಂ. 42) ಮೇಲೆ ದಾಳಿ ನಡೆಸಿ ಹಲವಾರು ಆಸ್ತಿ ಸಂಬಂಧಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಶ್ರೀಕಂಠಪ್ಪ ಮೈಸೂರಿನ ವಿಜಯನಗರ ಬಡಾವಣೆಯ ಮೂರನೇ ಹಂತದಲ್ಲಿ 100x100 ಅಳತೆಯ ಸೈಟಿನಲ್ಲಿ ಭವ್ಯ ಮನೆಯೊಂದನ್ನು ಕಟ್ಟಿಸುತ್ತಿರುವುದು, ಇದಲ್ಲದೇ ಮೈಸೂರಿನಲ್ಲಿ ಆತನಿಗೆ ಎರಡು ನಿವೇಶನ ಮತ್ತು ಎರಡು ಮನೆಗಳಿರುವುದು, ನಗರದ ಸಮೀಪ ತೋಟವಿರುವುದು ಪತ್ತೆಯಾಗಿದೆ. ಅಲ್ಲದೇ ಕೆಲವು ಬ್ಯಾಂಕ್ ಲಾಕರ್‌ಗಳೂ ದೊರೆತಿವೆ.

ಪೊಲೀಸ್ ಇಲಾಖೆ ಸೇರಿದ್ದೇ ಲಂಚ ಮೇಯೋಕೆ!

ಎಸ್ಪಿ ಶ್ರೀಕಂಠಪ್ಪನ ಲಂಚಾವತಾರವನ್ನು ನೋಡಿದರೆ ಈತ ಪೊಲೀಸ್ ಇಲಾಖೆ ಸೇರಿದ್ದೇ ಲಂಚ ಮೇಯೋಕೆ ಎಂಬ ಅನುಮಾನ ಕಾಡದಿರದು. ಮೂಲತಃ ಮೈಸೂರಿನವನಾದ ಈತ 1983ರಲ್ಲಿ ರಾಜ್ಯ ಪೊಲೀಸ್ ಇಲಾಖೆಗೆ ಪ್ರವೇಶಿಸಿ 2003ರಲ್ಲಿ ಐಪಿಎಸ್ ಹುದ್ದೆಗೆ ಬಡ್ತಿ ಪಡೆದು ಹಾವೇರಿ ಜಿಲ್ಲೆಯ ಎಸ್ಪಿಯಾಗಿ ವಕ್ಕರಿಸಿಕೊಂಡಿದ್ದ. ಅಲ್ಲಿ ತಿನ್ನಬಾರದ್ದನ್ನೆಲ್ಲಾ ತಿಂದು ಅರಗಿಸಿಕೊಂಡು ಅಲ್ಲಿಂದ ಎತ್ತಂಗಡಿಯಾಗಿ ಸೀದಾ ಚಾಮರಾಜನಗರಕ್ಕೆ ಅಮರಿಕೊಂಡ. ಇಲ್ಲಿನ ಮರಳು ಉದ್ಯಮ, ಗಣಿಗಾರಿಕೆ, ಇನ್ನಿತರ ಎಲ್ಲಾ ದಂಧೆಗಳನ್ನು ನೋಡಿ ಹುಲುಸಾದ ಹುಲ್ಲುಗಾವಲನ್ನು ನೋಡಿದಷ್ಟೇ ಸಂತೋಷಗೊಂಡು ಒಬ್ಬೊಬ್ಬ ಉದ್ಯಮಿಯನ್ನೂ ಖುದ್ದಾಗಿ ಕರೆಸಿ ಇಂತಿಷ್ಟು ಮಾಮೂಲು ಲಂಚ ಅಂತ ಫಿಕ್ಸ್ ಮಾಡಿ ಪುಷ್ಕಳವಾಗಿ ಮೇಯಲಾರಂಭಿಸಿಬಿಟ್ಟ. ಹಫ್ತಾ ವಸೂಲಿ ಮಾಡುವ ಕೆಲಸವನ್ನು ಆಯಾ ಠಾಣಾ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ವಹಿಸಿ ಬಂದ ಲಂಚದಲ್ಲಿ ಅವರಿಗೂ ಒಂದಿಷ್ಟು ಪಾಲುಕೊಟ್ಟ. ಈ ಲಂಚದ ಹಣದಿಂದಲೇ ಮೈಸೂರು ಮತ್ತು ಸುತ್ತಮುತ್ತ ಶ್ರೀಕಂಠಪ್ಪ ಕೋಟಿ ಕೋಟಿ ಆಸ್ತಿ ಸಂಪಾದಿಸಿದ.

ವಾಸ್ತವದಲ್ಲಿ ಈತ ಹಾವೇರಿಯಲ್ಲಿದ್ದಾಗಲೇ ಲೋಕಾಯುಕ್ತರ ಬಲೆಗೆ ಬೀಳಬೇಕಿತ್ತು. ಆದರೆ ಮಾಜಿ ಮಂತ್ರಿ ಎಚ್.ಎಸ್. ಮಹಾದೇವ ಪ್ರಸಾದ್‌ನ ಕೃಪಾಕಟಾಕ್ಷದಿಂದ ಬಚಾವಾಗಿದ್ದ. ನಂತರ ಶ್ರೀಕಂಠಪ್ಪ ಎಂಬ ಶನಿಯನ್ನು ತನ್ನ ತವರು ಜಿಲ್ಲೆಗೆ ಮಹಾದೇವ ಪ್ರಸಾದ್ ಕರೆದುಕೊಂಡು ಬಂದರು. ಮೊದಲೇ ಭ್ರಷ್ಟಾತಿಭ್ರಷ್ಟನಾಗಿದ್ದ ಶ್ರೀಕಂಠಪ್ಪನಿಗೆ ಇಂತಹ ಒಬ್ಬ ರಾಜಕಾರಣಿಯ ಬೆಂಬಲವೂ ಸಿಕ್ಕರೆ ಆತನ ಲಂಚಾವತಾರವನ್ನು ಕೇಳಬೇಕೆ? ಜಿಲ್ಲೆಯಲ್ಲಿದ್ದ ಅಕ್ಕಿಕಳ್ಳರಿಂದ ಹಿಡಿದು ಗಣಿ ಉದ್ಯಮಿಗಳ ತನಕ ಈತನ ಭ್ರಷ್ಟ ಕೂಪದಿಂದ ಯಾರೂ ಉಳಿಯಲಿಲ್ಲ. ಎಲ್ಲರಿಗೂ ಮಾಮೂಲಿ ಫಿಕ್ಸ್ ಮಾಡಿ ಚಾಮರಾಜನಗರವನ್ನು ಕೊಳ್ಳೆಹೊಡೆದ. ಇವನ ಕಾಟ ತಾಳಲಾರದೆ ಅವರೆಲ್ಲ ಇವನ ವಿರುದ್ಧ ಕೊತಕೊತ ಅಂತ ಕುದಿಯುತ್ತಿದ್ದರು. ಈಗ ಫಾರೂಕ್ ಪ್ರದರ್ಶಿಸಿದ ಚಾಣಾಕ್ಷತನದಿಂದಾಗಿ ಅವರೆಲ್ಲರಿಗೂ ಹಬ್ಬವೋ ಹಬ್ಬ.


ಏನೇ ಆದರೂ ದೊಡ್ಡ ಮಿಕವೊಂದನ್ನು ಬಲೆಗೆ ಬೀಳಿಸಿದ ಖುಷಿಯಲ್ಲಿ ಲೋಕಾಯುಕ್ತ ಪೊಲೀಸರಿದ್ದಾರೆ. ಶ್ರೀಕಂಠಪ್ಪನ ಈಗ ಸಸ್ಪೆಂಡ್ ಕೂಡಾ ಮಾಡಲಾಗಿದೆ. ಆದರೆ ಶ್ರೀಕಂಠಪ್ಪನ ಹಿಂದೆ ಮರಿ-ಹಿರಿ ರಾಜಕೀಯ ಪುಢಾರಿಗಳಿದ್ದಾರೆ. ಹಾಗಾಗಿ ಈತ ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಲೋಕಾಯುಕ್ತ ಪೊಲೀಸರಿಗೆ ಈ ಕಡೆಯೂ ಒಂದು ಕಣ್ಣಿದ್ದರೆ ಒಳ್ಳೆಯದು.

– ಕೊಳ್ಳೆಗಾಲ ಮಾಳಿಗೆ

ತಹಶೀಲ್ದಾರ್ ನಾಗರಾಜ್ ಹತ್ಯಾಯತ್ನ: ಹೊಳೆನರಸೀಪುರವೋ ಬಿಹಾರವೋ?

ದೇವೇಗೌಡರ ತವರು ಜಿಲ್ಲೆ ಹಾಗೂ ರೇವಣ್ಣನ ಕಾರಸ್ಥಾನವಾಗಿರುವ ಹಾಸನ ಜಿಲ್ಲೆಯ ಜನ ಈಗ ಇಂತಹದ್ದೊಂದು ಪ್ರಶ್ನೆ ಕೇಳತೊಡಗಿದ್ದಾರೆ. ಇದಕ್ಕೆ ಕಾರಣ, ಮೊನ್ನೆ ಹೊಳೆನರಸೀಪುರದ ದಕ್ಷ ಯುವ ತಹಶೀಲ್ದಾರ ಎಚ್.ಎಲ್. ನಾಗರಾಜ್ ಮೇಲೆ ನಡೆದ ಹತ್ಯಾಯತ್ನ.

ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು ಈ ಹಿಂದೆ ಕಾಂಗ್ರೆಸ್‌ನ ದಿ. ಜಿ. ಪುಟ್ಟಸ್ವಾಮಿಗೌಡರಿಗೆ ಸಲಾಮು ಹೊಡೆಯುತ್ತಿದ್ದರು, ಈಗ ಎಚ್.ಡಿ. ರೇವಣ್ಣನ ಗುಲಾಮರಾಗಿದ್ದಾರೆ ಎಂಬುದು ಅಲ್ಲಿನ ಜನರ ನಂಬಿಕೆ. ಈ ನಂಬಿಕೆಯನ್ನು ಹುಸಿ ಮಾಡಿದವರು ಹೊಳೆನರಸೀಪುರದ ಯುವ ತಹಶೀಲ್ದಾರ್ ನಾಗರಾಜ್. ಪ್ರಾಯಶಃ ಇದೇ ಅವರ ಮುಳುವಿಗೆ ಕಾರಣವಾಗುತ್ತಿದೆ.



ಅಜಂ ಫರ್ವೇಜ್

ಇಲಾಖೆಗೆ ಹೊಸದಾಗಿ ನೇಮಕಗೊಂಡಿರುವ ನಾಗರಾಜ್ ಇಲ್ಲಿನ ಜಡ್ಡುಗಟ್ಟಿದ ವ್ಯವಸ್ಥೆಗೆ ಒಂದಿಷ್ಟು ಸಾಣೆ ಹಿಡಿಯುವ ಕೆಲಸವನ್ನು ಶುರುಹಚ್ಚಿಕೊಂಡಿದ್ದರು. ತಮ್ಮ ನಿಷ್ಪಕ್ಷಪಾತಿ ನಿಲುವುಗಳು, ಜನಪರ ಕಾಳಜಿ, ಸಾಮಾನ್ಯರ ನೋವಿಗೆ ಮಿಡಿಯುವ ಹೃದಯಗಳಿಂದಲೇ ತಾಲ್ಲೂಕಿನ ಜನರ ಪ್ರೀತಿ-ವಿಶ್ವಾಸಗಳನ್ನು ಅವರು ಗಳಿಸಿದ್ದರು. ಕಳೆದ ನಾಲ್ಕಾರು ವರ್ಷಗಳಿಂದ ತಾಲ್ಲೂಕಿನ ಕಟ್ಟೆ ಬೆಳಗುಳಿ, ಮಾರವಳ್ಳಿ, ಸ್ವಾಮನಹಳ್ಳಿ, ಹೊಳಂಬಿಗೆ, ಗನ್ನಿಕಡ, ಪಡುವಲಿಪ್ಪೆ ಮುಂತಾದ ಹೇಮಾವತಿ ನದಿ ತೀರದ ಹಳ್ಳಿಗಳಲ್ಲಿ ಅಕ್ರಮವಾಗಿ, ಅವ್ಯಾಹತವಾಗಿ ನಡೆಯುತ್ತಿರುವ ಮರಳು ದಂಧೆಯ ಬಗ್ಗೆ ಜನ ಆಕ್ರೋಶಗೊಂಡು ಇತ್ತೀಚೆಗೆ ತಹಶೀಲ್ದಾರ್ ನಾಗರಾಜ್ ಅವರಲ್ಲಿ ದೂರು ಸಲ್ಲಿಸಿದ್ದರು. ಸಾಮಾಜಿಕ ಕಳಕಳಿಯಿರುವ ನಾಗರಾಜ್ ತಕ್ಷಣವೇ ಕಾರ್ಯಪ್ರವೃತ್ತರಾಗಿ ಮರಳು ದಂಧೆ ನಡೆಯುತ್ತಿರುವ ಸ್ಥಳಗಳಿಗೆ ದಾಳಿಯಿಟ್ಟು ಅಕ್ರಮ ದಂಧೆಗೆ ಕಡಿವಾಣ ಹಾಕಲಾರಂಭಿಸಿದರು. ಅವರು ಹೊಳೆನರಸೀಪುರಕ್ಕೆ ತಹಶೀಲ್ದಾರರಾಗಿ ಬಂದ ಮೂರೇ ತಿಂಗಳಲ್ಲಿ 150ಕ್ಕೂ ಹೆಚ್ಚು ಮರಳು ಲಾರಿಗಳಿಗೆ ದಂಡ ಹಾಕಿ, ಕೆಲವು ಲಾರಿಗಳ ಪರ್ಮಿಟ್ಟುಗಳನ್ನು ರದ್ದುಗೊಳಿಸಿದ್ದರು. ಆದರೆ, ದುರಂತ ಎಂದರೆ ತಹಶೀಲ್ದಾರರ ಈ ಜನಪರ ಕಾರ್ಯಕ್ಕೆ ಪೊಲೀಸರಿಂದಾಗಲೀ ಅಥವಾ ರಾಜಕಾರಣಿಗಳಿಂದಾಗಲೀ ಯಾವುದೇ ಸಹಾಯ ದೊರೆಯಲಿಲ್ಲ. ಬದಲಿಗೆ, ಅವರೆಲ್ಲಾ ಒಗ್ಗಟ್ಟಿನಿಂದ ತಹಶೀಲ್ದಾರರ ವಿರುದ್ಧವೇ ಪಿತೂರಿ ನಡೆಸಲಾರಂಭಿಸಿದರು. ಏಕೆಂದರೆ, ವಾಸ್ತವದಲ್ಲಿ ಈ ಅಕ್ರಮ ದಂಧೆಯ ರೂವಾರಿಗಳೇ ಅವರಾಗಿದ್ದರು!

ಒಂದು ಉದಾಹರಣೆಯನ್ನೇ ನೋಡಿ. ಇತ್ತೀಚೆಗೆ ಮಧ್ಯರಾತ್ರಿಯಲ್ಲಿ 34 ಎಮ್ಮೆ ಕರುಗಳನ್ನು ಸಾಗಿಸುತ್ತಿದ್ದ ಮಿನಿ ಕ್ಯಾಂಟರ್ ಒಂದನ್ನು ಹಿಡಿದ ನಾಗರಾಜ ಅದನ್ನು ನಗರ ಪೊಲೀಸ್ ಠಾಣಾ ಇನ್ಸ್‌ಪೆಕ್ಟರ್ ವಸಂತಕುಮಾರ್ ಅವರ ವಶಕ್ಕೆ ಒಪ್ಪಿಸಿ ಕಾನೂನುಕ್ರಮ ಜರುಗಿಸುವಂತೆ ಸೂಚಿಸಿದ್ದರು. ಬೆಳಗ್ಗೆ ಬಂದು ನೋಡಿದರೆ ಎಮ್ಮೆಕರುಗಳನ್ನು ತುಂಬಿದ್ದ ಲಾರಿ ಸಮೇತವಾಗಿ ಅಪರಾಧಿಗಳು ಮಾಯವಾಗಿದ್ದರು. ಕೇಳಿದರೆ, ಅಂತಹದ್ದೊಂದು ಲಾರಿಯನ್ನು ತಹಶೀಲ್ದಾರ್ ಹಿಡಿದೇ ಕೊಟ್ಟಿಲ್ಲ ಎಂದು ಹೇಳಬೇಕೆ?

ತಹಶೀಲ್ದಾರರ ಕೊಲೆಯತ್ನ!

ಯಾವಾಗ ಮರಳು ದಂಧೆಗೆ ಕಡಿವಾಣ ಹಾಕಲು ತಹಶೀಲ್ದಾರ್ ನಾಗರಾಜ್ ಟೊಂಕಕಟ್ಟಿ ನಿಂತರೋ ದಂಧೆಕೋರರೆಲ್ಲಾ ಒಗ್ಗಟ್ಟಾಗಿ ಅವರಿಗೆ ಒಂದು ಗತಿ ಕಾಣಿಸಲು ತೀರ್ಮಾನಿಸಿ ಬಿಟ್ಟರು. ನಾಗರಾಜ್ ಕಳೆದ ಬುಧವಾರ ಬೆಳಗ್ಗೆ 12 ಗಂಟೆಯ ಸುಮಾರಿಗೆ ಕಟ್ಟೆ ಬೆಳಗುಳಿ ಬಳಿ ಅಕ್ರಮ ಮರಳು ದಂಧೆ ನಡೆಯುತ್ತಿದ್ದ ಜಾಗಕ್ಕೆ ದಾಳಿಯಿಟ್ಟಾಗ ಪೂರ್ವಸಂಚಿನಂತೆ ಎರಡು ಲಾರಿಗಳನ್ನು ಅವರ ಮೇಲೆಯೇ ಹರಿಸಿ ಕೊಲ್ಲಲು ಯತ್ನಿಸಲಾಯಿತು. ಇಂತಹ ಸಂದರ್ಭಗಳನ್ನು ಪ್ರಾಯಶಃ ಮೊದಲೇ ನಿರೀಕ್ಷಿಸಿದ್ದ ನಾಗರಾಜ್ ತಮ್ಮ ಚಾಣಾಕ್ಷತನ ಉಪಯೋಗಿಸಿ ಕೂದಲೆಳೆಯಲ್ಲಿ ಪಾರಾದರು. ನಂತರ ಆ ಲಾರಿಗಳನ್ನು ಬೆನ್ನಟ್ಟಿ ಅದರಲ್ಲಿ ಒಂದನ್ನು ಹಿಡಿದು ಹಾಕಿದರು. ಆದರೆ ಡ್ರೈವರ್ ತಪ್ಪಿಸಿಕೊಂಡ. ಈ ಲಾರಿಯನ್ನು ಅವರು ನೇರವಾಗಿ ತಮ್ಮ ಕಚೇರಿಯೆದುರು ತಂದು ನಿಲ್ಲಿಸಿದರು.

ಈ ಮರಳು ದಂಧೆಕೋರರು ಎಷ್ಟೊಂದು ಬಲಿತಿದ್ದಾರೆಂದರೆ ಸೀದಾ ತಾಲ್ಲೂಕು ಕಚೇರಿಗೆ ಬಂದು ತಮ್ಮ ಲಾರಿಯನ್ನು ಬಲವಂತವಾಗಿ ಮರಳಿ ತೆಗೆದುಕೊಂಡು ಹೋಗಿದ್ದಾರಲ್ಲದೇ ಹಿಂದಿನಿಂದ ನಾಗರಾಜ್‌ಗೆ ಫೋನ್ ಮಾಡಿ "ಅದೇನು ಕಿಸಿಯುತ್ತೀಯೋ ನಾವು ನೋಡ್ತೇವೆ. ಈ ಬಾರಿ ತಪ್ಪಿಸಿಕೊಂಡಿದ್ದೀಯಾ, ಮುಂದೆ ನೋಡ್ಕೋತೇವೆ" ಎಂದು ಆವಾಜ್ ಹಾಕಿದ್ದಾರೆ. ಇಷ್ಟೆಲ್ಲಾ ಆದರೂ ಧೃತಿಗೆಡದಿರುವ ನಾಗರಾಜ್ ಛಲಬಿಡದ ತ್ರಿವಿಕ್ರಮನಂತೆ ತಮ್ಮ ಕೆಲಸವನ್ನು ಮುಂದುವರೆಸಿದ್ದಾರೆ. "ಪೊಲೀಸರು, ಅರಣ್ಯ ಇಲಾಖೆ, ನೀರಾವರಿ ಇಲಾಖೆ ಹಾಗೂ ಗಣಿ ಮತ್ತು ಭೂಗರ್ಭ ಇಲಾಖೆಗಳು ನಮ್ಮೊಂದಿಗೆ ಸಹಕರಿಸಿದರೆ ಒಂದು ವಾರದೊಳಗೆ ಹೊಳೆನರಸೀಪುರ ತಾಲ್ಲೂಕನ್ನು ಈ ಅಕ್ರಮ ದಂಧೆಗಳಿಂದ ಮುಕ್ತಿಗೊಳಿಸುತ್ತೇನೆ" ಎಂದು ಆತ್ಮವಿಶ್ವಾಸ ಮತ್ತು ದಿಟ್ಟತನದಿಂದ ಹೇಳುತ್ತಾರೆ ನಾಗರಾಜ್. ಹೊಸದಾಗಿ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದಿರುವ ಅಜಂ ಫರ್ವೇಜ್‌ರವರೂ ಕೂಡ ನಾಗರಾಜ್‌ರವರನ್ನು ಬೆನ್ನು ತಟ್ಟುತ್ತಿದ್ದಾರೆ. ಆದರೆ, ಉಳಿದ ಇಲಾಖೆಗಳು ನಾಗರಾಜ್ ಅವರ ಹೆಗಲಿಗೆ ತಮ್ಮ ಹೆಗಲನ್ನೂ ಕೊಡುತ್ತಾರೆಯೇ?



ತಹಸೀಲ್ದಾರ್ ನಾಗರಾಜ್

– ಡಿ.ಜೆ.ಗೌಡ

ಪೊಲೀಸ್ ಠಾಣೆಯಲ್ಲಿ ದೌರ್ಜನ್ಯ



ವಿಚಾರಣೆಯ ನೆಪದಲ್ಲಿ ಇಮ್ರಾನ್ ಎಂಬ ಅಮಾಯಕ ಮುಸ್ಲಿಂ ಯುವಕ ನ ಮೇಲೆ ಉಡುಪಿ ನಗರ ಪೊಲೀಸರು ನಡೆಸಿರುವ ದೌರ್ಜನ್ಯ ಯಾವ ಮಟ್ಟದ್ದೆಂದರೆ ಇಮ್ರಾನ್‌ನದೇಹದ ಬಲಭಾಗ ಏಡೀ ಅವರ ಸ್ವಾಧೀನದಲ್ಲಿ ಇಲ್ಲ. ಅವರಿಗೆ ಉಣ್ಣಲು, ಕುಡಿಯಲು ಸಹ ಆಗುತ್ತಿಲ್ಲ. ಆದರೆ ಒಂದೇ ಒಂದು ಗಾಯದ ಗುರುತೂ ಕಾಣಿಸುತ್ತಿಲ್ಲ!

■ ಜಿ. ರಾಜಶೇಖರ

ಉಡುಪಿ


...ಉಡುಪಿ ನಗರ ಪೊಲೀಸು ಠಾಣೆಯ ಸಬ್ ...ಪೆಕ್ಟರ್ ಬಿ.ಎಸ್. ಪ್ರಕಾಶ್, ಸಿಬ್ಬಂದಿ ವಿಜಯ ... ಮತ್ತು ಇತರರಿಗೆ ಭಾರತದ ಕ್ರಿಮಿನಲ್ ... ಕುರಿತು ತಕ್ಷಣ ಕ್ಲಾಸು ತೆಗೆದುಕೊಳ್ಳುವ ...ದೆ. ಅದಕ್ಕಿಂತ ಮೊದಲು ಮೊನ್ನೆ ಮಾರ್ಚ್ ...ವಾರ ರಾತ್ರಿ ಇಮ್ರಾನ್ ಎಂಬ ತರುಣನ ...ಠಾಣೆಯಲ್ಲಿ ಅವರು ನಡೆಸಿದ ಅಮಾನುಷ ...ಯ ಇಲಾಖಾ ತನಿಖೆಗೆ ಒಳಪಟ್ಟು ಠಾಣೆಯ ... ಪೊಲೀಸರಿಗೆ ಶಿಕ್ಷೆಯಾಗುವುದರ ಜೊತೆ ...ಇಮ್ರಾನ್‌ಗೆ ಸೂಕ್ತ ಪರಿಹಾರ ದೊರೆಯ...ದೆ.

ಹಿನ್ನೆಲೆ

...ದ ಹರೆಯದ ಇಮ್ರಾನ್ ಅಬ್ದುಲ್ ಖಾದರ್, ...ಯು ಪಿಯುಸಿವರೆಗೆ ಓದಿ ಈಗ ಕಂಪ್ಯೂಟರ್ ...ರ್ ಕಲಿಯುತ್ತಿರುವ ತರುಣ. ಅವರು ಉಡುಪಿ ...ಕಾಪು ಸಮೀಪದ ಮೂಳೂರಿನವರು. ಕಳೆದ ...ಮೂಳೂರು ಆಸುಪಾಸಿನಲ್ಲಿ ಕೋಮುಹಿಂಸೆ ... ಉದ್ದೇಶದಿಂದ ಬಜೆಪಿಗಳು ಮೂಳೂರು ...ಯ ಹೊರಗೆ ಕಡಿದ ಹಂದಿಯ ತಲೆಯನ್ನು ...ು. ಆದಿ ಉಡುಪಿ ಬೆತ್ತಲೆ ಪ್ರಕರಣದ ಹಾಜಬ್ಬ ...ಸನಬ್ಬ ಕೂಡ ಮೂಳೂರಿನವರು. ಕರಾವಳಿಯ ...ರ ನಡುವೆ ಕೆಎಫ್‌ಡಿ ಸಂಘಟನೆಗೆ ಸಾಕಷ್ಟು ...ಗರಿದ್ದು ಮೂಳೂರಿನಲ್ಲಿಯೂ ಅದರ ...ದ್ದಾರೆ. ಊರಿನಲ್ಲಿ ಕೆಎಫ್‌ಡಿ ಬಗ್ಗೆ ಅಸಮಾಧಾನ ... ಮುಸ್ಲಿಮರೂ ಇದ್ದಾರೆ. ಇತ್ತೀಚೆಗೆ ನಡೆದ ...ರು ದರ್ಗಾದ ಉರೂಸ್ ಸಮಾರಂಭಕ್ಕೆ ...ಬಜೆಪಿ ನಾಯಕರನ್ನು ಆಮಂತ್ರಿಸಿದ್ದನ್ನು ಅಲ್ಲಿನ ... ತರುಣರು ಆಕ್ಷೇಪಿಸಿದ್ದರು.

...ಂತಹ ಹದಗೆಟ್ಟ ವಾತಾವರಣದಲ್ಲಿ ಮಾರ್ಚ್ ... ಗುರುವಾರ, ಮೂಳೂರಿನ ಮುಸ್ಲಿಮ್ ...ನಡುವೆ ಸಣ್ಣಮಟ್ಟದ ಹೊಡೆದಾಟ ನಡೆಯಿತು. ... ಪೆಟ್ಟು ತಿಂದ ಅಸೀರ್ ಮತ್ತು ಆಶಿಕ್ ಆಲಿ ...ವನ್ನು, ಇಮ್ರಾನ್, ರಿಕ್ಷಾದಲ್ಲಿ ಉಡುಪಿಯ ...ಆಸ್ಪತ್ರೆಗೆ ಕರೆತಂದರು. ಇವರಿಗಿಂತ ಮೊದಲು ...ದುರಾಳಿಗಳು ಬಂದು ಆಸ್ಪತ್ರೆಯಲ್ಲಿ ಅಡ್ಮಿಟ್ ...ಹೊರಗೆ ಅಂಗಳದಲ್ಲಿ ಅಡ್ಡಾಡಿಕೊಂಡಿದ್ದರು. ... ಒಬ್ಬನಿಗೆ ಈ ಕಡೆಯವರು ಯಾರೋ ...ರು. ಮೂಳೂರಿನ ಹೊಡೆದಾಟ ಕಾಪು ...ಠಾಣೆಯ ವ್ಯಾಪ್ತಿಯಲ್ಲಿ ಬಂದರೆ, ಈ ಕೇಸು ... ನಗರ ಠಾಣೆಗೆ ಸಂಬಂಧಿಸಿದ್ದಾಗಿತ್ತು.

...ಡುಪಿ ಸರ್ಕಾರಿ ಆಸ್ಪತ್ರೆಗೆ ಮೂಳೂರು ಪ್ರಕರಣದ ... ಬಂದ ಕಾಪು ಪೊಲೀಸರು, ಅಸೀರ್ ಮತ್ತು ...ಜೊತೆ ಇದ್ದ ಇಮ್ರಾನ್‌ಗೆ, "ನೀನು ಇಲ್ಲೇ ... ಎಲ್ಲಿಗೂ ಹೋಗಬೇಡ" ಎಂದು ತಾಕೀತು ...ರು. ಇದಾದ ಸ್ವಲ್ಪ ಹೊತ್ತಿನ ನಂತರ, ಸಂಜೆ ...ಮೂರಿಗೆ, ಉಡುಪಿ ನಗರ ಪೊಲೀಸು ಠಾಣೆಯ ...ಜನ ಸಿಬ್ಬಂದಿಗಳು ಇಮ್ರಾನ್‌ರನ್ನು ಆಸ್ಪತ್ರೆಯಿಂದ ... ಕರೆದುಕೊಂಡು ಹೋಗಿ ಜೀಪು ಹತ್ತಲು ...ರು. ಇಮ್ರಾನ್, "ನಾನು ಯಾಕೆ ಸ್ಟೇಷನ್ನಿಗೆ ...ು? ನಾನು ಯಾವ ಗಲಾಟೆಯಲ್ಲೂ ಇಲ್ಲ" ...ಕ್ಕೆ, ಸಿಬ್ಬಂದಿಗಳಲ್ಲಿ ಒಬ್ಬ "ಬದ್ದೀ ಮಗನೆ, ...ಯಾ ಇಲ್ಲವಾ? ನಿಮಗೆಲ್ಲ ಕಲಿಸುತ್ತೇವೆ" ಎಂದು ...ದ. ಪೊಲೀಸರು ಇಮ್ರಾನ್ ಹಾಗೂ ಅವರು ... ರಿಕ್ಷಾದ ಡ್ರೈವರ್ ಮಕ್ಬೂಲ್‌ರನ್ನು ಠಾಣೆಗೆ ...ಕೊಂಡು ಹೋಗಿ ಒಂದು ಬೆಂಚಿನಲ್ಲಿ ...ಸರು. ಒಬ್ಬ ಪಿಸಿ ಮಕ್ಬೂಲ್‌ರ ಕೆಪ್ಪೆಗೆ ಒಂದು ... ಸಬ್‌ಇನ್ಸ್‌ಪೆಕ್ಟರ್ ಬಿ.ಎಸ್. ಪ್ರಕಾಶ್, "ಏನೋ ...ಲಾಟೆ ಮಾಡುತ್ತೀಯಾ?" ಎಂದು ಇಮ್ರಾನ್..., ಒಂದು ಪಂಚ್ ಕೊಟ್ಟರು. ಇಮ್ರಾನ್ ಕೈ ...ಡಿದಾಗ, "ಬ್ಲಾಕ್ ಮಾಡುತ್ತೀಯಾ? ನಾನು ... ಕರಾಟೆ ಕಲಿತಿದ್ದೇನೆ ಗೊತ್ತಾ?" ಎಂದು ...ಮು ಬಾರಿಸಿದರು. ನಂತರ ಇಮ್ರಾನ್‌ರನ್ನು ...ಂ ರೈಟರ್‌ನ ಕೋಣೆಗೆ ಕರೆದುಕೊಂಡು ಹೋಗಿ ...ಇನ್ಸ್‌ಪೆಕ್ಟರ್ ತಮ್ಮ ...ಣೆ ಪ್ರಾರಂಭಿಸಿದರು.



...ಇನ್ಸ್‌ಪೆಕ್ಟರ್: ಯಾವ ...ಕೇಸಿನಲ್ಲಿ ಇದ್ದೀಯಾ?

...ಮ್ರಾನ್: ನಾನು ಯಾವ ...ದ್ದೂ ಇಲ್ಲ.

...ಇನ್ಸ್‌ಪೆಕ್ಟರ್: ಮೂಳೂ... ಹೊಡೆದಾಟ ನಡೆದಾಗ ...ಗೆ ಎಷ್ಟು ಜನರಿದ್ದರು?

...ಮ್ರಾನ್: ನಾನು ಅದರಲ್ಲಿ ಇರಲೇ ಇಲ್ಲ, ನಾನು ...ಂದ ಅಸೀರ್ ಮತ್ತು ಆಶೀಕ್‌ರನ್ನು ರಿಕ್ಷಾದಲ್ಲಿ ...ಕೊಂಡು ಬಂದು ಆಸ್ಪತ್ರೆಗೆ ಸೇರಿಸಿದೆ ಅಷ್ಟೆ.

...ಇನ್ಸ್‌ಪೆಕ್ಟರ್: ಮೂಳೂರಿನಲ್ಲಿ ಯಾರು ಯಾರು ಕೆಎಫ್‌ಡಿಯಲ್ಲಿದ್ದಾರೆ? ಉಡುಪಿಯ ಕೆಎಫ್‌ಡಿಯಲ್ಲಿ ಯಾರಿದ್ದಾರೆ?


ಇಮ್ರಾನ್: ನನಗೆ ಗೊತ್ತಿಲ್ಲ. ನಾನು ಕೆಎಫ್‌ಡಿ ಸಭೆಗೆ ಮಾತ್ರ ಹೋಗುವವ.

ಸಬ್‌ಇನ್ಸ್‌ಪೆಕ್ಟರ್, "ಸೂಳೆಮಗನೆ ಸುಳ್ಳು ಹೇಳುತ್ತೀಯಾ" ಎನ್ನುತ್ತ ಪಿಸಿ ಒಬ್ಬನಿಗೆ ಇಮ್ರಾನ್‌ನ ಶರ್ಟು ಬಿಚ್ಚಲು ಹೇಳಿದರು. ನಂತರ ನೆಲದ ಮೇಲೆ ಅವರನ್ನು ಅಂಗಾತ ಮಲಗಿಸಿ, ಅವರ ಭುಜಗಳ ಮೇಲೆ ಇಬ್ಬರು ಪಿಸಿಗಳು, ಅಂಗಾಲಿನ ಮೇಲೆ ಇಬ್ಬರು ಪಿಸಿಗಳನ್ನು ನಿಲ್ಲಿಸಿ, ಸಬ್‌ಇನ್ಸ್‌ಪೆಕ್ಟರ್ ಕಾಲಿನ ಅಡಿಗಳಿಗೆ ಲಾಠಿಯಿಂದ ಬೀಸಿಬೀಸಿ ಹೊಡೆದರು. ನಂತರ ಇಮ್ರಾನ್‌ರ ಅಂಗೈಗಳಿಗೂ ಅದೇ ಸೇವೆ ನಡೆಯಿತು. ಕಾಲಿಗೆ 4 ಪೆಟ್ಟು, ಕೈಗೆ 3 ಪೆಟ್ಟು, ಮುಖಕ್ಕೆ 2 ಪಂಚ್ ಎಂದು ಇಮ್ರಾನ್ ನಿಖರವಾಗಿ ಹೇಳಿದರು. ಆ ಹೊಡೆತಗಳು ಎಷ್ಟು ಜೋರಾಗಿದ್ದವು ಎಂದರೆ ಇಮ್ರಾನ್‌ರ ಬೊಬ್ಬೆ ರಸ್ತೆಯಲ್ಲಿ ಹೋಗುವವರಿಗೆ ಕೇಳಿಸಬಾರದು ಎಂದು ಒಬ್ಬ ಪಿಸಿ ಕೋಣೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿದನಂತೆ.

ಇಮ್ರಾನ್‌ರನ್ನು ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ರಿಪೇರಿ ಮಾಡಿ, ಏನೋ ಕೆಲಸದ ಮೇಲೆ ಠಾಣೆಯಿಂದ ಹೊರಹೋದ ನಂತರ ವಿಚಾರಣೆಯನ್ನು, ಠಾಣೆಯಲ್ಲಿದ್ದ ಪಿಸಿಗಳು ಮುಂದುವರಿಸಿದರು. ಆಗ ಅಲ್ಲೇ ಇದ್ದ ನಾಲ್ಕೋ ಐದೋ ಪಿ.ಸಿ.ಗಳಲ್ಲಿ ಇಮ್ರಾನ್‌ರಿಗೆ ವಿಜಯಕುಮಾರ್ ಹೆಸರು ಚೆನ್ನಾಗಿ ನೆನಪಿದೆ. ಯಾಕೆಂದರೆ ಹೆಚ್ಚು ಹಿಂಸೆ ಕೊಟ್ಟವರು ಅವರೇ. ಠಾಣೆಯ ಒಳಕೋಣೆಯಲ್ಲಿ ಅಂಗಾತ ಮಲಗಿದ್ದ ಇಮ್ರಾನ್‌ನ ಮೈಗೆ ಎಲ್ಲೆಡೆ ಪೊಲೀಸರು ಬೂಟುಗಾಲಲ್ಲಿ ತುಳಿದರು. ಆ ದಿನ ಸಂಜೆ ಠಾಣೆಯಲ್ಲಿದ್ದ ಇಮ್ರಾನ್‌ರನ್ನು ನೋಡಲು, ಅಮೀರ್ ಹಮ್ಜ ಎಂಬ ಕೆಎಫ್‌ಡಿ ಕಾರ್ಯಕರ್ತರು ಬಂದಿದ್ದರು. ಒಬ್ಬ ಪಿಸಿ ಇಮ್ರಾನ್‌ಗೆ "ಅವರನ್ನೆಲ್ಲ ಸ್ಟೇಷನ್ನಿಗೆ ಕರ್ಕೊಂಡು ಬರ್ತೀಯಾ? ಪೊಲೀಸರು ಭಜರಂಗದಳದ ಚೇಲಾಗಳು ಎಂದು ಅವನು ಪಬ್ಲಿಕ್ ಸ್ಪೀಚ್ ಮಾಡ್ತಾನೆ. ನಿಮ್ಮನ್ನೆಲ್ಲ ಬಳ್ಳಾರಿ ಜೈಲಿಗೆ ಕಳುಹಿಸುತ್ತೇವೆ" ಎಂದು ಹೇಳಿ ಒದ್ದರು. ಮತ್ತೆಮತ್ತೆ ಕೆಎಫ್‌ಡಿಯಲ್ಲಿ ಎಷ್ಟು ಜನರಿದ್ದಾರೆ, ಯಾರು ಯಾರು ಇದ್ದಾರೆ ಎಂದು ಕೇಳಿ ಹೊಡೆದರು. ಆ ವೇಳೆಗೆ ಇಮ್ರಾನ್ ಎದ್ದು ಕೂರುವ ತ್ರಾಣವೂ ಇರಲಿಲ್ಲ. ಆ ಸ್ಥಿತಿಯಲ್ಲೇ ಅವರನ್ನು ಠಾಣೆಯ ಸುತ್ತ ಓಡಿಸಿದರು. ಬೆಳಿಗೂದಲಿನ ವಯಸ್ಸಾದ ಒಬ್ಬ ಪಿಸಿ, ಇಮ್ರಾನ್‌ರಿಂದ ಆ ಸ್ಥಿತಿಯಲ್ಲೇ ಲೈಟ್ ಜಂಪ್ ಮಾಡಿಸಿ ನಂತರ 150 ಬಸ್ಕಿ ತೆಗೆಯಲು ಹೇಳಿದರು. ಇಮ್ರಾನ್ ಅದನ್ನು ಒಂದು, ಎರಡು, ಮೂರು ಎಂದು ತಾನೇ ಲೆಕ್ಕ ಮಾಡಿ ಠಾಣೆಯಲ್ಲಿ ಎಲ್ಲರಿಗೂ ಕೇಳುವಷ್ಟು ಗಟ್ಟಿಯಾಗಿ ಹೇಳುವಂತೆ ಆರ್ಡರ್ ಮಾಡಿದರು; ಇಮ್ರಾನ್‌ರ ದನಿ ಮೆತ್ತಗಾದರೆ ಪೆಟ್ಟು ಬೀಳುತ್ತಿತ್ತು.

ಬಸ್ಕಿ ತೆಗೆದಾದ ನಂತರ ಇಮ್ರಾನ್‌ರನ್ನು ಠಾಣೆಯಲ್ಲಿ ಹಾಜರಿದ್ದ ಎಲ್ಲರ ಎದುರು ಕೈಮುಗಿದುಕೊಂಡು ನಿಲ್ಲುವ ಡ್ರಿಲ್ ಮಾಡಿಸಿದರು. ಪಿಸಿಗಳು ಇದರಿಂದ ಭಾರೀ ಮಜ ತೆಗೆದುಕೊಂಡರಂತೆ. ಅವರ ಮನರಂಜನಾ ಕಾರ್ಯಕ್ರಮ ಈ ಪ್ರಕಾರವಾಗಿ ಮುಂದುವರಿಯುತ್ತಿದ್ದಾಗ, ರಾತ್ರಿ ಸುಮಾರು 10 ಗಂಟೆಯ ಹೊತ್ತಿಗೆ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ಠಾಣೆಗೆ ವಾಪಸ್ಸಾದರು. ತಂಟೆ ಮಾಡುವ ಮಕ್ಕಳಿಗೆ ತಂದೆತಾಯಂದಿರು ಗದರಿಸುವ ಹಾಗೆ, ಪ್ರಕಾಶ್ ಪಿ.ಸಿ.ಗಳಿಗೆ "ಸಾಕು, ಸಾಕು ಎಷ್ಟು ಹೊಡೆಯುವುದು?" ಎಂದು ಹೇಳಿ ಅದನ್ನು ನಿಲ್ಲಿಸಿದರು. ಇಮ್ರಾನ್ ಮೈ ಇಡೀ ಬೆವರಿ, ನೆಲದಲ್ಲಿ ಹರಿದಿತ್ತು. ಪಿ.ಸಿ.ಗಳು ಇಮ್ರಾನ್‌ರ ಶರ್ಟ್‌ನಿಂದ ಅವರ ಕೈಯಲ್ಲೇ ಅದನ್ನು ಒರೆಸಿ, ಬೆಂಚಿನಲ್ಲಿ ಕೂಡಿಸಿದರು.

ಮಾರನೆಯ ದಿನ ಬೆಳಿಗ್ಗೆ ಠಾಣೆಯಲ್ಲಿ ಇಮ್ರಾನ್‌ರನ್ನು ಮತ್ತೆ "ಉಡುಪಿ ಡಿಸ್ಟ್ರಿಕ್ಟನಲ್ಲಿ ಎಷ್ಟು ಜನ ಕೆಎಫ್‌ಡಿ ಮೆಂಬರುಗಳಿದ್ದಾರೆ? ನಿಮಗೆ ಕರಾಟೆ, ಜಿಮ್ ಕಲಿಸಿ ಕೊಡುವುದು ಯಾರು? ವೆಪನ್ಸ್ ಎಲ್ಲಿಂದ ಬರುತ್ತದೆ? ಭಟ್ಕಳದಿಂದ ಬರುತ್ತದಾ? ಕಾಸರಗೋಡಿನಿಂದ ಬರುತ್ತದಾ?" ಎಂದು ಮುಂತಾಗಿ ವಿಚಾರಿಸಲಾಯಿತು. ಇಮ್ರಾನ್ ಸತ್ಯವಾಗಿಯೇ ಗೊತ್ತಿಲ್ಲ ಎಂದು ಉತ್ತರಿಸಿದರು. ಭಟ್ಕಳ, ಕಾಸರಗೋಡುಗಳಿಂದ ಬರುವ ವೆಪನ್ಸ್ ಬಗ್ಗೆ ಅವರು ಅದೇ ಮೊದಲ ಬಾರಿಗೆ ಕೇಳುತ್ತಿದ್ದುದು. ಈ ವಿಚಾರಣೆಯ ಉದ್ದಕ್ಕೂ ಠಾಣೆಯ ಸಿಬ್ಬಂದಿ, "ಪ್ರಕಾಶ್ ಶೆಟ್ಟಿ ಕೇಸಿನಲ್ಲಿ ಇವನನ್ನು ಫಿಟ್ ಮಾಡುವಾ" ಎಂದು ಮಾತಾಡಿಕೊಳ್ಳುತ್ತಿದ್ದರಂತೆ.



ಈಗ ಮತ್ತೆ ಪುನಃ ಇಮ್ರಾನ್‌ರನ್ನು "ಪ್ರಕಾಶ್ ಶೆಟ್ಟಿಗೆ ಅಟ್ಯಾಕ್ ಮಾಡಿದವರು ಯಾರು? ನೀವು ಎಷ್ಟು ಜನರಿದ್ದಿರಿ?" ಎಂದು ಪೊಲೀಸರು ಪ್ರಶ್ನೆ ಮಾಡಿದರು.

2007 ಅಕ್ಟೋಬರ್ ತಿಂಗಳ ಕೊನೆಯ ವಾರ, ಈ ಪ್ರಕಾಶ್ ಶೆಟ್ಟಿಗೆ ಪಡುಬಿದ್ರಿಯಲ್ಲಿ ಯಾರೋ ಇಬ್ಬರು ಬೈಕಿನಲ್ಲಿ ಬಂದು ಮಾರಕವಾಗಿ ಹೊಡೆದಿದ್ದರು. ಹೊಡೆದವರು ಯಾರು ಎಂದು ಇವತ್ತಿಗೂ ಪತ್ತೆಯಾಗಿಲ್ಲ. ಪ್ರಕಾಶ್ ಶೆಟ್ಟಿ, ಪಡುಬಿದ್ರಿಯಲ್ಲಿ ಭಜರಂಗದಳದ ಒಬ್ಬ ನೇತಾ ಆಗಿದ್ದು ಈ ಘಟನೆಯ ನಂತರ ಪಡುಬಿದ್ರಿ ಪೊಲೀಸು ಠಾಣೆಯ ಎದುರು ಭಜರಂಗದಳದವರು ಜಮಾಯಿಸಿ, ತಾವು ಹೆಸರಿಸಿದ ಮುಸ್ಲಿಮರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರಕಾಶ್ ಶೆಟ್ಟಿಯ ಮೇಲೆ ನಡೆದ ಹಲ್ಲೆ, ಒಂದು ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ ಎಂದು ಒಂದು ಸಂಜೆ ಪತ್ರಿಕೆ ವರದಿ ಮಾಡಿತ್ತು. ಆದರೆ ಭಜರಂಗದಳ, ಹಿಂಜಾವೇ ಮುಂತಾದ ಸಂಘಟನೆಗಳಿಗೆ ಸೇರಿದವರ ಮೇಲೆ ಹಲ್ಲೆ ನಡೆದರೆ ಅದರ ಹಿನ್ನೆಲೆಯನ್ನು ವಿಚಾರಿಸುವ ಗೊಡವೆಗೇ ಹೋಗದೆ ಅದರ ಹೊಣೆಯನ್ನು ಮುಸ್ಲಿಮರ ಮೇಲೆಯೇ ಈಗ ಹೊರಿಸಲಾಗುತ್ತಿದೆ. ಈ ಪ್ರಕರಣದಲ್ಲೂ ಪಡುಬಿದ್ರಿಯ ಭಜರಂಗಿಗಳನ್ನು ತೃಪ್ತಿಪಡಿಸಲು ಪೊಲೀಸರು ಸಿಕ್ಕಸಿಕ್ಕ ಮುಸ್ಲಿಮ್ ತರುಣರನ್ನು ಠಾಣೆಗೆ ಕರೆಸಿಕೊಂಡು "ವಿಚಾರಣೆ" ನಡೆಸಿದರು.


ಹೀಗೆ ಪೊಲೀಸ್ ವಿಚಾರಣೆಗೆ ಒಳಪಟ್ಟವರಲ್ಲಿ ಪಡುಬಿದ್ರಿಯ ಅರ್ಥಶಾಸ್ತ್ರ ಪ್ರಾಧ್ಯಾಪಕ ಅಬ್ದುಲ್ ಹುಸೇನ್‌ಖಾದರ್ ಕೂಡ ಒಬ್ಬರಾಗಿದ್ದರು. ಪ್ರಕಾಶ್ ಶೆಟ್ಟಿ ಮೇಲೆ ನಡೆದ ಹಲ್ಲೆಗೂ ಖಾದರ್ ಅವರಿಗೂ ಏನು ಸಂಬಂಧ ಎಂದು ಕೇಳುವಿರೋ? ಪ್ರಕಾಶ್ ಶೆಟ್ಟಿಯ ಮೇಲೆ ಹಲ್ಲೆ ನಡೆಸಿದವರು ಪಲ್ಸಾರ್ ಬೈಕಿನಲ್ಲಿ ಬಂದಿದ್ದರು. ಖಾದರ್ ಬಳಿಯೂ ಒಂದು ಪಲ್ಸಾರ್ ಬೈಕು ಇದೆ; ಖಾದರ್ ಎಂಬ ಮುಸ್ಲಿಮ್ ಹೆಸರೂ ಇದೆ. ಪೊಲೀಸರಿಗೆ ಅವರ ಬಗ್ಗೆ ಸಂದೇಹಪಡಲು ಇನ್ನು ಯಾವ ಪ್ರೂಫ್ ಬೇಕು? ಖಾದರ್ ಅವರನ್ನು ಉಡುಪಿಯ ಸರ್ಕಲ್ ಇನ್ಸಪೆಕ್ಟರ್ ಕಚೇರಿಯಲ್ಲಿ ಎರಡು ದಿನ ಇರಿಸಿಕೊಂಡು, ಸರ್ಕಲ್ ಇನ್ಸ್‌ಪೆಕ್ಟರ್ ನನ್ನೊಡನೆ ಹೇಳಿದ ಹಾಗೆ, "ಗೌರವಯುತವಾಗಿ ವಿಚಾರಣೆ ನಡೆಸಿ" ಮನೆಗೆ ಕಳುಹಿಸಿಕೊಡಲಾಯಿತು. ಆದರೆ ಈ "ಗೌರವಯುತ ವಿಚಾರಣೆ"ಯಿಂದಾಗಿ ಖಾದರ್ ತನ್ನ ಉದ್ಯೋಗವನ್ನೇ ಕಳೆದುಕೊಂಡರು. ಅವರು ಪಾಠ ಹೇಳುತ್ತಿದ್ದ ಕಾಪುವಿನ ವಿದ್ಯಾನಿಕೇತನ ಕಾಲೇಜಿನವರು ಅವರನ್ನು ಕಾರಣ ಕೊಡದೆ ವಜಾಗೊಳಿಸಿದರು. ಉಡುಪಿಯ "ಸುಶಿಕ್ಷಿತ"ರಲ್ಲಿ ಯಾರೊಬ್ಬನೂ ಖಾದರ್‌ಗೆ ಆದ ಈ ಅನ್ಯಾಯವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ ಪ್ರಕಾಶ್ ಶೆಟ್ಟಿಯ ಮೇಲೆ ದಾಳಿ ನಡೆಸಿದವರ ಮೇಲೆ ಕ್ರಮ ತೆಗೆದುಕೊಳ್ಳಲು ಭಜರಂಗಿಗಳ ಒತ್ತಡ ಈಗಲೂ ಮುಂದುವರಿದಿದೆ. ನಸೀಬುಗೆಟ್ಟ ಯಾವನಾದರೂ ಮುಸ್ಲಿಮನೊಬ್ಬನನ್ನು ಆ ಕೇಸಿನಲ್ಲಿ ಫಿಟ್ ಮಾಡದೆ ಪೊಲೀಸರಿಗೆ ನಿರ್ವಾಹವೇ ಇಲ್ಲದಂತಾಗಿದೆ.

7ರ ಸಂಜೆ, ಇಮ್ರಾನ್‌ರನ್ನು ಕಾನೂನು ಪ್ರಕಾರ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿ ಕೋರ್ಟಿನ ಮುಂದೆ ಹಾಜರುಪಡಿಸಲಾಯಿತು. ಉಡುಪಿ ನಗರ ಠಾಣೆಯಲ್ಲಿ ಜೀಪು ಹತ್ತುವಾಗಲೇ, "ಸೂಳೆಮಗನೆ, ಕೋರ್ಟಿನಲ್ಲಿ ಬಾಯಿಬಿಟ್ಟರೆ ಮೂರು ದಿನ ಕಸ್ಟಡಿ ಎಕ್ಸ್‌ಟೆಂಡ್ ಮಾಡಲು ಕೇಳಿ, ನಿನ್ನನ್ನು ಮತ್ತೆ ಬೆಂಡು ತೆಗೆಯುತ್ತೇವೆ" ಎಂದು ಪಿಸಿಗಳು ಇಮ್ರಾನ್‌ಗೆ ಎಚ್ಚರಿಸಿದ್ದರು. ಆದರೆ ಕೋರ್ಟಿನ ಮಹಿಳಾ ನ್ಯಾಯಾಧೀಶರ ಎದುರು, ಪೊಲೀಸರು ತನಗೆ ನೀಡಿದ ಹಿಂಸೆಯನ್ನು ಇಮ್ರಾನ್ ವಿವರವಾಗಿ ಹೇಳಿದರು. ಆವೇಳೆಗೆ ಅವರಿಗೆ ನೆಟ್ಟಗೆ ನಿಲ್ಲುವುದಕ್ಕೂ ಆಗುತ್ತಿರಲಿಲ್ಲ. ನ್ಯಾಯಾಧೀಶರು ಇಮ್ರಾನ್‌ಗೆ ಜಾಮೀನಿನ ಮೇಲೆ ಬಿಡುಗಡೆ ಮಾಡುವುದರ ಜೊತೆಗೆ, ನಗರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮತ್ತು ಇತರ ಸಿಬ್ಬಂದಿಯ ಮೇಲೆ ದೂರು ದಾಖಲಿಸುವಂತ ಆದೇಶ ನೀಡಿದ್ದಾರೆ. ಉಡುಪಿಯ ಸಿಟಿ ಹಾಸ್ಪಿಟಲ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಮ್ರಾನ್‌ರ ಹೇಳಿಕೆಯನ್ನು ಈಗ ಅದಕ್ಕಾಗಿ ನಿಯುಕ್ತಗೊಂಡ ಪೊಲೀಸರು ಪಡೆದುಕೊಂಡಿದ್ದಾರೆ.

ಈ ಘಟನೆ ನಡೆದ ನಾಲ್ಕೈದು ದಿನಗಳ ನಂತರವೂ ಇಮ್ರಾನ್ ದೇಹದ ಬಲಭಾಗವಿಡೀ ಅವರ ಸ್ವಾಧೀನದಲ್ಲಿ ಇಲ್ಲ. ಅವರಿಗೆ ಉಣ್ಣಲು, ಕುಡಿಯಲು ಸಹ ಆಗುತ್ತಿಲ್ಲ. ಅವರ ದೇಹದ ಎಲ್ಲ ಕಡೆ ಪೆಟ್ಟು ಬಿದ್ದಿದೆ ಎಂದು ವೈದ್ಯರು ಹೇಳುತ್ತಾರೆ; ಆದರೆ ಒಂದೇ ಒಂದು ಗಾಯದ ಗುರುತೂ ಕಾಣಿಸುವುದಿಲ್ಲ. ಅಂದರೆ ಉಡುಪಿ ನಗರ ಠಾಣೆಯಲ್ಲಿ ಅವರಿಗೆ ಮಾಮೂಲಿ ಪೊಲೀಸ್ ಟ್ರೀಟ್‌ಮೆಂಟನ್ನೇ ಕೊಡಲಾಗಿದೆ.

ಇಮ್ರಾನ್ ತನ್ನ ಮೇಲೆ ನಡೆದ ಹಿಂಸೆಯನ್ನು ವಿವರಿಸುತ್ತ "ನನಗೆ ಚೂರು ತ್ರಾಣವಿದ್ದಿದ್ದರೆ ನಾನು ಪೊಲೀಸರಿಗೆ ತಿರುಗಿ ಹೊಡೆಯಬೇಕೆನಿಸುತ್ತಿತ್ತು" ಎಂದರು. ಅವರು ಹಾಗೇನಾದರೂ ಮಾಡಿದ್ದರೆ ಠಾಣೆಯಲ್ಲಿ ಪೊಲೀಸರು ಅವರಿಗೆ ಒಂದು ಗತಿ ಕಾಣಿಸಿಬಿಡುತ್ತಿದ್ದರು. ದೇವರದಯೆ! ಕೈ ಎತ್ತುವ ತ್ರಾಣವಿಲ್ಲದೆ ಇಮ್ರಾನ್ ಬಚಾವಾದರು. ■

ಬೆಂಗಳೂರು: ಶಾಸಕರಾಗಲು ಭೂಗಳ್ಳರ ಲಗ್ಗೆ




ಕುಪೇಂದ್ರ ರೆಡ್ಡಿ


ಸದ್ಯ ಬೆಂಗಳೂರಿಗೆ ಎದುರಾಗಿರುವ ಅತೀದೊಡ್ಡ ಅಪಾಯವೇ ಇಂಥ ಭೂಕಂಟಕರೆಲ್ಲ ಎಮ್ಮೆಲ್ಲೆಗಳಾಗಲು ಹೊರಟಿರುವುದು. ಇವರ್‍ಯಾರಿಗೂ ದುಡ್ಡಿಗೆ ಕೊರತೆಯಿಲ್ಲ. ಅದೂ ಪಾಪದ ದುಡ್ಡು. ಕೆರೆಭೂಮಿ, ಚರಂಡಿ ಭೂಮಿ, ಪಾರ್ಕಿಗೆಂದು ಮೀಸಲಿಟ್ಟ ಭೂಮಿ, ಬೆಂಗಳೂರಿನ ಭವಿಷ್ಯಕ್ಕೆಂದು ಸರ್ಕಾರ ಕಾಯ್ದಿಟ್ಟ ಭೂಮಿಯನ್ನು ಕೊಳ್ಳೇ ಹೊಡೆದ ದುಡ್ಡಿನಲ್ಲೇ ಇವರೆಲ್ಲ ಶಾಸಕರಾಗುತ್ತಿದ್ದಾರೆ.

ಕುರಿಕಾಯಲು ತೋಳ ಬಿಡುವುದಕ್ಕೂ, ನೆಲಗಳ್ಳನೇ ಗೆದ್ದು ಎಮ್ಮೆಲ್ಲೇಯಾಗುವುದಕ್ಕೂ ಅಂಥ ವ್ಯತ್ಯಾಸಗಳಿರುವುದಿಲ್ಲ. ಏನೂ ಇಲ್ಲದೇ ಕೆರೆಭೂಮಿ, ಪಾರ್ಕ್ ನಿವೇಶನ, ಸರ್ಕಾರಿ ಜಮೀನು, ರಾಜಾಕಾಲುವೆ ಕೊಳ್ಳೇ ಹೊಡೆದವನಿಗೆ ಪಾರ್ಟಿ ಟಿಕೆಟ್ ಸಿಕ್ಕಿ, ಶಾಸಕನಾಗಿ ರಾಜ್ಯಾಧಿಕಾರ ಸಿಕ್ಕಿಬಿಟ್ಟರೆ ಗತಿಯೇನು?


ಸದ್ಯ ಬೆಂಗಳೂರಿಗೆ ಎದುರಾಗಿರುವ ಅತೀದೊಡ್ಡ ಅಪಾಯವೇ ಇಂಥ ಭೂಕಂಟಕರೆಲ್ಲ ಎಮ್ಮೆಲ್ಲೆಗಳಾಗಲು ಹೊರಟಿರುವುದು. ಇವರ್‍ಯಾರಿಗೂ ದುಡ್ಡಿಗೆ ಕೊರತೆಯಿಲ್ಲ. ಅದೂ ಪಾಪದ ದುಡ್ಡು. ಕೆರೆಭೂಮಿ, ಚರಂಡಿ ಭೂಮಿ, ಪಾರ್ಕಿಗೆಂದು ಮೀಸಲಿಟ್ಟ ಭೂಮಿ, ಬೆಂಗಳೂರಿನ ಭವಿಷ್ಯಕ್ಕೆಂದು ಸರ್ಕಾರ ಕಾಯ್ದಿಟ್ಟ ಭೂಮಿಯನ್ನು ಕೊಳ್ಳೇ ಹೊಡೆದ ದುಡ್ಡಿನಲ್ಲೇ ಇವರೆಲ್ಲ ಶಾಸಕರಾಗುತ್ತಿದ್ದಾರೆ. ಸುಮ್ಮನೇ ಲೆಕ್ಕ ಹಾಕಿ ನೋಡಿ; ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ಗಳ ಎಮ್ಮೆಲ್ಲೆ ಟಿಕೆಟ್



ಹರಿ ರೆಡ್ಡಿ



ಉದಯ್ ಗರುಡಾಚಾರ್



ಎಚ್.ಕೆ. ಮುತ್ತಪ್ಪ

ಆಕಾಂಕ್ಷಿಗಳ ಪೈಕಿ ಒಬ್ಬ ಜನಪರ ಹೋರಾಟಗಾರ, ಚಿಂತಕ, ಸಾಹಿತಿ, ಕಾರ್ಮಿಕ ನಾಯಕ, ದಲಿತ ಮುಖಂಡ, ರೈತ ನಾಯಕರು ಕಾಣಸಿಗುತ್ತಾರಾ? ಪಕ್ಷಗಳು ಕರೆಕರೆದು ಟಿಕೆಟ್ ಕೊಡುತ್ತಿರುವುದಾದರೂ ಎಂಥವರಿಗೆ?


ಬೆಂಗಳೂರು ಕಂಡ ಪರಮ ಕುಖ್ಯಾತ ಭೂ ಡಕಾಯಿತ ಗರುಡಾ ಮಾಲ್ ಖದೀಮ ಉದಯ್ ಗರುಡಾಚಾರ್‌ಗೆ ಚಿಕ್ಕಪೇಟೆಯ ಬಿಜೆಪಿ ಟಿಕೆಟ್ ಸಿಕ್ಕಿಯಾಗಿದೆ. ಈತನಿಗಿಂತಲೂ ಅನಾಹುತಕಾರಿ ಕುಪೇಂದ್ರರೆಡ್ಡಿ ಹೊಸ ಕೃಷ್ಣರಾಜಪುರ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಆಕಾಂಕ್ಷಿ. ಯಾವಷ್ಟೋವ ಸರ್ಕಾರಿ ಭೂಮಿಯನ್ನು ದೋಚಿಕೊಂಡೇ ಕೋಟ್ಯಾಧೀಶ್ವರನಾದ ನಂದೀಶ್‌ರೆಡ್ಡಿ ಎಂಬ ಬಿಜೆಪಿ ಯುವ ಮೋರ್ಚಾ ಖಜಾಂಚಿಯೊಬ್ಬ ತನಗೇ ಕೆ.ಆರ್. ಪುರಕ್ಕೆ ಬಿಜೆಪಿ ಟಿಕೆಟ್ ಕೊಟ್ಟರೆ ಹತ್ತು ಕೋಟಿಯಷ್ಟು ಪಾರ್ಟಿ ಫಂಡ್ ಕೊಡಲು ಗಂಟು ಹೊತ್ತು ಲಾಬಿಗಿಳಿದಿದ್ದಾನೆ. ಪದ್ಮನಾಭನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಿರೆಡ್ಡಿ ಎಂಬ ಇನ್ನೊಬ್ಬ ನೆಲಹಿಡುಕನಿಗೆ ಅದೇ ಪದ್ಮನಾಭನಗರದಿಂದ ಗೆದ್ದು ಎಮ್ಮೆಲ್ಲೇಯಾಗುವ ಖಯಾಲಿ!

ಹಿಂದೊಮ್ಮೆ ಹನ್ನೆರಡು ಮಂದಿ ಎಮ್ಮೆಲ್ಲೆಗಳನ್ನು ಗೆಲ್ಲಿಸಿ ಕಳಿಸುತ್ತಿದ್ದ ಬೆಂಗಳೂರಿಂದು 28 ಮಂದಿ ಶಾಸಕರನ್ನು ಸೃಷ್ಟಿಸಬೇಕು. ಅಲ್ಲಿಗೆ ಹದಿನಾರು ಮಂದಿ ಹೊಸ ಎಮ್ಮೆಲ್ಲೆಗಳು ಹುಟ್ಟಿಕೊಳ್ಳುತ್ತಾರೆ. ಬೆಂಗಳೂರಿನ ಮಟ್ಟಿಗೆ ಎಮ್ಮೆಲ್ಲೆ ಚುನಾವಣೆಯೆಂದರೇ ಅದು ಕಮ್ಮಿಯೆಂದರೂ ಐದು ಕೋಟಿಯ ಬಾಬತ್ತು. ಐದು ಕೋಟಿ ಸುರಿದು ಶಾಸಕನಾಗಲು ಹೊಂಟವನಿಗೆ ಆ ಪಾಟಿ ದುಡ್ಡು ಭೂಕೊಳ್ಳೆಯಿಂದಲ್ಲದೇ ಬೇರಾವುದೇ ದಂಧೆಯಿಂದ ಹುಟ್ಟಲು ಸಾಧ್ಯವಿಲ್ಲ. ಅದೂ ಸರ್ಕಾರಿ ಭೂಮಿ ದೋಚಿಯೇ ತಾನೇ ಬರಬೇಕು?

ಲ್ಯಾಂಡ್ ಗ್ರಾಬಿಂಗ್ ಎಂದರೆ ಅಕ್ಷರಶಃ ಊರು ಕೊಳ್ಳೆಯಲ್ಲದೇ ಮತ್ತೇನಲ್ಲ. ಇಂಥವನೊಬ್ಬ ಕೊಳ್ಳೆಯ ದುಡ್ಡು ಸುರಿದೇ ಎಮ್ಮೆಲ್ಲೇಯಾದನೆಂದರೆ ಅಳಿದುಳಿದ ಸರ್ಕಾರಿ ಭೂಮಿಯನ್ನೂ ದೋಚದೇ ಬಿಡುತ್ತಾನಾ?

ಈಗ ಬೆಂಗಳೂರಿಗೆ ಕಂಟಕವಾಗಿ ಪರಿಣಮಿಸಿದ ಇಂಥ ಮೂವತ್ತಕ್ಕೂ ಹೆಚ್ಚು ಭೂಚೋರರೇ ಇವತ್ತು ಬೇರೆಬೇರೆ ಪಕ್ಷಗಳ ಅಭ್ಯರ್ಥಿಗಳ ರೂಪದಲ್ಲಿ ಪುನರವತರಿಸಲಿದ್ದಾರೆ. ಈ ಪೈಕಿ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಕೇಳುತ್ತಿರುವ ಎಸ್. ಹರೀಶ್ ಉರ್ಫ್ ನಾಯಿ ಹರೀಶ ಎಂಬ ಪುಡಿ ರೌಡಿಯೊಬ್ಬ ಪಾರ್ಕ್ ಜಮೀನು ಕದ್ದೇ ಕುಬೇರನಾದವನು. ಕನಕಪುರದ ಮಾಜಿ ಸಂಸದ ಎಂ. ಶ್ರೀನಿವಾಸ್ ತಮ್ಮ ಕೃಷ್ಣಪ್ಪ ಹುಟ್ಟಾ ಭೂಗಳ್ಳ. ಈತನಿಗೆ ಯಶವಂತಪುರದಿಂದ ಬಿಜೆಪಿ ಟಿಕೆಟ್ ಕೊಡುತ್ತಿದೆ. ಬಿಟಿಎಂ ಲೇಔಟ್ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೇಳುತ್ತಿರುವ ಎಚ್.ಕೆ. ಮುತ್ತಪ್ಪ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ರೂವಾರಿಗಳಲ್ಲೊಬ್ಬ. ಜಯನಗರಕ್ಕೆ ಬಿಜೆಪಿಯಿಂದ ಸ್ಪರ್ಧಿಸಹೊಂಟ ಪ್ರಳಯಾಂತಕ ಪ್ರಸಾದ್ ರೆಡ್ಡಿ, ಬೊಮ್ಮನಹಳ್ಳಿಗೆ ಬಿಜೆಪಿ ಟಿಕೆಟ್ ಬಯಸಿರುವ ಅಶ್ವತ್ಥನಾರಾಯಣರೆಡ್ಡಿ, ಸತೀಶ್‌ರೆಡ್ಡಿ, ಗುರುಮೂರ್ತಿರೆಡ್ಡಿ, ಎರಡು ಕೋಟಿ ಕೊಟ್ಟಾದರೂ ಯಲಹಂಕಕ್ಕೆ ಬಿಜೆಪಿ ಟಿಕೆಟ್ ಖರೀದಿಗೆ ನಿಂತ ವಿಶ್ವನಾಥ್ ರೆಡ್ಡಿ, ಬಸವನಗುಡಿ ಬಿಜೆಪಿ ಟಿಕೆಟ್ಟಿಗಾಗಿ ಐದು ಕೋಟಿ ಪಾರ್ಟಿ ಫಂಡ್ ಕೊಡುತ್ತೇನೆಂದು ಲಾಬಿಗೆ ನಿಂತ ಎಪಿಎಸ್ ಕಾಲೇಜು ಖದೀಮ ದೊರೆಸ್ವಾಮಿ ನಾಯ್ಡು, ಜಯನಗರಕ್ಕೆ ತನಗೆ ಬಿಜೆಪಿ ಟಿಕೆಟ್ ಬೇಕೆಂದು ಹಠಕ್ಕೆ ಬಿದ್ದ ಜೆ.ಪಿ. ನಗರದ ಮಾಜಿ ಕೌನ್ಸಿಲರ್ ಎಸ್.ಕೆ. ನಟರಾಜ್ ರೆಡ್ಡಿ, ಶಾಂತಿನಗರದ ಬಿಜೆಪಿ ಟಿಕೆಟ್ಟಿಗಾಗಿ ಏನು ಬೇಕಾದರೂ ಮಾಡಲು ಅಣಿಯಾದ ಗೋಪಾಲ್‌ರೆಡ್ಡಿ, ಪದ್ಮನಾಭನಗರದಿಂದ ಕಾಂಗ್ರೆಸ್ಸಿಗೆ ನಿಲ್ಲಲು ರೆಡಿಯಾಗಿರುವ ಕತ್ರಿಗುಪ್ಪೆ ಮುನಿರಾಜು, ಬೊಮ್ಮನಹಳ್ಳಿಯಿಂದ ಯಾವುದೇ ಪಕ್ಷದ ಟಿಕೆಟ್ಟಾದರೂ ಹಣ ಸುರಿಯುತ್ತೇನೆನ್ನುವ ಸತೀಶ್‌ರೆಡ್ಡಿ; ಹೀಗೆ ಯಾರೆಲ್ಲ ಕಾಸು ಕೊಟ್ಟು ಒಂದಲ್ಲಾ ಒಂದು ಪ್ರಭಾವಿ ಪಕ್ಷದ ಟಿಕೆಟ್ ಖರೀದಿಗಿಳಿದಿದ್ದಾರೋ ಅವರೆಲ್ಲರೂ ಬೆಂಗಳೂರು ಕಂಡ ಅನಾಹುತಕಾರಿ ಭೂಕಂಟಕರೆ.


ಈ ದಿನ ಅಂದರೆ 2008 ರ ಮಾರ್ಚ್ 16 ರಂದು ಯಡ್ಡಿ ಸನ್ನಿಧಿಯಲ್ಲಿ ಅಧಿಕೃತವಾಗಿ ಬಿಜೆಪಿಗೆ ಜಮೆಯಾದ ಉದಯ್ ಗರುಡಾಚಾರ್ ಒಬ್ಬನೇ ಇನ್ನೂರು ಕೋಟಿಗೂ ದೊಡ್ಡ ಮೊತ್ತದ ಪಾಲಿಕೆ ಭೂಮಿಯನ್ನು ದೋಚಿದ್ದಾನೆ. ಈತ ರಾಜ್ಯ ಕಂಡ ಅತ್ಯಂತ ಜನಾನುರಾಗಿ ಪೊಲೀಸ್ ಅಧಿಕಾರಿ ಬಿ.ಎನ್. ಗರುಡಾಚಾರರ ಕುಲಪುತ್ರ. ಹುಟ್ಟಾ ಇಸ್ಪೀಟು ಗಿರಾಕಿ. ಇಲ್ಲಿಗೆ ಹತ್ತು ವರ್ಷದ ಹಿಂದೆ ಪಿತ್ರಾರ್ಜಿತವಾಗಿ ಬಂದಿದ್ದ ಗರುಡ ಸೆಕ್ಯೂರಿಟಿ ಏಜೆನ್ಸಿ ಬಿಟ್ಟರೆ ಸಾರಕ್ಕಿ ಲೇಔಟಿನ ತನ್ನ ಮನೆಯಲ್ಲಿ ನಡೆಸುತ್ತಿದ್ದ ರಮ್ಮಿ ಇಸ್ಪೀಟ್ ಟೂರ್ನಿಯೇ ಈತನ ಹೊಟ್ಟೆಪಾಡಾಗಿತ್ತು. ಇವತ್ತು ಮೈಸೂರು ರಸ್ತೆಯ ಗ್ರಾಮಾಂತರ ಬಸ್‌ಸ್ಟಾಂಡಿನಲ್ಲೊಂದು, ಡಬ್ಬಲ್‌ರೋಡಿನ ಬಿಟಿಎಸ್ ಡಿಪೋದಲ್ಲೊಂದು ಬಿಗ್‌ಬಜಾರ್ ಮಳಿಗೆ ತೆಗೆದು ಬಾಡಿಗೆಗೆ ಬಿಟ್ಟಿದ್ದಾನೆ. ಇವೆರಡೂ ಈತ ಕೊಳ್ಳೇ ಹೊಡೆದ ಸಾರಿಗೆ ಇಲಾಖೆಯ ಆಸ್ತಿಗಳಾದರೆ, ಇದಕ್ಕಿಂತಲೂ ದೊಡ್ಡ ಆಸ್ತಿ ದೋಚಿದ್ದು ಗರುಡಾ ಮಾಲ್ ಹಗರಣದಲ್ಲಿ.



ಎಸ್. ಜಯರಾಮರೆಡ್ಡಿ



ಎಸ್. ಹರೀಶ್



ಪ್ರಸಾದ್ ರೆಡ್ಡಿ

ಗರುಡಾ ಮಾಲ್ ಬೆಂಗಳೂರಿನ ಅತೀದೊಡ್ಡ ವಾಣಿಜ್ಯ ಕೇಂದ್ರಗಳಲ್ಲೊಂದು. ಸದ್ಯ ಐನಾಕ್ಸ್ ಥೇಟರುಗಳ ಕಾಂಪ್ಲೆಕ್ಸ್, ಬೃಹತ್ತಾದ ಶಾಪಿಂಗ್ ಮಾಲ್, ರೆಸ್ಟೋರೆಂಟ್ ಇತ್ಯಾದಿಗಳಿರುವ ಗರುಡಾ ಮಾಲ್ 2005 ಕ್ಕೂ ಮುನ್ನ ಬೆಂಗಳೂರು ಮಹಾನಗರ ಪಾಲಿಕೆಯ ಕಸದ ಲಾರಿಗಳ ಪಾರ್ಕಿಂಗ್ ತಾಣವಾಗಿತ್ತು. ಎಂ.ಜಿ.ರೋಡ್ ಸುತ್ತಮುತ್ತಲ ನಾಲ್ಕೂವರೆ ಎಕರೆ ಜಮೀನೆಂದರೆ ಇವತ್ತಿನ ಮಾರುಕಟ್ಟೆ ರೇಟಿಗದು ಕಮ್ಮಿಯೆಂದರೂ ನಾನೂರೈವತ್ತು ಕೋಟಿಯ ಸೊತ್ತು. ಎಂ.ಜಿ. ರೋಡ್, ಬ್ರಿಗೇಡ್ ರೋಡ್ ಸುತ್ತಮುತ್ತ ಹೆಜ್ಜೆಯಿಡುವುದಕ್ಕೂ ಜಾಗವಿಲ್ಲದ ಇವತ್ತಿನ ದುರವಸ್ಥೆಯಲ್ಲಿ ಪಾಲಿಕೆಗೆ ರವಷ್ಟಾದರೂ ಜನಕಾಳಜಿಯಿದ್ದಿದ್ದರೆ ಅದನ್ನು ಸಾರ್ವಜನಿಕ ಪಾರ್ಕಿಂಗ್ ಸೌಕರ್ಯಕ್ಕಾಗಿ ಉಳಿಸಿಕೊಳ್ಳಬೇಕಿತ್ತು. ಆದರೆ ಆ ಹೊತ್ತಿಗೆ ಪಾಲಿಕೆಗೆ ಕಮೀಷನರ್ ಆಗಿದ್ದ ಜ್ಯೋತಿರಾಮಲಿಂಗಂ ಮತ್ತು ತನ್ನ ಮನೆಗೆ ಇಸ್ಪೀಟಾಗಲು ಬರುತ್ತಿದ್ದ 'ಸಿನಿಮಾ ಸಂಸದ' ಅಂಬಿಯನ್ನು ಮುಂದಿಟ್ಟುಕೊಂಡು ಉದಯ್ ಗರುಡಾಚಾರ್ ಭಾರೀ ಕೊಳ್ಳೆಯೊಂದಕ್ಕೆ ಡೀಲು ಕುದುರಿಸಿದ.

ಇದರ ಪರಿಣಾಮವೇ ಪಾಲಿಕೆಯ ನಾಲ್ಕೂವರೆ ಎಕರೆ ವಿಸ್ತೀರ್ಣದಲ್ಲಿ ತಲೆ ಎತ್ತಿದ ಅಪಾಯಕಾರಿ ಗರುಡಾ ಮಾಲ್!

ವರ್ಷಕ್ಕೆ ನಾಲ್ಕೂವರೆ ಕೋಟಿಯಷ್ಟು ತೆರಿಗೆ ಕಟ್ಟುವ ಒಪ್ಪ... ಮಾಡಿಕೊಂಡು ಮೂವತ್ತು ವರ್ಷಗಳ ಗುತ್ತಿಗೆ ಆಧಾರದ ಮ... ಪಾಲಿಕೆಯ ನಾಲ್ಕೂವರೆ ಎಕರೆಗೆ ವಕ್ಕರಿಸಿದ ಉದಯ್ ಗುರುಡಾಚ... ಅದಕ್ಕೆಂದು ಆಗ ಮುಖ್ಯಮಂತ್ರಿಯಾಗಿದ್ದ ಕೃಷ್ಣರ ಅಳಿಯ ಸಿದ್ಧಾ... ಡೀಕೇಶಿ ತಮ್ಮ ಸೂರಿ, ಆರ್.ವಿ. ದೇಶಪಾಂಡೆ ಪತ್ನಿ ರಾಧಾ, ... ದೇಶಪಾಂಡೆ ಜೊತೆ ಅಂಬಿಯನ್ನೂ ಪಾಲುದಾರರನ್ನಾಗಿಸಿಕೊಂಡು ಮಾವ... ಹೋಲ್ಡಿಂಗ್ಸ್ (ಪ್ರೈ) ಲಿಮಿಟೆಡ್ ಎಂಬ ಕಂಪೆನಿಯೊಂದನ್ನು ಹುಟ್ಟುಹಾ... ಕಾಟಾಚಾರಕ್ಕೆ ಪಾಲಿಕೆಯಿಂದ ಟೆಂಡರ್ ಕರೆದಂತೆ ಮಾಡಿ ತನ್ನ ಮಾವ... ಹೋಲ್ಡಿಂಗ್ಸ್ ಜೊತೆ ಪೈಪೋಟಿಗಿರಲಿ ಎಂದು ತಾನೇ ಆಕ್ಸ್... ಹೋಲ್ಡಿಂಗ್ಸ್ ಎಂಬ ಕಂಪೆನಿಯೊಂದನ್ನು ಸೃಷ್ಟಿಸಿದ. ತಾನು ಕೇ... ರೇಟಿಗೆ ಪಾಲಿಕೆ ಆಸ್ತಿ ದಕ್ಕುವಂತೆ ನೋಡಿಕೊಂಡ. ಬೇರೆ ಯಾವ... ಕಂಪೆನಿ ಬಿಡ್ ಮಾಡದೇ ಇದ್ದುದರಿಂದ, ಪೈಪೋಟಿಯಲ್ಲಿದ್ದದ್ದೂ ಈ... ಸೃಷ್ಟಿಸಿದ ನಕಲಿ ಕಂಪೆನಿಯಾದ್ದರಿಂದ ಅನಾಯಾಸವಾಗಿ ಪಾಲಿಕೆ... ನಾಲ್ಕೂವರೆ ಎಕರೆ ಕಮರ್ಷಿಯಲ್ ಭೂಮಿ ಉದಯ್ ಗರುಡಾಚಾ... ಪಾಲಾಯಿತು. ಜಾಯಿಂಟ್ ವೆಂಚರ್ ಆಧಾರದ ಮೇರೆಗೆ ಪಾ... ಜೊತೆ ಒಪ್ಪಂದವನ್ನೂ ಮಾಡಿಕೊಂಡ. ಆ ಪ್ರಕಾರವೇ ಈತನ ಪ್ರಾ... ಮೌಲ್ಯಕ್ಕೆ ತಕ್ಕಂತೆ ಸರ್ಕಾರಕ್ಕೆ ಒಂದೂವರೆ ಕೋಟಿಯಷ್ಟು ಸ್ಟಾ... ಡ್ಯೂಟಿ ಕಟ್ಟಬೇಕಿತ್ತು. ದುರಂತವೆಂದರೆ ಪಾಲಿಕೆ ಕಮೀಷ... ಜ್ಯೋತಿರಾಮಲಿಂಗಂ ಕೂಡ ಸ್ಟಾಂಪ್ ಡ್ಯೂಟಿ ವಂಚನೆಗೆ ಕೈಜೋ... ಕೇವಲ 200 ರೂಪಾಯಿಯ ಛಾಪಾಕಾಗದದಲ್ಲಿ ಅಗ್ರಿಮೆಂ... ಮಾಡಿಕೊಂಡರು.

ನಾನೂರೈವತ್ತು ಕೋಟಿಯ ಪಾಲಿಕೆ ಸೊತ್ತನ್ನು ವರ್ಷಕ್ಕೆ ಯಕ... ನಾಲ್ಕೂವರೆ ಕೋಟಿ ಬಾಡಿಗೆ ಆಧಾರದ ಮೇಲೆ ದೋಚಿದ್ದ ಉದ... ಗರುಡಾಚಾರ್ ಸ್ಟಾಂಪ್ ಡ್ಯೂಟಿ ವಂಚಿಸಿದ ಕಾರಣಕ್ಕೆ ಯಾವತ್ತೋ ಜೈಲಿಗೂ ಹೋಗಬೇಕಿತ್ತು. ಇವತ್ತು ಗರುಡಾ ಮಾಲ್ ಇಡೀ ಎಂ... ರೋಡ್ ಸುತ್ತಮುತ್ತಲ ಪ್ರದೇಶಕ್ಕೇ ಕಂಟಕವಾಗಿದೆ. ಇಲ್ಲಿಗೆ ವರ್ಷ... ಹಿಂದೆ ಮಗುವೊಂದು ಮಹಡಿಯಿಂದ ಬಿದ್ದು ಸತ್ತೇ ಹೋಯಿ... ಲಿಫ್ಟ್ ಕೆಟ್ಟು ಮಹಿಳೆಯೊಬ್ಬಳು ಕಾಲು ಮುರಕೊಂಡಳು. ಹತ್ತಡಿಯ... ಸಣ್ಣ ಅಂಗಡಿಯೊಂದಕ್ಕೆ ತಿಂಗಳೊಂದಕ್ಕೆ ಐದು ಲಕ್ಷದ ಬಾಡಿಗೆ ವಸೂ... ಮಾಡುವ ಉದಯ್ ಗರುಡಾಚಾರ್ ಪಾಲಿಕೆಗೆ ಕಟ್ಟುವುದು ಪುಡಿಗಾಸು...

ಗರುಡಾ ಮಾಲ್ ಹಗಲು ದರೋಡೆಯ ವಿರುದ್ಧ ಆವತ್ತು ಬೆಂಗಳೂರಿನ ಒಬ್ಬನೇ ಒಬ್ಬ ಕೌನ್ಸಿಲರ್ ದನಿಯೆತ್ತಲಿಲ್ಲ. ಬಹುಶಃ ಪಾಲಿ... ಇತಿಹಾಸದಲ್ಲಿ ಗರುಡಾ ಮಾಲ್ ಭೂಕೊಳ್ಳೆಗಿಂತಲೂ ದೊಡ್ಡ ದುರಾಚಾ... ಮತ್ತೊಂದಿಲ್ಲ.

ಇದು ಉದಯ್ ಗರುಡಾಚಾರನ ಒಂದು ಮುಖವಾದರೆ ಈಜಿಪುರದ ಬಡವರ ವಸತಿ ಸಮುಚ್ಛಯ ಹದಿನೈದು ಎಕರೆ ಪಾಲಿಕೆ ಭೂಮಿಯನ್ನು ಇದೇ ಉದಯ್ ಗರುಡಾಚಾರ್ ದೋಚಿದ್ದು ಈತನ ಭೂದರೋಡೆಗೆ ಮತ್ತೊಂದು ಉದಾಹರಣೆ. ಈಜಿಪುರದ 15 ಎಕರೆ ಪಾಲಿಕೆ ಜಮೀನಿನಲ್ಲಿ ಯಾವುದೋ ಕಾಲಕ್ಕೆ ಕಟ್ಟಿದ ಸರ್ಕಾರಿ ಬಿಲ್ಡಿಂಗಿನಲ್ಲಿ 1612 ಬ...

CMYK

ಮುಗಳಿವೆ. ಶಿಥಿಲ ಕಳಪೆಯಾದ್ದರಿಂದ ಅದನ್ನು ನೆಲಸಮ ಮಾಡಿ ಮತ್ತೆ 42 ಅಪಾರ್ಟ್‌ಮೆಂಟುಗಳನ್ನು ಕಟ್ಟಿ ಅಲ್ಲಿನ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವುದು ಮು ಪ್ರಾಶಸ್ತ್ಯವಾಗಿತ್ತು, ಅದಕ್ಕೆಂದ 2004ರ ಅಕ್ಟೋಬರ್‌ನಲ್ಲಿ ಪಾಲಿಕೆ ಟೆಂಡರ್ ಹೊರಡಿಸಿತು.

ಲಿಕೆ ವಿಧಿಸಿದ ಷರತ್ತೆಂದರೆ 15 ಎಕರೆ ಜಾಗದಲ್ಲಿ ಬಡವರ ಅಪಾರ್ಟ್‌ಮೆಂಟ್ ಳಿಕೆ ಭೂಮಿಯನ್ನು ಗುತ್ತಿಗೆ ಪಡೆದಾತ ವಾಣಿಜ್ಯೋದ್ದೇಶಕ್ಕೆ ಬಳಸಿಕೊಳ್ಳಬಹುದು. ರ ಪ್ರತಿ 3 ತಿಂಗಳಿಗೆ ಒಂದೂವರೆ ಕೋಟಿಯಂತೆ ಅತೀಹೆಚ್ಚು ಬಾಡಿಗೆ ಸಿದ್ಧವಿದ್ದದ್ದು ಆಕೃತಿ ನಿರ್ಮಾಣ್ ಕಂಪೆನಿ. ಕಾನೂನುರೀತ್ಯ ಆಕೃತಿ ನಿರ್ಮಾಣ್ ಗೇ ಗುತ್ತಿಗೆ ಸಿಗಬೇಕು. ಆದರೆ ಕುಂಟುನೆಪವೊಡ್ಡಿದ ಪಾಲಿಕೆ ಕಮೀಷನರ್ ರಾಮಲಿಂಗಂ ಉದಯ್ ಗರುಡಾಚಾರನ ಮಾವೆರಿಕ್ ಹೋಲ್ಡಿಂಗ್ ಕಂಪೆನಿಗೆ ಬಹಿರವಾಗಿ ಗುತ್ತಿಗೆ ಕೊಟ್ಟರು. ಅದೂ ಎಂಥಾ ಹಗಲು ದರೋಡೆಯೆಂದರೆ ಮೂರು ತಿಂಗಳಿಗೆ ಒಂದು ಕೋಟಿ ಮೂವತ್ತೈದು ಲಕ್ಷದ ಬಾಡಿಗೆ ಆಧಾರದ ಹದಿನೈದೆಕರೆ ಪಾಲಿಕೆ ಭೂಮಿ ಉದಯ್ ಗರುಡನ ಪಾಲಾಯಿತು. ಈ ರ್ಥವೆಂದರೂ ಕನಿಷ್ಠ ಏಳೂವರೆ ಎಕರೆ ಪಾಲಿಕೆ ಭೂಮಿ ಗರುಡಾ ಖದೀಮನ ಗುತ್ತದೆ.

ಗುತ್ತಿಗೆಯಲ್ಲೂ ಲಾಭ

ವಲ್ಲದೇ ಮೈಸೂರು ರಸ್ತೆಯ ಕೆಎಸ್ಸಾರ್ಟಿಸಿ ಬಸ್ ಸ್ಟ್ಯಾಂಡ್ ಮತ್ತು ಕೆಂಗಲ್ ಂತಯ್ಯ ರಸ್ತೆಯ ಬಿಟಿಎಸ್ ಡಿಪೋಗಳಲ್ಲಿ ಅಗದೀ ದರಕ್ಕೆ ಸರ್ಕಾರಿ ಆಸ್ತಿಯನ್ನು ಗೆ ಪಡೆದು ಅದನ್ನು ದುಬಾರಿ ಬಾಡಿಗೆಗೆ ಬಿಗ್ ಬಜಾರ್‌ಗೆ ನೀಡಿಕೊಂಡು ದೋಚುತ್ತಲೇ ಇದ್ದಾನೆ ಉದಯ್ ಗರುಡಾಚಾರ್.

ಮ ಉದಯನ ಸರ್ಕಾರಿ ಸೊತ್ತು ಕೊಳ್ಳೆಗೆ ಕೆಲ ಉದಾಹರಣೆಗಳಷ್ಟೆ. ಹತ್ತು ಹಿಂದೆ ತನ್ನ ಮನೆಯಲ್ಲೇ ಇಸ್ಪೀಟ್ ಟೂರ್ನಿ ನಡೆಸಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ ದ್ ಇಂದು ಕಮ್ಮಿಯೆಂದರೂ ಐನೂರು ಕೋಟಿಯ ಆಸ್ತಿವಂತ. ಇಂಥ ನಾಯಿತನೊಬ್ಬ ಚಿಕ್ಕಪೇಟೆಯಿಂದ ಗೆದ್ದು ಎಮ್ಮೆಲ್ಲೆಯಾದನೆಂದರೆ ಇವತ್ತಲ್ಲ ಬ್ಬನ್ ಪಾರ್ಕನ್ನೋ ಲಾಲ್‌ಭಾಗನ್ನೋ ಬಿಡುತ್ತಾನಾ? ಬೇಕಿದ್ದರೆ ಹೈಕೋರ್ಟನ್ನೇ ಹೊರಕ್ಕೆ ಸ್ಥಳಾಂತರಿಸಿ ಅಠಾರಾ ಕಚೇರಿಯನ್ನೇ ನುಂಗಿ ಹಾಕುವ ಚಾಲಾಕಿ ದ್ ಗರುಡಾಚಾರ್.

ಚಿತ್ರವೆಂದರೆ ಇಷ್ಟೆಲ್ಲವನ್ನೂ ಅಂಬಿ, ಕೃಷ್ಣ ದೇಶಪಾಂಡೆಯಂಥ ಕಾಂಗ್ರೆಸ್ ವನ್ನು ಮುಂದಿಟ್ಟುಕೊಂಡೇ ದೋಚಿದ ಉದಯ್ ಈಗ ಬಿಜೆಪಿ ಸೇರುತ್ತಾನೆಂದರೆ ಅಂಬಿಯ ಕಾರಸ್ಥಾನವಲ್ಲದೇ ಮತ್ತೇನಲ್ಲ. ಬಹುಶಃ ತನ್ನ ಛೇಲಾ ಉದಯನನ್ನು ಮು ಬಿಜೆಪಿಗೆ ಕಳಿಸಿ ಆನಂತರ ತಾನು ಶ್ರೀರಂಗಪಟ್ಟಣಕ್ಕೆ ಬಿಜೆಪಿ ಯಾಗುವುದು ಅಂಬಿಯ ತಂತ್ರವೆ?

ನ್ನು ಗರುಡಾಚಾರನೇ ಇಷ್ಟೊಂದು ಭೂಮಿ ದೋಚಿರುವಾಗ ಈ ಥರದ ಮಂದಿ ಟಿಕೆಟ್ ಆಕಾಂಕ್ಷಿಗಳು ಏನೆಲ್ಲಾ ಅನಾಹುತ ಮಾಡಬಲ್ಲರೆಂಬುದಕ್ಕೆ ದು ಉದಾಹರಣೆಯೆಂತಿದ್ದರೆ ಆತ ನಾಯಿ ಹರೀಶ. ಈತ ಬೆಂಗಳೂರು ಬಿಜೆಪಿ ಯುವ ಮೋರ್ಚಾದ ಹಾಲಿ ಅಧ್ಯಕ್ಷ. ಇಸ್ಸನ್ ಪಕ್ಕದ ಪಾಲಿಕೆ ಆಸ್ತಿ ಯೋ ಬಿಜೆಪಿ ನಾಯಕ ಅನಂತ್‌ಕುಮಾರ್ ಪಾಳಯಕ್ಕೆ ಕಾಲಿಟ್ಟ. ಕುಮಾರ್‌ರ ಎಂಪಿ ಫಂಡ್‌ನ ಬಹುತೇಕ ಪಾಲನ್ನು ಬೋಗಸ್ ಬಿಲ್ಲು ನುಂಗಿದ್ದೇ ಈತನ ಮಹತ್ಸಾಧನೆ. ಅದು ಬಿಟ್ಟರೆ ಕಾಮಾಕ್ಷಿಪಾಳ್ಯದ ರಂಗಣ್ಣನ ತ್ರ ಅನಿಲ್ ರಂಗಣ್ಣನ ರೌಡಿ ಪಡೆ ಕಟ್ಟಿಕೊಂಡು ತನ್ನ ಅಕ್ಕಪಕ್ಕದ ಮನೆಯವರ ಯಿಗಳನ್ನು ಅಪಹರಿಸಿ ಹಿಂಸೆ ಕೊಟ್ಟಿದ್ದಾನೆ. ತನ್ನ ಬರ್ತ್‌ಡೇ ಪಾರ್ಟಿಗೆ ರೌಡಿಗಳ ಜೊತೆ ಸೇರಿ ಬೀದಿನಾಯಿಯ ಬಾಲಕ್ಕೆ ಪಟಾಕಿ ಕಟ್ಟಿ ಬೆಂಕಿ ಎಸ್. ಹರೀಶ್ ಉರ್ಫ್ ನಾಯಿ ಹರೀಶನಿಗೆ ಮಹಾಲಕ್ಷ್ಮಿ ಲೇಔಟಿಗೆ ಬಿಜೆಪಿ ಬೇಕಂತೆ!

ಈತನ ಪಕ್ಕದ ಮನೆಯವರೇ ಓಟು ಕೊಡಲ್ಲ. ಇನ್ನು ಕಾಂಗ್ರೆಸ್ಸಿನ ನರೇಂದ್ರ ಗೆಲುವಿಗೆ ಯಾವ ತಡೆ?

ದ್ಮನಾಭನಗರಕ್ಕೆ ಕಾಂಗ್ರೆಸ್ ಟಿಕೆಟ್ ಕೇಳುತ್ತಿರುವ ಹರಿರೆಡ್ಡಿ ಬೇರೆ ಯಾರೂ ಮುಖಾಮುಖಿ ತೇಜಮ್ಮನ ಪಕ್ಕಾ ಛೇಲಾ. ಎರಡು ಕೋಟಿ ಕೊಟ್ಟಾದರೂ ಫಾರ್ಮ್ ತರುತ್ತಾನಂತೆ. ಇಲ್ಲಿಗೆ ಹತ್ತು ವರ್ಷದ ಹಿಂದೆ ಮನೆ ಬ್ರೋಕರಿಕೆ ಕೊಂಡಿದ್ದ ಹರಿರೆಡ್ಡಿಯ ಅಪ್ಪ ಹಾರ್ಮೋನಿಯಂ ವೀರಸ್ವಾಮಿ ರೆಡ್ಡಿ. ಶಾಸ್ತ್ರೀನಗರದ ಲೈನೇ 'ಎ' ಕ್ಲಾಸಿನಲ್ಲಿ ಕೊಳಕು ಬಾಡಿಗೆ ಕೋಣೆಯೊಂದರಲ್ಲಿ ಸಂಸಾರ ಕೊಂಡಿದ್ದ ಹರಿರೆಡ್ಡಿಯ ಸ್ಟಾರ್ ತಿರುಗಿದ್ದೇ ರೋಹಿಣಿ ಚಂದ್ರಪ್ಪ ಎಂಬ ಕಾಂಗ್ರೆಸ್ ಈತನ ರಾಶಿಗೆ ಕಾಲಿಟ್ಟ ಮೇಲೆ. ಆಕೆಯೇ ದೀಕೆಯನ್ನು ಪರಿಚಯಿಸಿಕೊಟ್ಟಳು. ಮುಖಾಮುಖಿ ತೇಜಸ್ವಿನಿಯ ಪರಮಾಪ್ತನಾದ ಹರಿರೆಡ್ಡಿ ಟಾಟಾ ಸಿಲ್ಕ್ ಪಕ್ಕದ ಭೂಮಿಗೆ ವಕ್ಕರಿಸಿ ಅಲ್ಲೊಂದು 'ಕೌಸ್ತುಭ' ಹೆಸರಿನ ಅಪಾರ್ಟ್‌ಮೆಂಟ್ ಬಾರಿಕೊಂಡ. ಗೃಹಪ್ರವೇಶಕ್ಕೆ ಮೊದಲೇ ಅಪಾರ್ಟ್‌ಮೆಂಟ್ ಸೋರುತ್ತಿತ್ತಾದರೂ ಖರೀದಿಸಿದವರ ದುಡ್ಡು ರೆಡ್ಡಿಯ ಕೈ ಸೇರಾಗಿತ್ತು. ಮುಂದೆ ಗೌಡನಪಾಳ್ಯದ ಆಸ್ತಿ ನುಂಗಿ ಅಲ್ಲೊಂದು ಕಾಂಪ್ಲೆಕ್ಸ್ ಎಬ್ಬಿಸಿದ. ಚಿಕ್ಕಲ್ಲಸಂದ್ರದ ಅರಣ್ಯ ಯ ಲ್ಯಾಂಡು ಹೊಡೆದು ಅಲ್ಲಿ ಇನ್ನೊಂದು ಕಾಂಪ್ಲೆಕ್ಸ್ ಕಟ್ಟಿದ. ಆನಂತರ ಡುವಲ್ಲಿ ಪಾರ್ಕ್ ಜಮೀನು ದೋಚಿ ಮಗದೊಂದು ಕಾಂಪ್ಲೆಕ್ಸ್ ಕಟ್ಟಿಸಿ ಬಿಟ್ಟ. 1999ರ ತನಕ ಚಪ್ಪಲಿಗೂ ಗತಿಯಿರಲಿಲ್ಲ, ಇವತ್ತು ಹರಿರೆಡ್ಡಿ ಕೆಂದರೂ 50 ಕೋಟಿಯ ಆಸ್ತಿವಂತ. ಕಾಂಗ್ರೆಸ್ ಟಿಕೆಟ್ಟಿಗೆಂದು ಎರಡು ಕೊಡುವವನು ಗೆದ್ದ ಮೇಲೆ ಸುಮ್ಮನಿರುತ್ತಾನಾ?

ಹರಿರೆಡ್ಡಿಯನ್ನು ಬದಿಗೊತ್ತಿ ತಾನು ಕಾಂಗ್ರೆಸ್ ಟಿಕೆಟ್ ಪಟಾಯಿಸಲು ನಿಂತ ಷ್ಟಿ ಮುನಿರಾಜು ಕೂಡ ಭೂಪತಿಯೇ. ಹಿಂದೆ ಸ್ಲಂ ರಮೇಶ್ ನೇತೃತ್ವದಲ್ಲಿ ರ್ ಕೂಟ್‌ಔಟ್ ಮಾಡಿ ಬಡಪಾಯಿ ಗಂಗಯ್ಯನನ್ನು ಬಲಿತೆಗೆದುಕೊಂಡಾಗ ಪಿಸ್ತೂಲು ಮತ್ತು ಕಾಂಟೆಸ್ಸಾ ಕಾರಿನ ಅಸಲೀ ಧಣಿಯೇ ಕತ್ರಿಗುಪ್ಪೆ ಮುನಿರಾಜು. ಹೀಯೆಂದರೆ ಪದ್ಮನಾಭನಗರಕ್ಕೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆಯೇ ಷ್ಟು. ಈ ಪೈಕಿ ನೂರಕ್ಕೆ ನೂರರಷ್ಟೂ ಆಸಾಮಿಗಳ ಕುಲಕಸುಬೇ ಲ್ಯಾಂಡ್ ಗ್. ಈ ಬಾರಿ ರಿಯಲ್ ಎಸ್ಟೇಟ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ ದಕ್ಕೆ ಇದಕ್ಕಿಂತ 'ಮುನ್ಸೂಚನೆ' ಬೇಕೆ? ■

ರಾ. ಸೋಮನಾಥ್

ಕಮ್ಯುನಿಟಿ ಲೀಡ್ರು ನೀವಲ್ಲವಂತಲ್ಲ ಸಾರ್


ಥೂತ್ತೇರಿ

ಯಾಹೂ

ಕಳೆದ ಹಲವಾರು ತಿಂಗಳಿಂದ ಮಾನ್ಯ ದೇವೇಗೌಡರಲ್ಲಿ ಅಡಗಿಕುಳಿತಿರುವ ದುಗುಡವೇನೆಂದು ಯಾರು ಕೇಳಿಲ್ಲವಂತಲ್ಲಾ, ಯಾರಾದರೂ ಕೇಳಬಹುದೆಂದು ಕಾದೂ, ಕಾದೂ ಸಾಕಾಗಿ ಕಡೆಗೆ ತಾವೇ ಬಾಯಿಬಿಟ್ಟು, "ಈ ಮನೆಹಾಳು ಬಿಜೆಪಿ ಜೊತೆ ಸರ್ಕಾರ ಮಾಡಿದ್ದರೂ ಕೂಡ ಆ ಮೂರ್ಖರ ಜೊತೆ ನಾನು ಫೋಟೋ ತೆಗೆಸಿಕೊಂಡಿಲ್ಲ, ಅವರಿಂದ ಹಾರ ಹಾಕಿಸಿಕೊಂಡಿಲ್ಲ, ಹತ್ತಿರದಲ್ಲಿ ನಿಂತಿಲ್ಲ, ಕನಿಷ್ಠ ಆರಡಿ ಮೂರಡಿ ಅಂತರವನ್ನೇ ಕಾಯ್ದುಕೊಂಡು ಬಂದಿದ್ದರೂ ಕೂಡ ಯಾರೂ ಅದನ್ನು ಗುರುತಿಸಲಿಲ್ಲ. ಅದೂ ಹೋಗಲಿ, ಅವರಿಗೆ ಅಧಿಕಾರವನ್ನೆ ಕೊಡದೆ ವಿಧಾನಸೌಧದಿಂದ ಹೊರಗೆ ಹಾಕಿದೆನಲ್ಲಾ, ಇದನ್ನಾದರೂ ಗುರುತಿಸಿ ನನ್ನನ್ನು ಮೆಚ್ಚಬೇಕಿತ್ತು. ಇರಲಿ, ನನ್ನ ಈ ಸಾಹಸವನ್ನು ಸೋನಿಯಾ, ಮನಮೋಹನ್‌ಸಿಂಗ್‌ರಾದರೂ ಮೆಚ್ಚಿಯೇ ಮೆಚ್ಚುತ್ತಾರೆ. ಆಗಲಾದರೂ ಈ ದೇವೇಗೌಡನ ಮರ್ಮವೇನೆಂಬುದು ಕಾಂಗ್ಯೆಗಳಿಗೆ ತಿಳಿಯುತ್ತದೆ" ಎಂದರಂತಲ್ಲಾ, ಥೂತ್ತೇರಿ!

******

ಗೌಡರು ಹೀಗೆ ಅಪ್ಯಾಯವಾಗಿ ಮಾತನಾಡುತ್ತಿರಬೇಕಾದರೆ, ಅತ್ತ ಅವರ ಕುಮಾರದ್ವಯರು ಸಮಯೋಚಿತವಾಗಿ ಮಾತನಾಡುವುದನ್ನು ಕಲಿತುಬಿಟ್ಟಿದ್ದಾರಂತಲ್ಲಾ, ಮುಖ್ಯವಾಗಿ ರೇವಣ್ಣ ಬಿಜೆಪಿಗಳನ್ನು ಹಿಗ್ಗಾಮುಗ್ಗಾ ಟೀಕಿಸುತ್ತ "ನಾಚಿಕೆ ಆಗಬೇಕು ಕಂಡ್ರಿ ಈ ಮುಂಡೆಮಕ್ಕಳಿಗೆ. ಆ ಬಚ್ಚೇಗೌಡನಿಗೆ ಅಷ್ಟೊಂದು ದುಡ್ಡು ಕೊಟ್ಟು ಖರೀದಿ ಮಾಡೋದೇನ್ರಿ? ಅವ್ರುನೇನು ಹಾಲು ಕರಿಯೋ ಹಸನೇ? ಕೋಲಾರದ ಕಡೆ ಅವ್ರುನೋಯ್ತಾಯಿದ್ರೆ ಯಾರೂ ನಮುಸ್ಕಾರ ಅನ್ನದಿಲ್ಲ. ಅವ್ರುನು ಚುನಾವಣೆಲಿ ಗೆಲ್ಲುತಿದ್ದುದು ನಮ್ಮಪ್ಪ ಹೋಗಿ ಪ್ರಚಾರ ಮಾಡಿದ್ರಿಂದ. ಈಗ ಗೆದ್ದು ಬರ್ಲಿ ನೋಡನ. ನಾವು ಯಾವತ್ತೂ ಇಂತ ಗೊಡ್ಡಸ ಖರೀದಿ ಮಾಡಕ್ಕೋಗದಿಲ್ಲ. ಏನಿದ್ರು ಹಾಲು ಕರಿಬೇಕು, ಇಲ್ಲ ಗಬ್ಬಾಗಿರಬೇಕು. ಅಂತವು ಮಾತ್ರ ಖರೀದಿ ಮಾಡ್ತಿವಿ, ಕಟ್ಟಗತ್ತಿವಿ. ಇಲ್ಲ ಅಂದ್ರೆ ದೇವೇಗೌಡನ ಡೈರಿ ಹ್ಯಂಗೆ ನಡಿಬೇಕು?" ಎಂದು ತಮ್ಮ ಹಾಲು ಡೈರಿ ಅನುಭವವನ್ನು ಅಪ್ಪನ ರಾಜಕಾರಣಕ್ಕೆ ಹೋಲಿಸಿದರಂತಲ್ಲಾ, ಥೂತ್ತೇರಿ!!



******

ಇನ್ನ ಕುಮಾರಣ್ಣನವರ ಎಲ್ಲಾ ಸಾಧನೆಗಳನ್ನು ಕಾಂಗ್ರೆಸ್‌ನವರು ಕಾಪಿ ಮಾಡುತ್ತಿದ್ದಾರಂತಲ್ಲಾ. ಅವರು ಮಂಡಿಸಿದ್ದ ಬಜೆಟ್ಟನ್ನೆ ಚಿದಂಬರಂ ಮಂಡಿಸಿದ್ದಾರಂತಲ್ಲಾ, ಕೋಟಿಗೆ ಎಷ್ಟು ಸೊನ್ನೆ ಎಂಬುದೇ ತಿಳಿಯದವನು ಸಾವಿರಾರು ಕೋಟಿ ಬಜೆಟ್ ಬಗ್ಗೆ ಮಾತನಾಡುತ್ತಿರುವುದರಿಂದ ಆಚ್ಚರಿಗೊಂಡ ಕಾಂಗ್ಯೆಗಳು "ಸ್ವಾಮಿ, ಅದು ಎಡೂರಪ್ಪ, ಬಳಿಗಾರ್ ಅನ್ನೊ ಅಧಿಕಾರಿ ಸಹಾಯದಿಂದ ಮಂಡಿಸಿದ ಬಜೆಟ್. ಬಜೆಟ್ ಮತ್ತು ಹಣಕಾಸಿನ ವಿಷಯ ನಿಮಗೆ ಕರಾರುವಾಕ್ಕಾಗಿ ತಿಳಿಯಬೇಕಾದರೆ ಸಿದ್ಧರಾಮಯ್ಯನಂತೆ ನೀವು ಕನಿಷ್ಠ ಐದು ಬಜೆಟ್‌ಗಳನ್ನು ಓದಿ ಅರ್ಥ ಮಾಡಿಕೊಳ್ಳಬೇಕು" ಎಂದವಂತಲ್ಲಾ, ಥೂತ್ತೇರಿ!!

******

ಎಸ್.ಎಂ. ಕೃಷ್ಣ ರಾಜ್ಯಪಾಲರ ಹುದ್ದೆಯಿಂದ ಬಿಡಿಸಿಕೊಂಡು ಬೆಂಗಳೂರಿಗೆ ಬರುತ್ತಿರುವ ಸುದ್ದಿಯಿಂದ ಬಿಜೆಪಿ ಮತ್ತು ದಳದವರ ಬದಲು ಪತ್ರವಳಿ ಪತ್ರಕರ್ತರೇ ಗಲಿಬಿಲಿಯಾಗಿವೆಯಂತಲ್ಲಾ, ಇದರಿಂದ ಏನಾದರೂ ಮಾಡಲೇಬೇಕೆಂದು ತೀರ್ಮಾನಿಸಿ ಕಾಂಗ್ಯೆ ಒಡಕಿನ ಸುದ್ದಿ ಕೆರೆದು ಬಿಜೆಪಿಯವರ ಪ್ರಶಂಸೆಗೆ ಕಾಯುತ್ತಿದ್ದಾರಂತಲ್ಲಾ, ಈ ಬಗ್ಗೆ ಕೃಷ್ಣರನ್ನೆ ಕೇಳಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಸಾರ್, ನಾನು ಯಾರ್ ಮಾತಾಡ್ತಯಿರೋದು."

"ಯಾಹು ಅಂದ್ರೆ ಯಾರ ಕಡೆಯವರ್ರಿ?"

"ನಾನು ಪತ್ರಕರ್ತ ಸಾರ್. ಹಿಂದೆ ಹಲವಾರು ಬಾರಿ ನಿಮತ್ರ ಮಾತಾಡಿದ್ದಿನಿ."

"ಹೌದಾ? ನಾನು ಶಿವಕುಮಾರ. ಇರಿ ಕೊಟ್ಟೆ. ಸಾರ್ ಫೋನು."

"ನಾನು ಸಾಹಿತಿ ಯಾಹೂ, ತಮ್ಮ ಆಗಮನಕ್ಕೆ ಸ್ವಾಗತ ಸಾರ್."

"ಥ್ಯಾಂಕ್ಸ್, ಯಾಹೂ ಅವರೆ, ವಿಶ್ವವಿಷಯ?"

"ಏನಿಲ್ಲಾ, ನೀವು ಬರೋದರಿಂದ ಇಲ್ಲಿನ ಕಾಂಗ್ಯೆ ಲೀಡರುಗಳಿಗೆ ಬೇಸರ ಆಗಿದೆ. ಅದ್ರಿಂದ ಕಾಂಗ್ಯೆನಲ್ಲಿ ಅಸಮಾಧಾನ ಭುಗಿಲೆದ್ದಿದೆ ಅಂತ ಪತ್ರಿಕೆಯವರು ಬರೀತಾಯಿದ್ದಾರಲ್ಲಾ ಸಾರ್?"

"ಪತ್ರಿಕೆಯವರು ಯಾವುದೇ ವಿಷಯದಲ್ಲಿ ಏನಾದ್ರು ಬರೀಲೇಬೇಕಲ್ಲಪ್ಪಾ, ಬರಿಲಿಬಿಡಿ."

"ಹಾಗಿದ್ರೆ ನಿಮ್ಮ ಮರು ಎಂಟ್ರಿ ಕಾಂಗ್ಯೆಸವರಿಗೆ ಅಸಮಾಧಾನವೆ?"

"ಹಾಗೇನಿಲ್ಲ, ಅವರ ಬಲವಂತಕ್ಕೆ ನಾನು ಬರ್ತಾಯಿರೋದು. ಇಲ್ಲಿ ದೇವೇಗೌಡ್ರು ಮತ್ತವರ ಮಕ್ಕಳ ಹಾವಳಿ ಜಾಸ್ತಿಯಾಗಿದೆ ಅಂತ ನಾನು ಬಂದಾಗೆಲ್ಲ ದೂರು ಹೇಳೋರು. ಅದನ್ನ ಕೇಳಿಕೇಳಿ ಸಾಕಾಗಿ ಬರೋ ತೀರ್ಮಾನ ತಗೊಂಡೆ."

"ದೇವೇಗೌಡ್ರು ಮತ್ತವರ ಮಕ್ಕಳನ್ನ ಹೆದರಿಸೋದಕ್ಕೆ ನಿಮಗೆ ಸಾಧ್ಯನ ಸಾರ್? ಅವರ ರಾಜಕಾರಣದ ಶೈಲಿನೆ ಬೇರೆ, ನಿಮ್ಮದೆ ಬೇರೆ ಅಲ್ಲವ?"

"ಬೇರೆ ಆದ್ರೆನೆ ಜನತೆಗೆ ಗುರುತಿಸೋದಕ್ಕೆ ಸಾಧ್ಯ."

"ಇಲ್ಲಿನ ಒಕ್ಕಲಿಗರು ಕಮ್ಯುನಿಟಿ ಲೀಡ್ರು ದೇವೇಗೌಡ್ರೆ ಹೊರತು ಎಸ್ಸೆಂ ಕೃಷ್ಣ ಅಲ್ಲ ಅಂತ ಇದಾರಲ್ಲ ಸಾರ್?"

"ಯಾರೊ ಚೆನ್ನಿಗಪ್ಪನಂಥೊರು ಹಾಗನ್ನಬಹುದು. ಅದೂ ಕೂಡ ನಮಗೆ ಪ್ಲಸ್ ಪಾಯಿಂಟ್ ಅಲ್ಲವೆ?"

"ಶಿವಕುಮಾರನಂಥವರು ಎಲ್ಲರನ್ನು ಬಿಟ್ಟು ನಿಮ್ಮತ್ರ ಇರತರೆ ಅಂದ್ರೆ ನೀವು ಕೂಡ ಒಂಥರಾ ಕಮ್ಯುನಿಟಿ ಲೀಡ್ರೆ ಅಲ್ಲವೆ ಸಾರ್?"

"ಹಾಗಲ್ಲ ಯಾಹೂ, ನನ್ನತ್ರ ಬಿ.ಕೆ. ಚಂದ್ರಶೇಖರ್ ಕೂಡ ಇರತರೆ. ಪರಮೇಶ್ವರ್ ಕೂಡ ಇರತರೆ. ಅದನ್ನೆಲ್ಲಾ ಗ್ರಹಿಸಬೇಕು ನೀವು. ಅದರಲ್ಲೂ ಜಾತಿ ಹೊರತುಪಡಿಸಿ ರಾಜಕಾರಣ ಮಾಡಕ್ಕಾಗಲ್ಲ. ಅದು ಗೊತ್ತಾದ ನಂತರವೇ ನಾನು ಸಮಾಜವಾದಿ ಚಿಂತನೆಯಿಂದ ದೂರ ಸರಿದು ಚುಂಚನಗಿರಿ ಸಮೀಪ ಬಂದದ್ದು."

"ನೀವು ಚುಂಚನಗಿರಿ ಸಮೀಪ ಬಂದ್ರೆ ಅಂತಹ ತೊಂದ್ರೆಯಿಲ್ಲ ಸಾರ್. ಆದ್ರೆ ಆ ಪೇಜಾವರನ್ನೆಲ್ಲಾ ಮನೆಗೆ ಕರದು ಕಾಲಿಗೆ ಬೀಳೋದು, ಆತನ ಜನಾಂಗದ ಮೌಢ್ಯವಾದ ವಾಸ್ತು ಹಿಡಕೊಂಡು ಸರ್ಕಾರಿ ಕಟ್ಟಡನ ಬದ್ಲಾಯಿಸೋದು, ಇವೆಲ್ಲಾ ಕೆಟ್ಟ ರಾಜಕಾರಣ ಅಂತ ಅನ್ನಿಸೊಲ್ಲವ ಸಾರ್?"

"ಇಲ್ಲ, ಅವೆಲ್ಲಾ ನಮ್ಮ ನಂಬಿಕೆ!"

"ನಂಬಿಕೆ ಖಾಸಗಿ ಆಚರಣೆ ಅಲ್ಲವ ಸಾರ್?"

"ಖಾಸಗಿ ಆಚರಣೆನೆ. ಆದ್ರೆ ನಾವು ಸಾರ್ವಜನಿಕ ವ್ಯಕ್ತಿಯಾಗಿರೋದ್ರಿಂದ ಅದಕ್ಕೆ ಪ್ರಚಾರ ಸಿಗುತ್ತೆ ಅಷ್ಟೆ. ಬನ್ನಿ ಮಾತಾಡಣ."

"ಕಳೆದ ವಾರ ಬಾಂಬೆಗೆ ಬಂದಿದ್ದೊ ಸಾರ್. ನಿಮ್ಮನ್ನ ನೋಡಕ್ಕಾಗಲಿಲ್ಲ."

"ಬರಬವುದಿತ್ತು, ಅಲ್ಲೇಕೆ ಬಂದಿದ್ರಿ?"

"ನಮ್ಮ ಕುಂ. ವೀರಭದ್ರಪ್ಪನ ಭಳಾರೇ ವಿಚಿತ್ರಂ ಅನ್ನೋ ನಾಟಕ ತಂದಿದ್ದೊ ಸಾರ್. ತುಂಬಾ ಜನ ಬಂದಿದ್ರು. ನಾಟಕ ಸಕ್ಸಸ್ ಆಯ್ತು."

"ಒಳ್ಳೆದು. ನಾಟಕದ ಸಬ್‌ಜೆಕ್ಟೇನು?"

"ಒಬ್ಬ ಗೌಡ, ಸತ್ತ ಎತ್ತ ತಗಂಡೋಗಿ ಹೂತಿರತನೆ ಸಾರ್. ಒಬ್ಬ ಬಡವ ಹಸಿವು ತಡಿಯಕ್ಕಾಗದೆ ಹೂತಿರೊ ಎತ್ತ ಈಚೆಗೆ ತಗದು ಅದರ ಚರ್ಮ ಸುಲ್ದು ಮಾರಿಕೊಂಡು, ಮಾಂಸ ತಗಂಡೋಗಿ ಹೆಂಡತಿ ಮಕ್ಕಳಿಗೆ ಬೇಯಿಸಿಕೊಡ್ತನೆ ಸಾರ್. ಗೌಡನಿಗೆ ಗೊತ್ತಾಗಿ ಕಂಪ್ಲೇಟ್ ಕೊಟ್ಟು ಜೈಲಿಗಾಕಿಸ್ತನೆ ಸಾರ್."

"ಛೆ, ಛೇ, ಎಸ್ಸಾರಿಬಲ್ ಆಗಿದೆ. ಯಾವ ಪ್ರದೇಶದ ಕಥಾವಸ್ತು ಇದು?"

"ಬಳ್ಳಾರಿ ಸಮೀಪದ ಹಳ್ಳಿ ಕಥೆ ಸಾರ್."

"ಹೌದೆ? ಹಾಗಿದ್ರೆ ಕರ್ನಾಟಕಕ್ಕೆ ಬರೋ ಬಗ್ಗೆ ಯೋಚಿಸಬೇಕಲ್ಲ ಯಾಹೂ?"

"ಥೂತ್ತೇರಿ!!!" ■

ಇನ್ನು ಮುಂದೆ ರಾಜ್ಯದ ಶಾಲೆಗಳೂ ಕೇ ಸ ರಿ ಮ ಯ!


ಕೋಮುವಾದಿ ಇತಿಹಾಸದ ವಿಷದಿಂದ ಲೇಪಿತಗೊಂಡ ಮನಸ್ಸುಗಳು ಬೋಧಿಸುವ ಚರಿತ್ರೆಯ ವಿಚಾರಗಳು ಎಷ್ಟು ಸತ್ಯವಾಗಿರುತ್ತವೆ? ಅದು ವಿದ್ಯಾರ್ಥಿಗಳ ಮೇಲೆ ಎಂಥ ಪರಿಣಾಮವನ್ನು ಬೀರುತ್ತದೆ? ಆ ಮೂಲಕ ಎಂತಹ ಸಮಾಜವನ್ನು ಸೃಷ್ಟಿಸುತ್ತದೆ? ಶಿಕ್ಷಣ ಇಲಾಖೆಯನ್ನೂ ಕೇಸರಿಮಯ ಮಾಡಿದರೆ ಮುಂದೆ ಬೇರೆ ಇಲಾಖೆಗಳೂ ಚೆಡ್ಡಿ ಕೇಂದ್ರಗಳಾಗುವುದಿಲ್ಲವೇ? ಅದರಿಂದಾಗಿ ನಮ್ಮ ದೇಶವೇ ನಾಶವಾಗುವುದಿಲ್ಲವೇ?

ಮೊನ್ನೆ ದೆಹಲಿಯಲ್ಲಿ ಎ.ಕೆ ರಾಮಾನುಜನ್‌ರ 'ಥ್ರೀ ಹಂಡ್ರಡ್ ರಾಮಾಯಣಾಸ್' ಎಂಬ ಪ್ರಬಂಧವನ್ನು ಕೇಸರಿ ಬುದ್ಧಿಯ ವಿದ್ಯಾರ್ಥಿಗಳು ಪ್ರತಿಭಟಿಸಿದರು. ಅದಕ್ಕೆ ಕೆಲವು ದಿನಗಳ ಹಿಂದೆ, ಮಂಗಳೂರಿನ ಕೆಲವು ಚೆಡ್ಡಿ ಶಿಕ್ಷಕರು ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಬಗ್ಗೆ ಇಲ್ಲಸಲ್ಲದ ತಕರಾರು ಎತ್ತಿದ್ದರು. ಅದಕ್ಕಿಂತ ಕೆಲದಿನಗಳ ಹಿಂದೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಸಿ.ಎಸ್.ದ್ವಾರಕಾನಾಥ್‌ರವರ ಮೇಲೆ ಭಜರಂಗಿಗಳು ಹಲ್ಲೆಗೆ ಯತ್ನಿಸಿದರು. ಅದಕ್ಕೂ ಹಲವು ತಿಂಗಳ ಹಿಂದೆ ರಾಮಸೇತು ವಿವಾದದ ಸಂದರ್ಭದಲ್ಲಿ ಬಸ್ಸಿಗೆ ಬೆಂಕಿ ಹಚ್ಚುವ ಮೂಲಕ ಇಬ್ಬರು ಅಮಾಯಕರ ಸಾವಿಗೆ ಆರ್‌ಎಸ್‌ಎಸ್ ಕಾರ್ಯಕರ್ತರು ಕಾರಣರಾಗಿದ್ದರು. ಇಂತಹ ಅಮಾನುಷ, ಅಸಂಬದ್ಧ ಕೃತ್ಯಗಳೊಂದಿಗೆ ನಮ್ಮ ಇಡೀ ವ್ಯವಸ್ಥೆ ಹೇಗೆ ಕೈಜೋಡಿಸಿ ನೆರವಾಗುತ್ತಿದೆ ಎಂಬುದಕ್ಕೆ ಇಲ್ಲಿ ಮತ್ತೊಂದು ಉದಾಹರಣೆ ಇದೆ.

ಒಂದೆಡೆ, ಕರ್ನಾಟಕವನ್ನು ಗುಜರಾತ್ ಮಾಡುವುದಾಗಿ ಬಿಜೆಪಿ ನಾಯಕರು ಘೋಷಿಸಿದ್ದಾರೆ. ಇನ್ನೊಂದೆಡೆ, ಹಲವು ಮಾಧ್ಯಮಗಳು ಕೂಡ ಹಿಂದೂತ್ವವಾದಿ ಕೋಮುವಾದಿಗಳ ಅಜೆಂಡಾವನ್ನು ಮುಂದುವರೆಸಲು ಸಹಕರಿಸುತ್ತಿವೆ. ಮತ್ತೊಂದೆಡೆ, ಕೇವಲ ಇಪ್ಪತ್ತು ತಿಂಗಳ ಕಾಲ ಅಧಿಕಾರದಲ್ಲಿದ್ದ ಚೆಡ್ಡಿಗಳು ಎಲ್ಲ ಸರ್ಕಾರಿ ವಿಭಾಗಗಳಲ್ಲಿ ಹೇಗೆ ತಮ್ಮ ಧರ್ಮಾಂಧದ ಬೀಜ ಬಿತ್ತಿ ಹೋಗಿದ್ದಾರೆಂದರೆ ಇವತ್ತು ಪೊಲೀಸ್ ಇಲಾಖೆಯಾಗಲಿ, ಆಡಳಿತ ವ್ಯವಸ್ಥೆಯಾಗಲಿ, ಸರ್ಕಾರಿ ಕಚೇರಿಗಳಾಗಲಿ, ಎಲ್ಲದರಲ್ಲೂ ಹಿಂದೂತ್ವವಾದಿ ಅಧಿಕಾರಿಗಳಿಂದ ಹಿಡಿದು ಟೈಪಿಸ್ಟ್‌ಗಳ ತನಕ ಸಂಘಪರಿವಾರ ಸಿದ್ಧಾಂತದ ಗುಮಾಸ್ತರು ಸೇರಿಕೊಂಡು ತಮ್ಮ ಕುತಂತ್ರಿ ಬುದ್ಧಿಯನ್ನು ಪ್ರದರ್ಶಿಸುತ್ತಿದ್ದಾರೆ.

ಬುದ್ಧಿ ಇಲ್ಲದ ಅಧಿಕಾರಿಣಿ ಸೀತಾಲಕ್ಷ್ಮಿ

ಪ್ರಸ್ತುತ ಘಟನೆ ನಡೆದು ಒಂದು ತಿಂಗಳಾಗಿದ್ದರೂ ಯಾರ ಗಮನಕ್ಕೂ ಬಾರದೆ, ಸುದ್ದಿಯೂ ಆಗದೆ ತಣ್ಣಗೆ ಉಳಿದಿತ್ತು. ಫೆಬ್ರವರಿ 13ರಂದು ನಡೆದ ಈ ಘಟನೆಗೆ ಚಾಲನೆ ನೀಡಿದ್ದು ಬೆಂಗಳೂರು ನಗರ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಸೀತಾಲಕ್ಷ್ಮಿ. ಆಕೆಯ ಆದೇಶದನ್ವಯ ಬೆಂಗಳೂರು ನಗರದ ದಕ್ಷಿಣ ಜಿಲ್ಲೆ ವ್ಯಾಪ್ತಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ಚರಿತ್ರೆ ಮತ್ತು ಸಮಾಜ ವಿಜ್ಞಾನಗಳನ್ನು ಬೋಧಿಸುವ 800 ಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ಒಂದು ದಿನದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಪ್ರಥಮ ಸ್ವಾತಂತ್ರ್ಯ? ಸಂಗ್ರಾಮಕ್ಕೆ 150 ವರ್ಷಗಳು ಪೂರ್ಣಗೊಂಡದ್ದರ ನೆನಪಿಗಾಗಿ "ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ" ಎಂಬ ವಿಚಾರದ ಮೇಲೆ ಇದನ್ನು ಆಯೋಜಿಸಲಾಗಿತ್ತು.



ಆದರೆ ಈ ಕಾರ್ಯಕ್ರಮ ನಡೆದದ್ದು ಬೆಂಗಳೂರು ನಗರದ ಚಾಮರಾಜಪೇಟೆಯಲ್ಲಿರುವ ಆರ್‌ಎಸ್‌ಎಸ್ ಕಚೇರಿ 'ಕೇಶವ ಶಿಲ್ಪ'ದಲ್ಲಿ! ಇದು ಸಂಘಪರಿವಾರದ ಹೆಡ್ ಆಫೀಸು; ಹಿಂದೂತ್ವವಾದಿಗಳ ಎಲ್ಲಾ ಕೃತ್ಯಗಳ ಅಜೆಂಡಾಗಳು ಹುಟ್ಟುವುದೇ ಇಲ್ಲಿ. ಅಂತಹ ಒಂದು ಕಾರ್ಯಕ್ರಮಕ್ಕೆ ಸರ್ಕಾರಿ ಅಧಿಕಾರಿ ಸೀತಾಲಕ್ಷ್ಮಿ ತನ್ನ ಅನುಮತಿ ನೀಡುತ್ತಾಳೆಂದರೆ, ಅದರಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರು ಭಾಗವಹಿಸಬೇಕು ಎಂಬ ಆದೇಶ ಹೊರಡಿಸುತ್ತಾಳೆಂದರೆ, ಅದರಲ್ಲಿ ಭಾಗವಹಿಸಲು ಅನುವಾಗುವಂತೆ ಅವರೆಲ್ಲರಿಗೆ ಒಂದು ದಿನದ ಅಧಿಕೃತ ರಜೆ ನೀಡುತ್ತಾಳೆಂದರೆ ಅವಳು ಹೊಟ್ಟೆಗೆ ತಿನ್ನುವುದಾದರೂ ಏನನ್ನು?



ಆ ಕಾರ್ಯಕ್ರಮ ಎಷ್ಟು ಚೆಡ್ಡಿಮಯವಾಗಿತ್ತೆಂದು ಊಹಿಸಲು ಕಷ್ಟವೇನಲ್ಲ. ಯಾಕೆಂದರೆ ಈ ವಿಚಾರಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ವಿಚಾರ ಮಂಡಕರು ಡಾ. ಸೂರ್ಯನಾಥ ಕಾಮತ್ ಎಂಬ ಚೆಡ್ಡಿ ಸಂಶೋಧಕ, ಬಿಜೆಪಿಯ ಸಕ್ರಿಯ ಕಾರ್ಯಕರ್ತ ನರಹರಿ, ಆರ್‌ಎಸ್‌ಎಸ್‌ನ ಚೆಡ್ಡಿ ಸಿದ್ಧಾಂತಿ ಬಾಬು ಕೃಷ್ಣಮೂರ್ತಿ ಮತ್ತು ಕೋಮುವಾದದ ವಿಷವನ್ನೇ ತನ್ನ ಬರಹಗಳಲ್ಲಿ ಕಾರುವ (ಆದರೆ ಬದುವು ಸಿಕ್ಕಾಗ ಪರರ ಸ್ತ್ರೀಯನ್ನು ಲಪಟಾಯಿಸುವ) ಹಿಂದೂ ಧರ್ಮದ 'ಚಾಂಪಿಯನ್' ಚಕ್ರವರ್ತಿ ಸೂಲಿಬೆಲೆ. ಇಂತಹವರು ಅದೆಂತಹ ಇತಿಹಾಸವನ್ನು ಬೋಧಿಸಿಯಾರು?

ಸೀತಾಲಕ್ಷ್ಮಿ ಎಂತಹ ಪೆದ್ದು ಶಿಖಾಮಣಿ ಅಧಿಕಾರಿಣಿ ಎಂದರೆ ಈ ವಿಚಾರ ಸಂಕಿರಣ ಕುರಿತ ತನ್ನ ಅಧಿಕೃತ ಪತ್ರದಲ್ಲಿ ಇದು ಕೇಶವಶಿಲ್ಪದಲ್ಲಿ ನಡೆಯುತ್ತದೆ ಎಂದು ಉಲ್ಲೇ... ಕಳುಹಿಸಿದ್ದಾಳೆ! ಆಕೆಗೆ ಕೇಶವಶಿಲ್ಪದ ಬಗ್ಗೆ ಗೊತ್ತಿಲ್ಲ... ಗೊತ್ತಿದ್ದರೂ ಕೋಮುವಾದೀಕರಣ ಗೊಂಡಿರ... ಅಧಿಕಾರಿಯೇ?

ಶಿಕ್ಷಣ ಇಲಾಖೆಯಂತಹ ಜವಾಬ್ದಾರಿಯುತ ಸ್ಥಾ... ಕಾರ್ಯನಿರ್ವಹಿಸುತ್ತಿರುವ ಈ ಸೀತಾಲಕ್ಷ್ಮಿ ಎಂಬ ... ಮಹಿಳೆಯರನ್ನು ಕುರಿತಂತೆ ಸಂಘ ಪರಿವಾ... ನಿಲುವುಗಳೇನು ಎಂಬುದೂ ಗೊತ್ತಿಲ್ಲವ... ಆರ್‌ಎಸ್‌ಎಸ್‌ನ ಮುಖ್ಯಸ್ಥ ಸುದರ್ಶನ್ ಈಗಾಗ... ಮಹಿಳೆಯರಿಗೆ ಉನ್ನತ ಶಿಕ್ಷಣದ ಅಗತ್ಯವಿಲ್ಲ, ಅವ... ಮನೆ-ಮಕ್ಕಳು-ಗಂಡ ಇವುಗಳನ್ನು ನೋಡಿಕೊಳ್ಳುವ ... ನೀಡಿದರೆ ಸಾಕು ಎಂದಿರುವುದೂ ಗೊತ್ತಿಲ್ಲವ... ಗೊತ್ತಿದ್ದರೂ ಈಕೆ ಇಂತಹ ಆದೇಶವೊಂದ... ಹೊರಡಿಸುತ್ತಾಳೆಂದರೆ ಅವಳಿಗೆ ಬುದ್ಧಿ ಇ... ಎನ್ನಲಾಗುತ್ತದೆಯೇ?

ಹಿಂದೂತ್ವದವಾದಿಗಳ ಕಲ್ಪಿತ ಇತಿಹಾಸ

ಆ ವಿಚಾರಗೋಷ್ಠಿಯಲ್ಲಿ ಚರ್ಚಿತವಾದದ್ದಾದ... ಯಾವ ವಿಷಯಗಳು? ವಿಚಾ... ಗೋಷ್ಠಿಯನ್ನು ಏರ್ಪಡಿಸಲಾಗಿ... ಪ್ರಥಮ ಸ್ವಾತಂತ್ರ್ಯ ಸಂಗ್ರಾಮ... ಮೇಲೆ. ಆದರೆ ಅಂದು ಹೆ... ಚರ್ಚಿತವಾದದ್ದು ಸಾವರ್ಕರ... ಮದನ್‌ಲಾಲ್ ದಿಂಗ್ರ, ಚಂದ್ರಶೇ... ಆಜಾದ್ ಮತ್ತು ಭಗತ್ ಸಿಂ... ವಾಸ್ತವವಾಗಿ ಇವರಾರೂ 1857... ಸ್ವಾತಂತ್ರ ಸಂಗ್ರಾಮದಲ್ಲಿ ಪಾಲ್ಗೊ... ವರಲ್ಲ! ಅದರಲ್ಲೂ ಸಾವರ್ಕ... ಎಂಬ ಹಿಂದೂತ್ವವಾದಿ ಅಂದಿ... ಬ್ರಿಟಿಷರ ಆಡಳಿತದೊಂದಿಗೆ ಕೈಜೋಡಿಸಿ ಹಿಂದೂಗ... ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಕೂಡದು ಎಂ... ಆದೇಶ ನೀಡಿದ್ದ ದೇಶದ್ರೋಹಿ! ಆತನಿಗೂ ಪ್ರಥ... ಸ್ವಾತಂತ್ರ ಸಂಗ್ರಾಮಕ್ಕೂ ಎತ್ತಿಂದೆತ್ತಣ ಸಂಬಂಧ? ಶಿಕ್ಷ... ಇಲಾಖೆಯ ಅಧಿಕಾರಿಣಿ ಸೀತಾಲಕ್ಷ್ಮಿ ಈ ಪ್ರಶ್ನೆಗೆ ಉತ್ತ... ನೀಡುತ್ತಾಳೆಯೇ?

ಅಂದು ಸೂರ್ಯನಾಥ ಕಾಮತ್ ಚರಿತ್ರೆ ಕುರಿ... ಮಾತನಾಡುತ್ತ "ಕಳೆದ ಅರವತ್ತು ವರ್ಷಗಳಲ್ಲಿ ... ತಪ್ಪನ್ನು ಮುರಳಿ ಮನೋಹರ ಜೋಶಿ ಅವ... ಸರಿಪಡಿಸಿದ್ದರು. ಆದರೆ ಅರ್ಜುನ್ ಸಿಂಗ್ ಅದ... ಒಂದು ವರ್ಷದಲ್ಲಿ ನಾಶಪಡಿಸಿಬಿಟ್ಟ" ಎಂದು ಕೆ... ಕಾರಿದರು. ಮಾಜಿ ಶಿಕ್ಷಣ ಸಚಿವ ಪ್ರೊ. ಬಿ... ಚಂದ್ರಶೇಖರ್ ಅವರ ಮೇಲೂ ದಾಳಿ ಮಾಡು... "ಅಲ್ಪಸಂಖ್ಯಾತರನ್ನು ಓಲೈಸುವ ಗೋಸುಂಬೆ" ಎಂದ... ಛೇಡಿಸಿದರು. ಚಕ್ರವರ್ತಿ ಸೂಲಿಬೆಲೆ ಮಾತನಾಡುತ್ತ "ನಮ... ಪಠ್ಯಪುಸ್ತಕಗಳು ಬಹುಸಂಖ್ಯಾತ ಹಿಂದೂಗಳ ಭಾವನೆಗಳ... ವಿರುದ್ಧವಾಗಿವೆ. ಇದನ್ನು ನಾವು ಸರಿಪಡಿಸಬೇಕಿದೆ. ನಮ... ಪಠ್ಯ ಪುಸ್ತಕದಲ್ಲಿ ಏನೇ ಇರಲಿ. ಆದರೆ ಶಿಕ್ಷಕರಾ... ನೀವು ಪ್ರತಿ ದಿನದ ಒಂದು ಗಂಟೆ ಈ ಇತಿಹಾಸವನ... ಬೋಧಿಸಬೇಕು. ಇದು ಪ್ರತಿದಿನದ ನಿಮ್ಮ ಕೆಲಸವಾ... ಬೇಕು" ಎಂದು ಆದೇಶಿಸಿದ. ಅಂದರೆ ಚೆಡ್ಡಿಗಳು ಸೃಷ್ಟಿಸಿರು... ಕಲ್ಪಿತ ಇತಿಹಾಸವನ್ನೇ ಬೋಧಿಸಬೇಕೆಂದು ತಾಕೀತು ಮಾಡಿದ. (ಸದ್ಯ ತನ್ನಂತೆ ಪರರ ಸ್ತ್ರೀಯನ್ನು ಲಪಟಾಯಿ... ಎಂದು ಆತ ಹೇಳದಿದ್ದದ್ದು ಎಲ್ಲರ ಪುಣ್ಯ!)

ನಮ್ಮ ಹಲವು ಶಿಕ್ಷಕರೂ ಎಂತಹ ತಿಳಿಗೇ... ಗಳಾಗಿರುತ್ತಾರೆಂದರೆ ಈ ಚೆಡ್ಡಿಗಳ ಮಾತು ಕೇ... ಭಾವುಕರಾದ ಕೆಲವರು ಗಳಗಳನೆ ಅತ್ತರು. ಆದ...


ಸ್ವಾಮಿಯ ಮೇಲೂ ದಾಳಿಗಿಳಿದ ಚೆಡ್ಡಿಗಳು

ಸಂಘಪರಿವಾರದ ಫ್ಯಾಸಿಸ್ಟರು ಕೇವಲ ಮುಸ್ಲಿಮರು, ಕ್ರಿಶ್ಚಿಯನ್ನರಂಥ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಮಾತ್ರವಲ್ಲ ತಮ್ಮ ರಾಜಕೀಯ ಸರ್ವಾಧಿಕಾರಕ್ಕೆ ಪ್ರತಿರೋಧ ಒಡ್ಡುವ ಎಲ್ಲರ ಮೇಲೂ ದಾಳಿ ಮಾಡುತ್ತಾರೆ ಎಂಬುದನ್ನು ಅವರು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಇತ್ತೀಚೆಗೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಡಾ. ಸಿ.ಎಸ್. ದ್ವಾರಕಾನಾಥ್ ಮೇಲೆ ಇದೇ ಸಂಘಪರಿವಾರಿಗಳು ದಾಳಿ ನಡೆಸಿ ಅವರಿಗೆ ಬಲವಂತವಾಗಿ ಕೊಕೋ ಕೋಲಾ ಬಾಟಲಿಯಿಂದ 'ತೀರ್ಥ' ಕುಡಿಸಿದ್ದರು. ಅದಿನ್ನೂ ಹಸಿಹಸಿಯಾಗಿರುವಾಗಲೇ ಮೊನ್ನೆ ಧಾರವಾಡದಲ್ಲಿ ಹಿಂದುಳಿದ ಸಮುದಾಯದ ಸ್ವಾಮಿಯ ಮೇಲೆಯೇ ದಾಳಿ ನಡೆಸಿದ್ದಾರೆ. ಈ ಬಾರಿ ದಾಳಿಗೊಳಗಾದವರು ಹಿಂದುಳಿದ ಕುರುಬ ಸಮುದಾಯದ ಸ್ವಾಮೀಜಿ ಮನ್ನೂರು ಮಠದ ಶ್ರೀ ಬಸವರಾಜ ದೇವರು.

ದ್ವಾರಕಾನಾಥ್ ಅವರ ಮೇಲಿನ ದಾಳಿಯ ನೇತೃತ್ವ ವಹಿಸಿದವರು ಬಿಜೆಪಿಯ ಮಾಜಿ ಶಾಸಕನಾದರೆ ಈಗ ಬಸವರಾಜ ದೇವರ ಮೇಲಿನ ದಾಳಿಯ ನೇತೃತ್ವ ವಹಿಸಿದವರು ಗೋರಕ್ಷಣೆಯ ಹೆಸರಿನಲ್ಲಿ ಸರ್ಕಾರಿ ದುಡ್ಡನ್ನು, ಅರಣ್ಯ ಇಲಾಖೆಯ ಭೂಮಿಯನ್ನು ನುಂಗಿ ನೀರು ಕುಡಿದ ರಾಮಚಂದ್ರಾಪುರಮಠದ ರಾಘವೇಶ್ವರ ಸ್ವಾಮಿ ಎಂಬ ಬ್ರಾಹ್ಮಣನ ಹಿಂಬಾಲಕರು! ಇವರ ಸಕ್ರಿಯ ಬೆಂಬಲಕ್ಕೆ ನಿಂತವರು ಹುಬ್ಬಳ್ಳಿಯ ಮೂರು ಸಾವಿರ ಮಠದ ರಾಜಯೋಗೇಂದ್ರ ಸ್ವಾಮಿ.


ನಡೆದದ್ದೇನು?

ಪಕ್ಕಾ ಭೂಗಳ್ಳನಾದ ಹೊಸನಗರ ತಾಲ್ಲೂಕಿನ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿಯ ನೇತೃತ್ವದಲ್ಲಿ ಸಂಘಪರಿವಾರವು ಗೋರಕ್ಷಣಾ ಯಾತ್ರೆಯೊಂದನ್ನು ಹಮ್ಮಿಕೊಂಡಿತ್ತು. ಅದನ್ನು ಖುದ್ದು ರಾಘವೇಶ್ವರನೇ ಮಾರ್ಚ್ 12ರಂದು ಹುಬ್ಬಳ್ಳಿಯಲ್ಲಿ ಉದ್ಘಾಟಿಸಿದ್ದ. ಈ ಯಾತ್ರೆ ಮಾರ್ಚ್ 14ರಂದು ಧಾರವಾಡಕ್ಕೆ ಬಂದು ಅಂದು ಮಧ್ಯಾಹ್ನದ ಹೊತ್ತಿಗೆ ಮನ್ನೂರು ಎಂಬ ಊರಿಗೆ ಬಂತು. ಈ ಮನ್ನೂರಿನಲ್ಲಿಯೇ ರಾಜ್ಯದ ಕುರುಬ ಸಮುದಾಯದ ಮಠವೊಂದಿದೆ. ಅದಕ್ಕೆ ಬಸವರಾಜ ದೇವರು ಎಂಬ ಸ್ವಾಮಿಗಳೂ ಇದ್ದಾರೆ. ಯಾತ್ರೆ ಮನ್ನೂರಿಗೆ ಬರುತ್ತಿದ್ದಂತೆ 25 ಜನರ ಚೆಡ್ಡಿಗಳ ಗ್ಯಾಂಗ್ ಬಸವರಾಜ ದೇವರಲ್ಲಿಗೆ ಹೋಗಿ ಗೋಪೂಜೆ ಮಾಡಿ ತಮ್ಮ ಯಾತ್ರೆಯನ್ನು ಬೆಂಬಲಿಸುವಂತೆ ಆಜ್ಞಾಪಿಸಿದ್ದಾರೆ. ಸಂಘಪರಿವಾರದ ... ರಾಜಕೀಯದ ಬಗ್ಗೆ ಚೆನ್ನಾಗಿ ತಿಳಿದಿರುವ ಬಸವರಾಜ ದೇ...



ಅವರ ಆಜ್ಞೆಗೆ ಸೊಪ್ಪು ಹಾಕಿಲ್ಲ. ತಕ್ಷ... ಅವರ ಮೇಲೆರಗಿದ ಚೆಡ್ಡಿ ಗೂಂಡಾ... "ನೀನು ಬಾಬಾಬುಡನ್ ಗಿರಿ ವಿಷಯ... ನಮ್ಮ ವಿರುದ್ಧ ಮಾತಾಡ್ತೀಯಾ? ಮುಸ್ಲಿ... ಪರ, ದಲಿತರಪರ, ಹಿಂದುಳಿದವರ ಪರ... ಹೋರಾಟ ಮಾಡ್ತೀಯಾ? ಸುಮ... ಬಾಯಮುಚ್ಚಿಕೊಂಡಿರು, ಇಲ್ಲದಿ... ಪರಿಣಾಮ ನೆಟ್ಟಗಿರೊಲ್ಲ!" ಎಂದು ಬೆ... ಅವಾಚ್ಯ ಶಬ್ದಗಳಿಂದ ಬೈಯ್ಯಾದ... ಮಾತ್ರವಲ್ಲ ಅವರ ಮೇಲೆ ಹಲ್ಲೆ... ಮುಂದಾಗಿದ್ದಾರೆ.

ಇಷ್ಟೆಲ್ಲಾ ಗೂಂಡಾಗಿರಿ ನಡೆಯುತ್ತಿದ್ದರೂ ಅಲ್ಲಿ... ಪೊಲೀಸರು ಕನಿಷ್ಠ ಸಂಘಪರಿವಾರದ ಗೂಂಡಾ... ನಿಯಂತ್ರಿಸುವ ಗೋಜಿಗೆ ಹೋಗಲಿಲ್ಲ. ಅಷ್ಟು... ಅಲ್ಲಿಯೇ ಇದ್ದ ಕೆಲವು ಹಿಂದುಳಿದ ಸಮುದಾ... ವಿದ್ಯಾರ್ಥಿಗಳೇ ಬಸವರಾಜ ದೇವರ ರಕ್ಷಣೆಗೆ ಬರುತ್ತಿ...


[illegible] Left to right [illegible] 1948.

ತ್. ಅಂದು ಹಲವು ಪ್ರಜ್ಞಾವಂತ ಶಿಕ್ಷಕರೂ ರೆಲ್ಲ ಇದೀ ಕಾರ್ಯಕ್ರಮವನ್ನೇ ಪ್ರತಿಭಟಿಸಿ ರು.

ಹಲವು ವಿಷಯಗಳನ್ನು ಸ್ಪಷ್ಟಪಡಿಸಬೇಕಿದೆ. ಮದಾಗಿ, ಸ್ವಾತಂತ್ರ್ಯ ಚಳವಳಿಯಲ್ಲಿ ಹಿಂದೂ, ಮತ್ತು ಇತರೆ ಸಮುದಾಯದವರೂ ಇದ್ದರು. ದಾಗಿ, ಹಿಂದೂ ಮಹಾಸಭಾ ಮತ್ತು ಸ್‌ನಂತಹ ಹಿಂದೂತ್ವವಾದಿ ಸಂಘಟನೆಗಳು ಸ್ವಾತಂತ್ರ್ಯ ಪಡೆಯುವುದು ತಮ್ಮ ಮುಖ್ಯ ನ್ನು ಬದಲಾಗಿ ಪರಧರ್ಮದವರನ್ನು ಇಲ್ಲಿಂದು ೀ ತಮ್ಮ ಮುಂದಿರುವ ಸವಾಲು ಎಂಬ ಹೊಂದಿದ್ದರು. ಮೂರನೆಯದಾಗಿ, ಂದ ಹಿಡಿದು ಮಾಜಿ ಪ್ರಧಾನಿ ಅಟಲ್ ಾಜಪೇಯಿ ತನಕ ಯಾವ ಹಿಂದೂತ್ವವಾದಿಯೂ ರಗ್ರಾಮದಲ್ಲಿ ಭಾಗವಹಿಸಲಿಲ್ಲ, ಇದು ವಾಸ್ತವ. ಮ್ಮ ಈ ಹೇಡಿತನವನ್ನು ಮರೆಮಾಚಿಸಲು ಗತ್‌ಸಿಂಗ್‌ನಂತಹ ನಾಸ್ತಿಕ ಕ್ರಾಂತಿಕಾರಿಯನ್ನೇ ವಶಕ್ಕೆ' ತೆಗೆದುಕೊಳ್ಳಲು ಚೆಡ್ಡಿಗಳು ತ್ತಿದ್ದಾರಲ್ಲದೆ, ಕಲ್ಪಿತ ಇತಿಹಾಸವನ್ನು ಸೃಷ್ಟಿಸಿ ಶ ಭಕ್ತರು' ಎಂದು ಪೋಸು ಕೊಡುತ್ತಿದ್ದಾರೆ. ಪೋಸು ಕೊಡುವ ಅಂಗವೇ ಇಂತಹ ಾಟ್ಯಗಳು.

ಇಂತಹ ಕಾರ್ಯಕ್ರಮಗಳಿಗೆ ಸೀತಾಲಕ್ಷ್ಮಿ ಅಧಿಕಾರಿಗಳೇ ಅನುಮತಿ ನೀಡುತ್ತಾರೆಂದರೆ ಸದ ಜಾತ್ಯತೀತ ಸಂವಿಧಾನ, ನಮ್ಮ ಬಹುಮುಖಿ ನಮ್ಮ ಸೌಹಾರ್ದ ಪರಂಪರೆಗೆ ಕೇಡುಗಾಲ ಎದೇ ಅರ್ಥ. ರಾಜ್ಯಪಾಲರು ಕೂಡಲೇ ಈಕೆಯ ಪಯವಿಟ್ಟು ಕ್ರಮಕೈಗೊಳ್ಳುವರೇ?

ಹಲವು ಪ್ರಶ್ನೆಗಳೂ ಉದ್ಭವಿಸುತ್ತವೆ: ವಾದಿ ಇತಿಹಾಸದ ವಿಷದಿಂದ ಲೇಪಿತಗೊಂಡ ಳು ಬೋಧಿಸುವ ಚರಿತ್ರೆಯ ವಿಚಾರಗಳು ಶ್ಯವಾಗಿರುತ್ತವೆ? ಅದು ವಿದ್ಯಾರ್ಥಿಗಳ ಮೇಲೆ ಪರಿಣಾಮವನ್ನು ಬೀರುತ್ತದೆ? ಆ ಮೂಲಕ ಸಮಾಜವನ್ನು ಸೃಷ್ಟಿಯಾಗುತ್ತದೆ? ಶಿಕ್ಷಣ ಯನ್ನೂ ಕೇಸರಿಮಯ ಮಾಡಿದರೆ ಮುಂದೆ ಶಾಖೆಗಳೂ ಚೆಡ್ಡಿ ಕೇಂದ್ರಗಳಾಗುವುದಿಲ್ಲವೇ? ಾಗಿ ನಮ್ಮ ದೇಶವೇ ನಾಶವಾಗುವುದಿಲ್ಲವೇ? ತಹ ಅಪಾಯವನ್ನು ಅರ್ಥಮಾಡಿಕೊಂಡು ಎಲ್ಲ ರು ಸೀತಾಲಕ್ಷ್ಮಿಯಂತಹ ಅಧಿಕಾರಿಣಿಗಳನ್ನೂ, ವ್ಯವಸ್ಥೆಯನ್ನು ಕೋಮುವಾದೀಕರಿಸುವುದನ್ನೂ ಖಿಸಬೇಕಿದೆ. ಬರುವ ಚುನಾವಣೆಗಳಲ್ಲಿ ವಾದಿಗಳು ಅಧಿಕಾರ ಪಡೆದು ಇಡೀ ರಾಜ್ಯವನ್ನೇ ಸುವ ಸಿದ್ಧತೆಯಲ್ಲಿದ್ದಾರೆ.

ನ್ನು ತಡೆಯುವ ಜವಾಬ್ದಾರಿ ಪ್ರಜ್ಞಾವಂತ ರ ಕರ್ತವ್ಯವಾಗಿದೆ. ■

ನಡೆದ ತಕ್ಷಣ ಬಸವರಾಜ ದೇವರು ನೇರವಾಗಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಂದನ್ನು ಸಲ್ಲಿಸಿದ್ದಾರೆ. ಆದರೆ, ದುರಂತ ಏಂದರೆ ಯಾತ್ರೆಯ ಹೆಸರಿನಲ್ಲಿ ಗೂಂಡಾಗಿರಿ ನಡೆಸುವ ಬಂಧಿಸುವುದನ್ನು ಬಿಟ್ಟು ಯಾತ್ರೆಗೆ ರಕ್ಷಣೆ ವಿನಃ ಬಸವರಾಜ ದೇವರ ರಕ್ಷಣೆಗೆ

ವಾರ ಹೇಗೆ ಬ್ರಾಹ್ಮಣೇತರ ಹಿಂದೂಗಳನ್ನೂ ದಾಳಿಯ ಟಾರ್ಗೆಟ್ ಮಾಡಿಕೊಳ್ಳುತ್ತಿದೆ [illegible] ಎರಡು ಉದಾಹರಣೆಗಳಷ್ಟೇ. ಸಂಘಪರಿವಾರ ದಲಿತರ ಮೇಲೆ, ರ ಮೇಲೆ, ಹಿಂದುಳಿದ ವರ್ಗಗಳ ಮೇಲೆ ಗಳಿಂದ ಹೇಗೆ ದಾಳಿ ಮಾಡುತ್ತಲೇ ಬಂದಿದೆ ಬರೆಯುತ್ತಾ ಹೋದರೆ ಒಂದು ಬೃಹತ್ ಗಬಹುದು. ಈ ಎಲ್ಲಾ ಜನಸಮುದಾಯಗಳು ಸಂಘಪರಿವಾರದ ವಿರುದ್ಧ ಸಿಡಿದು [illegible]

ಯಡ್ಡಿ-ರೆಡ್ಡಿ ಗಾಂಚಲಿಗಳು





ಕರ್ನಾಟಕ-ತಮಿಳುನಾಡಿನ ಹೊಗೇನಕಲ್ ಗಡಿ ವಿವಾದದ ಬಗ್ಗೆ ಅಲ್ಲಿಗೇ ಹೋಗಿ ಧರಣಿ ಮಾಡುತ್ತೇನೆಂದು ಹಾರಾಡಿದ್ದರು ಯಡ್ಡಿ. ಈಗ ಮತ್ತೊಂದು ನೆರೆರಾಜ್ಯ ಆಂಧ್ರದಿಂದ ಬಂದಿರುವ ಈ ಗಣಿಖೋರ ರೆಡ್ಡಿಗಳು ಕರ್ನಾಟಕದಲ್ಲಿ ಅಟ್ಟಹಾಸದ ರಾಕ್ಷಸ ರಾಜಕೀಯ ನಡೆಸುತ್ತಾ ಎಲ್ಲವನ್ನೂ ಆಕ್ರಮಿಸಿಕೊಳ್ಳುವ ಗಾಂಚಲಿ ತೋರಿಸುತ್ತಿರುವಾಗ ಏಕೆ ಸುಮ್ಮನಿದ್ದಾರೆ?

ಬಳ್ಳಾರಿಯ ಬಿಜೆಪಿ ಗಣಿಖೋರರ ಗಾಂಚಲಿಗಳು ಮುಂದಿನ ಕರ್ನಾಟಕ ಅಸೆಂಬ್ಲಿ ಎಲೆಕ್ಷನ್‌ಗೆ ರಕ್ತಲೇಪನ ಮಾಡಿದರೂ ಆಶ್ಚರ್ಯವಿಲ್ಲ.

ದುಡ್ಡು, ತೋಳ್ಬಲದ ಇವರ ಪೊಗರು ಮೊನ್ನೆ ಮಧುಗಿರಿಯಲ್ಲಿ ವ್ಯಕ್ತವಾಗಿದೆ. ಉತ್ತರದ ಬಳ್ಳಾರಿಯಿಂದ ಮುನ್ನೂರು ಸ್ಕಾರ್ಪಿಯೋ ಗಾಡಿಗಳಲ್ಲಿ ಹೊರಟು ಇನ್ನೂರು ಕಿಲೋಮೀಟರ್ ದಕ್ಷಿಣಕ್ಕಿರುವ ಮಧುಗಿರಿಗೆ ದಾಳಿಕೋರರಂತೆ ಬಂದಿಳಿದ ಬಿಜೆಪಿಯ ಒಂದು ಸಾವಿರ 'ಚಿಲ್ಲರೆ' ಜನ ಮಾಜಿ ಮಂತ್ರಿ ಚೆನ್ನಿಗಪ್ಪನಿಗೆ ಸವಾಲು ಹಾಕಿ ಹೋಗಿದ್ದಾರೆ.

ಬಳ್ಳಾರಿ ಬಿಜೆಪಿ ಅಧ್ಯಕ್ಷ ಸೋಮಶೇಖರ ರೆಡ್ಡಿ ನಾಯಕತ್ವ ಇದಕ್ಕಿತ್ತು.

ತಮಗೆ ಗುರುತು ಪರಿಚಯವಿರದಿದ್ದರೂ ಯಾವ ದಿಕ್ಕಿಗೆ ಬೇಕಾದರೂ ನುಗ್ಗಿ ಹೋಗಿ ಎಲೆಕ್ಷನ್‌ಗೆ ಸವಾಲು ಹಾಕುವ ಇವರ ಪುಂಡಾಟ ಕೇವಲ ಚೆನ್ನಿಗಪ್ಪ ಅಥವಾ ಮಧುಗಿರಿಗೆ ಮಾತ್ರ ಸೀಮಿತವಾಗಿಲ್ಲ.



ಬಳ್ಳಾರಿ ಕೇಂದ್ರವಾಗಿಟ್ಟುಕೊಂಡು ಉತ್ತರದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು ಅದೇರೀತಿ ದಕ್ಷಿಣದ ಚಿತ್ರದುರ್ಗ, ತುಮಕೂರಿನ ಬಿಜೆಪಿ ಅಭ್ಯರ್ಥಿಗಳ ಜವಾಬ್ದಾರಿಯನ್ನು ಈ ಗಣಿಖೋರರೇ ವಹಿಸಿಕೊಳ್ಳಲು ಹೊರಟಿದ್ದಾರೆ. ಅದಕ್ಕಾಗಿ ಮಾಜಿ ಸಚಿವ ಶ್ರೀರಾಮುಲುನನ್ನು ಮುಂದಿಟ್ಟುಕೊಂಡು ನಾಯಕ ಜನಾಂಗದವರನ್ನು ಒಲಿಸಿಕೊಳ್ಳುವ ಸರ್ಕಸ್ ಶುರು ಮಾಡಿದ್ದಾರೆ. ಒಂದೆಡೆ ಬಿಜೆಪಿ ಗರ್ಭಗುಡಿಯ ಒಂದು ಗುಂಪು ಈ ರೆಡ್ಡಿಗಳು ಆಶ್ವಾಸನೆ ನೀಡಿರುವಂತೆ ಮೂರ್ನಾಲ್ಕು ಹೆಲಿಕಾಪ್ಟರ್, ಎಂಟುನೂರು ಸ್ಕಾರ್ಪಿಯೋ ಗಾಡಿಗಳು ಹಾಗೂ ನೂರಾರು ಕೋಟಿ ದುಡ್ಡನ್ನು ನೆನೆದು ಥ್ರಿಲ್ಲಾಗಿದ್ದರೆ ಮತ್ತೊಂದೆಡೆ ಯಡ್ಡಿ ಗ್ಯಾಂಗಿಗೆ ಅದೇ ಚಿಂತೆಯಾಗಿಬಿಟ್ಟಿದೆ. ಅದು ಯಾಕೆಂದರೆ ಈ ರೆಡ್ಡಿ ಗ್ಯಾಂಗ್ ಯಡ್ಡಿ ವಿರೋಧಿ ಬಣವಾದ ಅನಂತ್‌ಕುಮಾರ್ ಗುಂಪಿಗೆ ಸೇರಿದ ಜನ. ನಾಳೆ ಒಂದು ವೇಳೆ ಬಿಜೆಪಿಗೆ ಮೆಜಾರಿಟಿ ಸಿಕ್ಕಿಬಿಟ್ಟರೂ ಈ ಐದು ಜಿಲ್ಲೆಗಳಿಂದ ರೆಡ್ಡಿ ಬಣದ ಒಂದಿಪ್ಪತ್ತು ಅಭ್ಯರ್ಥಿಗಳು ಗೆದ್ದು ಬಂದರೆ ಅದೇ ಯಡ್ಡಿಯ ಏಳೇಳು ಜನ್ಮದ ಸಿಎಂ ಕುರ್ಚಿ ಆಸೆಗೆ ಕಲ್ಲು ಹಾಕಬಹುದು.

ತಮ್ಮ ವ್ಯಾಪಾರ, ವ್ಯವಹಾರಕ್ಕಾಗಿ ಯಾರನ್ನು ಬೇಕಾದರೂ ಬಳಸಿ ಎಸೆಯಬಲ್ಲ ಈ ಗಣಿ ರೆಡ್ಡಿಗಳಿಂದಾಗಿ ರಾಜ್ಯ ಬಿಜೆಪಿಯಲ್ಲೀಗ ಸ್ಪಷ್ಟವಾಗಿ ಮೂರು ಬಣಗಳು ಗೋಚರವಾಗತೊಡಗಿದೆ.

ಒಂದು ಯಡ್ಡಿ ಗ್ಯಾಂಗ್, ಇನ್ನೊಂದು ಅನಂತ್‌ಕುಮಾರ್ ಬಣ, ಮೂರನೆಯದೇ ಈ ಗಣಿ ರೆಡ್ಡಿಗಳ ಗ್ಯಾಂಗ್.

ಬಳ್ಳಾರಿ, ರಾಯಚೂರು, ಕೊಪ್ಪಳ, ದುರ್ಗ, ತುಮಕೂರಿನಲ್ಲಿ ಬಿಜೆಪಿ ಎಲೆಕ್ಷನ್‌ನ ಉಸ್ತುವಾರಿ ಹೊತ್ತುಕೊಳ್ಳಲು ತಾವಾಗೇ ಮುಂದೆ ಬರುತ್ತಿರುವ ಜನಾರ್ದನ್ ರೆಡ್ಡಿ ಗುಂಪಿನ ಮುಂದಿನ ಲೆಕ್ಕಾಚಾರಗಳನ್ನು ಯಡ್ಡಿ ಗ್ಯಾಂಗ್ ಈಗಿನಿಂದಲೇ ಆತಂಕದಿಂದ ನೋಡುತ್ತಿದೆ. ಕಳೆದ ಐದಾರು ತಿಂಗಳಿಂದ ಚಿತ್ರದುರ್ಗಕ್ಕೆ ಪದೇಪದೇ ಬಂದುಹೋಗುತ್ತಿರುವ ಶ್ರೀರಾಮುಲು ಜಿಲ್ಲೆಯ ನಾಯಕ ಜನಾಂಗದವರನ್ನು ಓಲೈಸುತ್ತಿದ್ದಾರೆ. ಜೊತೆಗೆ ಒಂದಿಷ್ಟು ಕಾಸು ಸಿಕ್ಕಿತೋ ಏನೋ ಜನತಾದಳದ ತಿಪ್ಪೇಸ್ವಾಮಿಯೇ ಈಗ ರೆಡ್ಡಿಗಳಿಗೆ ಶರಣಾಗಿ ಬಿಜೆಪಿಗೆ ಸೇರಿಕೊಂಡಿದ್ದಾರೆ. ಇನ್ನೊಂದೆಡೆ ಬಳ್ಳಾರಿಯ ಕಮಲಾಪುರದಲ್ಲಿ ನಾಯಕರಿಗೂ ಮಾದಿಗರಿಗೂ ಹೊಡೆದಾಟ ಹಚ್ಚಿ ಅದನ್ನೇ ನಾಯಕ ಜಾತಿ ಜನರ ಒಗ್ಗಟ್ಟಿಗೆ ಬಳಸಿಕೊಳ್ಳುವ ಯತ್ನವನ್ನು ರಾಮುಲು ಮಾಡಿದ್ದಾನೆ.

ಆದರೀಗ ಅದೇ ನಾಯಕ ಜನಾಂಗದ ಕೆಲ ಮುಖಂಡರು ಶ್ರೀರಾಮುಲು ಮೇಲೆ ಮುನಿಸಿಕೊಂಡಿದ್ದಾರೆ. ರಾಮುಲು ಎಡಗೈ-ಬಲಗೈನಂತಿದ್ದ ಮಾವಂದಿರಾದ ಸಣ್ಣ ಫಕೀರಪ್ಪ-ದೊಡ್ಡ ಫಕೀರಪ್ಪ ಜೋಡಿ ಕತ್ತೆ ನಾಗಣ್ಣನೆಂಬ ಕ್ರಿಮಿನಲ್ ವ್ಯಕ್ತಿಯ ವಿಚಾರದಲ್ಲಿ ರಾಮುಲು ಜೊತೆ ಜಗಳವಾಡಿಕೊಂಡಿದ್ದಾರೆ. ಹೇಳುತ್ತಾ ಹೋದರೆ ಈ ಕತ್ತೆ ನಾಗಣ್ಣನ ಎಪಿಸೋಡಿಗೇ ನಾಲ್ಕು ಪುಟ ಬೇಕಾದೀತು. ಅದಿರಲಿ, ಮುಂದಿನ ಅಸೆಂಬ್ಲಿ ಎಲೆಕ್ಷನ್‌ಗೆ ಈ ರೆಡ್ಡಿಗಳು ರೆಡಿಯಾಗುತ್ತಿರುವ ಪರಿ ಸಾಮಾನ್ಯವಾದುದಲ್ಲ.

ಬಳ್ಳಾರಿ ಸುತ್ತಮುತ್ತಲಿನ ರಾಜಕೀಯದಲ್ಲಿ ಲಿಂಗಾಯತರಿಗೂ, ರೆಡ್ಡಿಗಳಿಗೂ ಮೊದಲಿಂದಲೂ ಸಂಘರ್ಷವಿದೆ. ಇತ್ತೀಚೆಗೆ ಭಾರಿ ಹಣ ಮಾಡಿಕೊಂಡಿರುವ ಜನಾರ್ದನ ರೆಡ್ಡಿ ಗ್ಯಾಂಗ್ ಬರೀ ರೆಡ್ಡಿಗಳನ್ನೇ ನಂಬಿಕೊಂಡರೆ ಪ್ರಯೋಜನವಿಲ್ಲವೆಂದು ಆ ಪ್ರಾಂತ್ಯದ ಪ್ರಬಲ ಗುಂಪಾದ ನಾಯಕ ಜನಾಂಗದವರನ್ನು ಓಲೈಸುತ್ತಾ ಬಂದಿತ್ತು. ಅದೀಗ ಅಕ್ಕಪಕ್ಕದ ಜಿಲ್ಲೆಗಳಿಗೂ ವ್ಯಾಪಿಸುತ್ತಿದೆ. ದುರ್ಗದ ಹುಲಿ ಕಾಂಗ್ರೆಸ್ ಸಂಸದ ಎಂ.ವೈ. ಹನುಮಂತಪ್ಪನವರೇ ನಾಳೆ ಬಿಜೆಪಿ ಸೇರಿದರೂ ಆಶ್ಚರ್ಯವಿಲ್ಲ ಎನ್ನುತ್ತಿದ್ದಾರೆ ಜನ. ಜೊತೆಗೆ ಹೈದರಾಬಾದ್ ಕರ್ನಾಟಕದ ನೀರಾವರಿ ಪ್ರದೇಶಗಳಲ್ಲಿರುವ ಆಂಧ್ರ ರೆಡ್ಡಿಗಳ ಕ್ಯಾಂಪ್‌ಗಳು, ರೆಡ್ಡಿ ಕಂಟ್ರಾಕ್ಟರುಗಳು, ವ್ಯಾಪಾರಿಗಳನ್ನೆಲ್ಲಾ ತಮ್ಮ ರೆಡ್ಡಿ ಬ್ರಾಂಡಿನ ಬಿಜೆಪಿ ರಾಜಕೀಯಕ್ಕೆ ಎತ್ತಿ ಕಟ್ಟುತ್ತಿರುವ ಜನಾರ್ದನ್ ರೆಡ್ಡಿ ಗುಂಪು ಅಪಾಯಕಾರಿ ರಾಜಕೀಯಕ್ಕೆ ಕೈಹಾಕುತ್ತಿದೆ.



ಕರ್ನಾಟಕ-ತಮಿಳುನಾಡಿನ ಹೊಗೇನಕಲ್ ಗಡಿ ವಿವಾದದ ಬಗ್ಗೆ ಅಲ್ಲಿಗೇ ಹೋಗಿ ಧರಣಿ ಮಾಡುತ್ತೇನೆಂದು ಹಾರಾಡಿದ್ದರು ಯಡ್ಡಿ. ಈಗ ಮತ್ತೊಂದು ನೆರೆರಾಜ್ಯ ಆಂಧ್ರದಿಂದ ಬಂದಿರುವ ಈ ಗಣಿಖೋರ ರೆಡ್ಡಿಗಳು ಕರ್ನಾಟಕದಲ್ಲಿ ಅಟ್ಟಹಾಸದ ರಾಕ್ಷಸ ರಾಜಕೀಯ ನಡೆಸುತ್ತಾ ಎಲ್ಲವನ್ನೂ ಆಕ್ರಮಿಸಿಕೊಳ್ಳುವ ಗಾಂಚಲಿ ತೋರಿಸುತ್ತಿರುವಾಗ ಏಕೆ ಸುಮ್ಮನಿದ್ದಾರೆ? ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆಂಬ ಒಂದೇ ಕಾರಣದಿಂದ ನಾಯಕ ಜನಾಂಗದವರನ್ನು ಇನ್ನಿತರ ದಲಿತ ಹಾಗೂ ಅನ್ಯ ಜಾತಿಗಳ ವಿರುದ್ಧ ಎತ್ತಿಕಟ್ಟುತ್ತಿರುವ ಗಣಿಧಣಿಗಳ ರಾಜಕೀಯದ ಬಗ್ಗೆ ಬಿಜೆಪಿಗಾಗಲೀ ಯಡ್ಡಿಗಾಗಲೀ ಆಕ್ಷೇಪಣೆಗಳೇ ಇಲ್ಲವಾ?

'ಬಾಯ್ಮೋಳ್ಳಂತ ಎಕ್ಕಡ ಪೆಟ್ಟಾಲೋ....' ಅಂದ ರೆಡ್ಡಿ

[illegible]

ಕಾಂಗ್ರೆಗೆ ಹಾರಿದ ದರ್ಶನಾಪುರ ಎಂಬ ಸಮಸ್ಯೆ


ದರ್ಶನಾಪುರ

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಗುಲಬರ್ಗಾ ಜಿಲ್ಲೆಯ ಶಹಾಪುರ ಮತಕ್ಷೇತ್ರದ ಚುನಾವಣೆಯ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಜನತಾ ದಳದಲ್ಲಿ ಇದ್ದು ಆ ಪಕ್ಷ ಕೊಡಮಾಡಿದ ಮಂತ್ರಿ ಸ್ಥಾನವನ್ನು ಹಾಯಾಗಿ ಅನುಭವಿಸಿ, ಆ ಮೂಲಕ ಸಾಕಷ್ಟು ದುಡ್ಡನ್ನು ಕಮಾಯಿಸಿಕೊಂಡಿರುವ ಮಾಜಿ ಸಚಿವ ದರ್ಶನಾಪುರ ಶರಣಬಸಪ್ಪ ಈ ಬಾರಿ ಇಲ್ಲಿ ಕಾಂಗ್ರೆನಿಂದ ಸ್ಪರ್ಧಿಸುತ್ತಿರುವುದು ವಿಶೇಷವಾಗಿದೆ.

ಒಮ್ಮಿಂದೊಮ್ಮೆ ದರ್ಶನಾಪುರ ಕಾಂಗ್ರೆಸ್ ತೆಕ್ಕೆಗೆ ಹೋಗಿರುವುದು ತನ್ನ ರಾಜಕೀಯ ಉಳಿವಿಗಾಗಿ ಯಾದರೂ ಇಡೀ ಕ್ಷೇತ್ರದ ಮೂಲ ಕಾಂಗ್ರೆಸ್ಸಿಗರು ಇದರಿಂದ ಮೂಕವೇದನೆ ಅನುಭವಿಸುವಂತಾಗಿದೆ. ಇಷ್ಟು ವರ್ಷಗಳ ಕಾಲ ತಮ್ಮ ರಾಜಕೀಯ ಕಡುವೈರಿ ಎಂದು ಭ್ರಮಿಸಿಕೊಂಡು ದರ್ಶನಾಪುರ ಮತ್ತು ಗ್ಯಾಂಗ್‌ಅನ್ನು ವಿರೋಧಿಸುತ್ತ ಬಂದವರಿಗೆ ಈಗ ಏಕ್‌ದಂ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಮಣೆ ಹಾಕಬೇಕಾದ ಸಂದಿಗ್ಧ ಸ್ಥಿತಿ ಎದುರಾಗಿದೆ. ಕೆಲವು ಸಾಮಾನ್ಯ ಕಾರ್ಯಕರ್ತರು ಬಹಿರಂಗವಾಗಿಯೆ "ಅಡವಿಯ ದೆವ್ವ ಬಂದು ಮನೆಯಲ್ಲಿದ್ದವರನ್ನು ಓಡಿಸಿತು" ಎಂದು ಹೇಳುತ್ತಿದ್ದಾರೆ.

ದರ್ಶನಾಪುರ ಕಾಂಗ್ರೆಗಳ ತೆಕ್ಕೆಗೆ ಸೇರಿರುವುದು ಆ ಪಕ್ಷಕ್ಕೆ ಬಲವನ್ನು ತಂದುಕೊಟ್ಟಿರಬಹುದು. ಸ್ಥಳೀಯ ಪುರಸಭೆ, ತಾಲ್ಲೂಕ್ ಪಂಚಾಯತಿ, ಜಿಲ್ಲಾ ಪಂಚಾಯತಿ ಯಲ್ಲಿ ದರ್ಶನಾಪುರ ಬೆಂಬಲಿತ ಸದಸ್ಯರ ಸಂಖ್ಯೆಯೂ ಹೆಚ್ಚಾಗಿರುವುದು ಇದಕ್ಕೆ ಕಾರಣವಾಗಿದೆ. ಜೊತೆಗೆ ದರ್ಶನಾಪುರ ಕೆಬಿಜೆಎನ್‌ಎಲ್‌ನಲ್ಲಿ ನಡೆಸಿದ ಅವ್ಯಾಹತ ಲೂಟಿಯ ಕೊಂಚ ಪಾಲನ್ನು ಈ ಸಲದ ಚುನಾವಣೆಯಲ್ಲಿ ಸುರಿಯುವುದರಿಂದ ಕೆಲವು ಆಸೆಬುರುಕ ಕಾಂಗ್ರೆಸ್ಸಿಗರಿಗೆ ಈಗಾಗಲೇ ಬಾಯಲ್ಲಿ ನೀರೂರಿರುವುದು ಸುಳ್ಳಲ್ಲ, ದರ್ಶನಾಪುರ ಜಿಪುಣಾಗ್ರೇಸರ.

ಆತ ತನ್ನ ಬಂಧು, ಬಳಗ ಮತ್ತು ಜಾತಿಬಾಂಧವರ ಹೊರತಾಗಿ ಬೇರೆಯವರಿಗೆ ತನ್ನ ಹಣದ ನೀರಾವರಿಯನ್ನು ಹರಿಸದವ. ಕಳೆದ ಚುನಾವಣೆಯ ಸಂದರ್ಭದಲ್ಲಿ ಕೆಲವು ಜನ ಕಾಂಗ್ರೆಸ್ ಕಾರ್ಯ ಕರ್ತರು ದರ್ಶನಾಪುರನನ್ನು ಹಿಡಕೊಂಡು ತಮ್ಮ ಐಸತ್ತಿಗೆ ತಕ್ಕಂತೆ ಕಮಾಯಿಸಿಕೊಂಡ ರಾಯಿತು ಎಂದು ಭ್ರಮಿಸಿದ್ದರು.

ಅಂದಂತೆ ದರ್ಶನಾಪುರ ಕೂಡ ಅವರ ಆಶೆಗೆ ನೀರೆರೆಯುತ್ತ "ನೀವೆಲ್ಲ ಕಂಟ್ರಾಕ್ಟ ಲೈಸನ್ಸಗಳನ್ನು ತೆಗೆಸಿ ಇಡಿ, ನಾನು ಅಧಿಕಾರಕ್ಕೆ ಬಂದ ನಂತರ ನಿಮಗೆಲ್ಲ ಕೆಲಸಗಳನ್ನು ಕೊಡಿಸುತ್ತೇನೆ" ಎಂದು ಹೇಳಿದ್ದ. ಇದನ್ನು ಕೇಳಿ ಬಹುತೇಕ ಜನ ತಾವು ಈಗಾಗಲೇ ಬಹುದೊಡ್ಡ ಕಂಟ್ರಾಕ್ಟರ್‌ಗಳಾಗಿದ್ದೇವೆಂದು ಭ್ರಮಿಸಿದ್ದರು. ಆದರೆ ದರ್ಶನಾಪುರ ಗೆದ್ದು ಬರುತ್ತಲೇ ಅವರೆಲ್ಲರ ಕನಸುಗಳಿಗೆ ಎಳ್ಳು ನೀರು ಬಿಟ್ಟ ಸಂಗತಿ ಅವರೆಲ್ಲರ ಮನಸ್ಸಿನಲ್ಲಿ ಇನ್ನೂ ಹಸಿಹಸಿಯಾಗಿಯೇ ಇದೆ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ಬಹುತೇಕ ಕಾಂಗ್ರೆಸಿಗರು ತಮ್ಮ ಜಂಘಾಬಲವನ್ನೆ ಕಳೆದುಕೊಂಡಿದ್ದಾರೆ. ಹೀಗಾಗಿ ಅವರೆಲ್ಲ ಮಾನಸಿಕವಾಗಿ ಹಿಂದೆ ಸರಿಯುತ್ತಾ ಮತ್ತೊಂದು ಪಕ್ಷದ ಕಡೆಗೆ ಆಶಾಭಾವನೆಯಿಂದ ನೋಡುತ್ತಿದ್ದಾರೆ.

ಹಳೆಯ ಕಾಂಗ್ರೆಸ್ಸಿಗ ಧರಂ-ಕರಂಗಳ ನಂಟನ್ನು ಹೊಂದಿರುವ ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲ ಶಿರವಾಳನದು ಇದೀಗ ತ್ರಿಶಂಕು ಸ್ಥಿತಿ.




ಕಾಂಗ್ರೆಸ್ಸಿನಲ್ಲಿದ್ದೂ ಕಂಗಾಲಾಗಿರುವ ಪರಿಸ್ಥಿತಿ. ದರ್ಶನಾಪುರ ಶಾಸಕನಾಗಿದ್ದಾಗ ಒಂದೇ ಒಂದು ಸಲವೂ ಆತನ ಕೆಲಸಗಳ ಕುರಿತು ಪುನರಾವಲೋಕನ ಮಾಡದ, ವಿರೋಧ ಪಕ್ಷವಾಗಿದ್ದರೂ ಕ್ರಿಯಾಶೀಲವಾಗಿರದ, ತನ್ನದೇ ಪಕ್ಷದ ಜನಗಳನ್ನು ಸಂಘಟಿಸಲಾಗದ ಸೊಂಭೇರಿ ಈ ಸಿರವಾಳ. ನಿಜ, ಈತ ಸಂಭಾವಿತ, ಯಾರಿಗೂ ಕೇಡು ಬಗೆಯದ. ಆದರೆ ಅಂತಹದ್ದೊಂದು ಟ್ರಂಪ್‌ಕಾರ್ಡ ಒಂದನ್ನು ಬಿಟ್ಟರೆ, ಈತನಲ್ಲಿ ಹೇಳಿಕೊಳ್ಳುವ ಯಾವ ಕ್ವಾಲಿಟಿಯೂ ಇಲ್ಲ, ಇಷ್ಟು ವರ್ಷಗಳ ಕಾಲ ಶಿರವಾಳ-ಗುಲಬರ್ಗಾ-ಬೆಂಗಳೂರು ಅಂತೆಲ್ಲ ತಿರುಗಾಡಿ ಇದೀಗ ಜ್ಞಾನೋದಯವಾದವರಂತೆ ಕಾಂಗ್ರೆಸ್ ಟಿಕೆಟಗಾಗಿ ಹಲುಬುತ್ತಿದ್ದಾರೆ.

ಕಾಂಗ್ರೆಸಿನಲ್ಲಿದ್ದೂ ಶಿರವಾಳ ನೊಂದಿಗೆ ಇರದಿದ್ದ ಬಹುತೇಕ ಜನರನ್ನು ಇತ್ತೀಚೆಗೆ ದೆಹಲಿಗೆ ಕರಕೊಂಡು ಹೋಗಿದ್ದ ಈತ. ಅಲ್ಲಿ ಇವರೆಲ್ಲ ಭೇಟಿಮಾಡಿದ ಪೃಥ್ವಿರಾಜ ಚವ್ಹಾಣನಂತೂ ಶಿರವಾಳನ ಮುಖದ ಮೇಲೆಯೆ ನೀರಿಳಿಸಿ, ಮಲಾಮು ಹಚ್ಚಿ ಕಳಿಸಿದ.

ಇದರಿಂದ ಹೌಹಾರಿರುವ ಸಿರವಾಳ ಈಗ ತನ್ನ ಶಕ್ತಿ ಮೀರಿ ಪಕ್ಷದ ಟಿಕೆಟ್ ಹೊಡಕೊಳ್ಳುವ ತರಾತುರಿಯಲ್ಲಿ ದ್ದಾರೆ. ಅದಕ್ಕಾಗಿ ಕಂಡಕಂಡ ದೇವರಿಗೆ ಹರಕೆ ಮಾತ್ರವಲ್ಲ, ಸಿಕ್ಕಸಿಕ್ಕ ಚಿಲ್ಲರೆ ದೇವರು ದಿಂದಿರುಗಳ ಪಾದಕ್ಕೂ ಬೀಳುತ್ತಿದ್ದಾರೆ. ತೀರಾ ಇತ್ತೀಚೆಗೆ ಶಹಾಪುರ ನಗರದ ಶ್ರೀದೇವಿ ಗಂಡ ಶರಣಪ್ಪ ಗೂಗಲ್ ಹತ್ತಿರ ಹೋಗಿ ಅಡ್ಡ ಬಿದ್ದದ್ದು ತಾಜಾ ಉದಾಹರಣೆಯಂತಿದೆ.

ಇಷ್ಟು ದಿನ ಇವರ ಜೊತೆಗೆ ಇರುವವರಂತೆ ಕಂಡು ಬರುತ್ತಿದ್ದ ಚಂದ್ರಶೇಖರ ಆರಬೋಳ, ಸಿದ್ಧಲಿಂಗಪ್ಪ ಆನೇಗುಂದಿ, ವೆಂಕಣಗೌಡ ಹಾಲಬಾವಿ, ಬಸವರಾಜೇಂದ್ರ ದೇಶಮುಖ ಮುಂತಾದವರೆಲ್ಲ ಈ[...] ಮಾನಸಿಕವಾಗಿ ಅವರಿಂದ ಬಹುದ[...] ನಡೆದುಹೋಗಿದ್ದಾರೆ. ಕೃತಜ್ಞತೆಗಾಗಿ ಎಂಬ[...] ಅಮಾತೆಪ್ಪ ಕಂದಕೂರ ಎಂಬ ಎಂ.ಎಲ್.ಸಿ. ಮಾತ್ರ ಇವರ ಜೊತೆಗಿದ್ದಾನೆ. ಆದರೆ ಸುರೇಂದ್ರ ಪಾಟೀಲ ಮಡ್ನಾಳ ಎಂಬಾತ ಅದಾಗಲೇ ದರ್ಶನಾಪುರನ ಅಂತರಂಗದ ಕವಾಟಗಳಲ್ಲಿ ಸೇರಿಬಿಡುವ ಜೋರು ತಯಾರಿ ನಡೆಸಿದ್ದಾನೆ.


ಮಲ್ಲಣ್ಣ ಮಡ್ಡಿ

ಇಷ್ಟು ದಿನ ಕಾಂಗ್ರೆಸ್ ಟಿಕೆಟ್‌ಗಾಗಿ ಹಂಬಲ[...] ಅದಕ್ಕಾಗಿ ಕೊಂಚ ಹಣವನ್ನೂ ಖರ್ಚು ಮಾಡಿಕೊಂ[...] ಸಿದ್ರಾಮಯ್ಯ ಗುಂಪಿನ ಡಾ. ಚಂದ್ರಶೇಖರ ಸುಬೇದ[...] ಎಂಬಾತ ಯಾವತ್ತು ದರ್ಶನಾಪುರ ಕಾಂಗ್ರೆ[...] ಬಂದರೋ ಅಂದಿನಿಂದ ತನ್ನ ರಾಗ ಬದ[...] "ರಾಜಕೀಯ ನಮ್ಮಂಥವರಿಗೆ ಅಲ್ಲ" ಎಂದು ವ[...] ಪ್ರಾಕ್ಟೀಸ್‌ನಲ್ಲಿ ತೊಡಗಿದ್ದಾನೆ. ಇದೊಂದು ಬ[...] ಶಿರವಾಳ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲೆಂದು ಬಿಜೆ[...] ಪಕ್ಷದತ್ತ ಹಣಕಿ ಹಾಕಿದರೆ ಆ ಪರಿಸ್ಥಿತಿಯೆ ಬೇರೆ[...] ಗುತ್ತದೆ. ಆದರೆ ತನ್ನ ಜೊತೆಗೆ ಎಲ್ಲರನ್ನು ಕರಕೊಂ[...] ಹೋಗುವ ತಾಕತ್ತು ಶಿರವಾಳನಂತಹ ಆಸಾಮಿ[...] ಇದೆಯೆ? ಎಂಬುದೆ ಸದ್ಯದ ಪ್ರಶ್ನೆಯಾಗಿದೆ.

ಅಳಿದ ಊರಿಗೆ ಉಳಿದವನೆ ಗೌಡ ಎನ್ನುವ[...] ದರ್ಶನಾಪುರ ತೊರೆದ ಜೆಡಿಎಸ್ ಪಕ್ಷಕ್ಕೆ ಮಲ್ಲ[...] ಮಡ್ಡಿಯೇ ಅನಿವಾರ್ಯ ಅಧ್ಯಕ್ಷ. ಈತನೂ ಈ ಬಾ[...] ಜೆಡಿಎಸ್‌ವತಿಯಿಂದ ಚುನಾವಣೆಗೆ ನಿಲ್ಲುವ ತಯಾ[...] ನಡೆಸಿದ್ದಾನೆ. ಆದರೆ ಅದೇಕೋ ಅದು ಅಷ್ಟು ಜೋ[...] ಅನಿಸುತ್ತಿಲ್ಲ, ತಾಲೂಕಿನ ಅಧ್ಯಕ್ಷನಾಗಿಯೂ ತನ್ನ ಪಕ್ಷ[...] ಕಾರ್ಯಕರ್ತರನ್ನು ಹಿಡಿದು ನಿಲ್ಲಿಸದ ಮನಸ್ಥಿತಿಗೆ ಮ[...] ಇಳಿದಿದ್ದಾನೆ ಅನಿಸುತ್ತದೆ. ತನ್ನ ಕಣ್ಣ ಮುಂದ[...] ಜೆಡಿಎಸ್‌ನಿಂದ ಆಯ್ಕೆಯಾದ ಬಹುತೇಕ ಪುರಸಭೆ[...]

ಯಲಬುರ್ಗಾ ರಾಜಕಾರಣ ಈಗ ಜ್ವರಪೀಡಿತ!



ರಾಯರೆಡ್ಡಿ

ನವೆಂಬರ್‌ಗೆ ಎದ್ದರಾಯಿತು ಅಂತ ನಿದ್ದ ಗುಳಿಗೆ ನುಂಗಿ ಮಲಗಿದ್ದ ಯಲಬುರ್ಗಾ ರಾಜಕಾರಣ ಈಗ ದಡಬಡಿಸಿ ಎದ್ದು ಓಡಾಡುತ್ತಿದೆ. ಆದರಲ್ಲೂ ಸೋಲಿನ ಛಾಯೆ ದಟ್ಟವಾದಂತೆಲ್ಲ ಹೆಚ್ಚಾಗುತ್ತಿರುವ ರಾಯರೆಡ್ಡಿಯ ಪರದಾಟ ಎಲ್ಲರಿಗೂ ಮಜಾ ಕೊಡುತ್ತಿದೆ. ಈಗಾಗಲೇ ಕುಷ್ಟಗಿ ಕ್ಷೇತ್ರದ ಹಿಂದುಳಿದ ವರ್ಗಗಳನ್ನು ಸ್ಪಷ್ಟವಾಗಿ ಒಡೆದಿರುವ ದೇವೇಗೌಡ-ಕುಮಾರಸ್ವಾಮಿ ಇನ್ನೇನು ಯಲಬುರ್ಗಿಗೆ ಲಗ್ಗೆ ಇಡಲಿದ್ದಾರೆ.

ಅಭಿವೃದ್ಧಿಯತ್ತ ನಿರ್ಲಕ್ಷ್ಯ, ಕಳಪೆ ಕಾಮಗಾರಿ, ಮತದಾರರಿಂದ ದೂರ, ದುರಹಂಕಾರದ ವರ್ತನೆಗಳಿಂದಾಗಿ ತನ್ನ ವಿರುದ್ಧವೇ ವಿರೋಧಿ ಅಲೆಯನ್ನು ಸೃಷ್ಟಿಸಿಕೊಂಡಿರುವ ರಾಯರೆಡ್ಡಿ ಈಗ ಅದೆಷ್ಟು ಕಂಗೆಟ್ಟಿದ್ದಾನೆಂದರೆ ಇತ್ತೀಚೆಗೆ ತನ್ನ ಹೆಸರಿನಲ್ಲೊಂದು 'ಅಭಿಮಾನಿ ಸಂಘ' ಹುಟ್ಟುಹಾಕಿದ್ದಾನೆ. ಇದನ್ನು ಕಂಡು ಜನ ಇನ್ನೂ ಹೆಚ್ಚು ನಗುವಂತಾಗಿದೆ.

'ಅನುಕಂಪ, ಅನುಕಂಪ' ಅಂತ ಬಡಬಡಿಸುತ್ತಿರುವ ಬಿಜೆಪಿ ಮಾತ್ರ ಇನ್ನೂ ಸರಿಯಾಗಿ ಎದ್ದು ನಿಂತಿಲ್ಲ. ಆದರೂ ಟಿಕೆಟ್ ಸಿಗುವ ಯಾವ ಭರವಸೆ ಇಲ್ಲದಿದ್ದರೂ ಈಶಣ್ಣ ಗುಳಗಣ್ಣನವರ ಎಂಬಾತ ರಾಜ್ಯ ನಾಯಕರ ಭಿನ್ನಮತದಿಂದ ಮೂಲೆಗುಂಪಾಗುವ ಭೀತಿಯಲ್ಲಿದ್ದಾನೆ. ಏಕೆಂದರೆ ಈತ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದಾಗಿನಿಂದ ಅನಂತ್ ಬಣದೊಂದಿಗೆ ಗುರುತಿಸಿಕೊಂಡಿದ್ದ ರಿಂದಾಗಿ ಎಲ್ಲಾ ಲಾಭದಾಯಕ ಹುದ್ದೆಗಳು ಈಶಣ್ಣನಿಗೆ ಸಿಗದಂತಾದವು. ಇತ್ತೀಚೆಗೆ ತನಗೆ ಟಿಕೆಟ್ ಸಿಗುವ ಸಾಧ್ಯತೆಯನ್ನು ಗಟ್ಟಿ ಮಾಡಿಕೊಳ್ಳಲು ಈಶಣ್ಣ ರೆಡ್ಡಿ-ಯಡ್ಡಿಗಳನ್ನು ಯಲಬುರ್ಗಿಗೆ ಕರೆಸಿದ್ದರೂ ಆತನ ಮುಖದ ಮೇಲೆ ಇನ್ನೂ ಕಳೆಯೇ ಬಂದಿಲ್ಲ.

ಇದಕ್ಕೆ ಕಾರಣವೂ ಇದೆ: ಈ ಭಾಗದ ಬಿಜೆಪಿ ಪಾಲಿಗೆ ಕಂಟ್ರೋಲ್ ರೂಂ ಆಗಿರುವ ರೆಡ್ಡಿ ಗ್ಯಾಂಗ್ ಯಲಬುರ್ಗಾ ಟಿಕೆಟ್ ಫಿಕ್ಸ್ ಮಾಡಲಿದೆ. ಆದರಲ್ಲೂ ಮೀಸಲಾತಿ ಹೊಡೆತಕ್ಕೆ ತತ್ತರಿಸುತ್ತಿರುವ ತಮ್ಮ ಬಳ್ಳಾರಿ ಹಿಂಬಾಲಕರಿಗೆ ಕೊಪ್ಪಳ ಜಿಲ್ಲೆಯಲ್ಲಿ ಪುನರ್‌ವಸತಿ ಕಲ್ಪಿಸಬೇಕಿದೆ. ಇದೆಲ್ಲದರ ನಡುವೆಯೇ ರಾಯರೆಡ್ಡಿಯ ರಾಜಕೀಯ ಸಂಗಾತಿ, ಮುಖಂಡ ಹಾಲಪ್ಪ ಆಚಾರ್ ಕೂಡ ಅದೇ ಬಿಜೆಪಿಯ ಟಿಕೆಟ್‌ಗೆ ಕೈ ಹಾಕಿರುವುದು ಈಶಣ್ಣನ ನಿದ್ರಾ ಭಂಗಕ್ಕೆ ಕಾರಣ.


ಚೆನ್ನನಗೌಡ

"ಮೂರು ಸಾರಿ ಸ್ಪರ್ಧಿಸಿ ಸೋತು ಸುಣ್ಣವಾಗಿರುವ, ಕೈ ಖಾಲಿಯಾಗಿರುವ ಈಶಣ್ಣನಿಗೆ ಬಿಜೆಪಿ ಟಿಕೆಟ್ ಕೊಟ್ಟರೆ ಸೋಲು ಖಚಿತ. ಅದಕ್ಕೆ ಆಗರ್ಭ ಶ್ರೀಮಂತ ಹಾಲಪ್ಪನಿಗೆ ಟಿಕೆಟ್ ಕೊಡಿ" ಅಂತ ಅದೇ ಬಿಜೆಪಿಯ ಒಂದು ಗುಂಪು ವಾದಿಸುತ್ತಿರುವುದು ಲೋಕಲ್‌ನ ಕಮಲ್‌ನಾಥರಿಗೆ ದಿಗಿಲು ಉಂಟು ಮಾಡಿದೆ.

ಈ ಮಧ್ಯೆ ಕಾಂಗ್ರೆಸ್‌ನಲ್ಲೂ ಭಿನ್ನಮತ ಶುರುವಾಗಿದೆ. ಈ ಬಾರಿ ರಾಯರೆಡ್ಡಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಲು ಬಳ್ಳಾರಿಯ ಎಂ.ವೈ. ಘೋರ್ಪಡೆ ಕಡೆಯ ಕುಡಿಯೊಂದು ಓಡಾಡುತ್ತಿದ್ದು, ಒಂದು ರಹಸ್ಯ ಸಭೆಯನ್ನು ನಡೆಸಲಾಗಿದೆ. "ನಾನು ಬಿಜೆಪಿಗೆ ಹೋಗ್ತಿನಿ" ಅಂತ ಹವಾ ಎಬ್ಬಿಸಿ ಬಿಜೆಪಿ ಕ್ಯಾಂಡಿಡೇಟ್‌ಗಳನ್ನೇ ಫ್ಯಾಲಿ ಮಾಡಲು ಹೊರಟಿದ್ದ ರಾಯರೆಡ್ಡಿಗೆ ಇತ್ತ ಕಾಂಗ್ರೆಸ್‌ನಲ್ಲೇ ತನ್ನ ಜಾಗಕ್ಕೆ ಘೋರ್ಪಡೆ ಫ್ಯಾಮಿಲಿ ಕಂಟಕವಾಗಲಿದ್ದನ್ನು ಕಂಡು ಆತನೇ ಫ್ಯಾಲಿಯಾಗಿದ್ದಾನೆ.

ಮೊದಲಿನಿಂದ ರಾಯರೆಡ್ಡಿಯ ಕೈ ಹಿಡಿದಿರುವುದು ವಂಕಲಕುಂಟ ಭಾಗದ ಸರ್ವಧರ್ಮದ ಮತದಾರರು. ಆದರೆ ಈಗ ಪರಿಸ್ಥಿತಿ ಬದಲಾಗಿದ್ದು, ಇಲ್ಲಿನ ಬ್ರಾಹ್ಮಣರು ಬಿಜೆಪಿಯತ್ತ ವಾಲುತ್ತಿರುವಂತಿದೆ. ಇದನ್ನು ತಡೆಯಲು ಇತ್ತೀಚೆಗೆ ರಾಯರೆಡ್ಡಿ ಹೋಮ ಕೂಡವನ್ನೂ ನಡೆಸಿದ್ದಾನೆ ಎನ್ನಲಾಗಿದೆ. ಅಷ್ಟೇ ಅಲ್ಲದೆ, ಇಲ್ಲಿರುವ ಮೂವತ್ತು ಸಾವಿರದಷ್ಟು ಲಿಂಗಾಯತ ಪಂಚಮಸಾಲಿ ಜನಾಂಗದವರನ್ನು ಓಲೈಸಲು ಕೆಲವೇ ದಿನಗಳಲ್ಲಿ ಕಿತ್ತೂರು ಚೆನ್ನಮ್ಮಳ ಪ್ರತಿಮೆ ಅನಾವರಣ ಮಾಡಲಿದ್ದಾನೆ ರಾಯರೆಡ್ಡಿ.


ಅಮರಗುಂಡಪ್ಪ

ಆದರೆ ಈ ಬಾರಿ ಅದೇ ಪಂಚಮಸಾಲಿ ಜನಾಂಗದ ಜಿಲ್ಲಾ ಪಂಚಾಯ್ತಿ ಸದಸ್ಯ ಚೆನ್ನನಗೌಡ ಪಾಟೀಲ್ ಜೆಡಿಎಸ್‌ನಿಂದ ಕಣಕ್ಕಿಳಿಯಲು ಪ್ರಯತ್ನಿಸುತ್ತಿರುವುದು ರಾಯರೆಡ್ಡಿಗೆ ಮಾತ್ರವಲ್ಲ ಬಿಜೆಪಿಯಲ್ಲೂ ಎರಡಕ್ಕೂ ಭಯ ಹುಟ್ಟಿಸಿದೆ. 2004 ರ ಚುನಾವಣೆಯಲ್ಲಿ ಯಲಬುರ್ಗಿಯಲ್ಲಿ ಟಿಕೆಟ್ ನೀಡಲು ಕ್ಯಾಂಡಿಡೇಟ್‌ಗಳಿಗಾಗಿ ಜೆಡಿಎಸ್ ಪರದಾಡುತ್ತಿದ್ದಾಗ ಇದೇ ಚೆನ್ನನಗೌಡ ಕ್ಯಾಂಡಿಡೇಟ್ ಆಗಿ 15

...ಡು ದರ್ಶನಾಪುರನ ಹಿಂದೆ ಕಾಂಗ್ರೆಸ್ ದುಡಿದಿಲ್ಲಗೆ ...ತ್ತಿದ್ದರೂ ಮೂಕಪ್ರೇಕ್ಷಕನಂತೆ ಕುಳಿತು ತನಗ ...ವ ಮುಖ್ಯವಾದ ಘಳಿಗೆಗಾಗಿ ಕಾದುಕುಳಿತ್ತಿದ್ದೇನೆ ...ದು ಹೇಳುತ್ತಿದ್ದಾನೆ. ಅದೃಷ್ಟ ತಾನು ಕುಳಿತ ಕಡೆಗೆ ...ಪುವಿಲ್ಲ. ಅದನ್ನು ಹುಡುಕಾಡಿ ಹೋಗಿ ...ಯಬೇಕು ಎಂಬ ಸಂಗತಿ ಅರಿಯದ ಮುದ್ದಿ ...ನಾವಣೆಯ ಆಖಾಡದಿಂದ ಆಗಲೇ ಅರ್ಧ ...ಹೋದಂತೆ ಕಂಡುಬರುತ್ತಿದೆ. ಒಂದು ವೇಳೆ ...ಣ್ಣಿ ಮುದ್ದಿ ಚುನಾವಣೆಯನ್ನು ಗಂಭೀರವಾಗಿ ...ಗಣಿಸಿದ್ದೇ ಆದರೆ ಆತ ದರ್ಶನಾಪುರನಿಗೆ ಪ್ರಬಲ ...ಪೋಟಿ ನೀಡುವುವರಲ್ಲಿ ಯಾವುದೇ ಅನುಮಾನ ... ಜನಸಾಮಾನ್ಯನೊಳಗೆ ಈಗಾಗಲೆ ಇರುವ ...ನಾಪುರನ ವಿರೋಧಿ ಅಲೆಯನ್ನು ಬಳಸಿಕೊಳ್ಳುವ ...ತ್ತು ಈ ಮುದ್ದಿಗೆ ಯಾರು ಕೊಡಬೇಕು?

...ಬಿಜೆಪಿ ಪಕ್ಷದ ಅಧ್ಯಕ್ಷನಾದ ಡಾ. ಮಲ್ಲಣ್ಣಗೌಡ ...ನಾಳ ಮತ್ತು ಮಲ್ಲಾಬಾದಿ ಈರಣ್ಣಗೌಡ ಇಬ್ಬರೂ ...ಟ್ ಆಕಾಂಕ್ಷಿಗಳಾಗಿದ್ದಾರೆ. ಇಬ್ಬರಲ್ಲಿ ಡಾಕ್ಟರ್ ಮಲ್ಲಣ್ಣ ...ನಿಗೆ ಟಿಕೆಟ್ ಸಿಗುವ ಛಾನ್ಸುಗಳು ಅಧಿಕವಾಗಿವೆ. ...ದರೆ ದರ್ಶನಾಪುರನಂತಹ ರೊಕ್ಕಸ್ತ ವ್ಯಕ್ತಿಯನ್ನು ...ನಾವಣೆಯ ಮೂಲಕ ಹಣಿಯುವುದು ...ಭವಾದ ಕೆಲಸವಲ್ಲ.

...ಜೊತೆಗೆ ಜಾತಿಯ ಬಲದ ದೃಷ್ಟಿಯಿಂದ ...ಲ್ಲಣ್ಣಗೌಡನದೂ ರೆಡ್ಡಿ ಜನಾಂಗ. ಸ್ವಭಾವತಃ ಒಳ್ಳೆಯ ... ಯಾರಿಗೂ ಕೇಡು ಬಗೆಯದ, ಸಾಧ್ಯವಾದರೆ ...ಯದನ್ನು ಮಾಡುವ, ಕೀಳು ರಾಜಕೀಯದಿಂದ ...ದ ಇರುವ ವ್ಯಕ್ತಿ. ಇದರಿಂದಾಗಿ ಮಲ್ಲಣ್ಣಗೌಡ ... ಬಾರಿ ಬಿರುಸಿನ ಕುಸ್ತಿಯನ್ನು ಆಡುತ್ತಾನೆ. ...ದರೆ ಬಹುತೇಕ ಲಿಂಗಾಯತ ಯುವಕರು ...ನಾವಣೆಗಳಿಗಿಂತ ಬಹು ಮುಂಚೆಯೆ ಚಡ್ಡಿ ...ಲಿಸಿಕೊಂಡು, ಆಗಲೇ ತಾಲೀಮು ಶುರುಹಚ್ಚಿ ...ಡಿದ್ದಾರೆ. ಬಿಜೆಪಿಯ ಭರ್ಜರಿ ಭಾಷಣಗಳ ಮೋಡಿ ...ವನ್ನು ಮರಳು ಮಾಡಿದೆ. ಆದರೆ ಆ ಪಕ್ಷದ ...ದೆ ಇರುವ ಕೀಳು ಹುನ್ನಾರಗಳು, ಕುತಂತ್ರ ...ಕಗಳು ಜನತೆಯ ಅರಿವಿಗೆ ಬಾರದೆ ಇರುವುದು ...ಖದನೀಯ.

...ಒಟ್ಟಿನಲ್ಲಿ ಈ ಸಲದ ಚುನಾವಣೆಯಲ್ಲಿ ಯಾರು ...ಲೆದ್ದು ಬರುತ್ತಾರೋ ಅವರು ತಮ್ಮ ರಾಜಕೀಯ ...ಯುಗಗಳನ್ನು ಮತ್ತಷ್ಟು ಆಳಕ್ಕೆ ಇಳಿಸಿಕೊಳ್ಳುವುದರಲ್ಲಿ ...ವುದೇ ಅನುಮಾನಬೇಡ.

-ವಿಶ್ವಾರಾಧ್ಯ ಸತ್ಯಂಪೇಟೆ

...ರದಷ್ಟು ಮತ ಪಡೆದು ಪಾರ್ಟಿಯ ...ರ್ಮಾದೆ ಉಳಿಸಿದ್ದರು. ಸೋತ ಅನುಕಂಪ ...ಗೂ ಪಂಚಮಸಾಲಿ ಜನಾಂಗದ ಒಗ್ಗಟ್ಟು - ... ಎರಡು ಕಾರಣದಿಂದಾಗಿ ಚೆನ್ನನಗೌಡ ಸ್ಪರ್ಧೆಗೆ ...ಮುಪಿನಿಂದಲೇ ತಯಾರಿದ್ದಾರಲ್ಲದೆ ಅವರಿಗೆ ...ಸೂರಸ್ವಾಮಿಯ ಕೃಪೆಯೂ ಇದೆ.


... ಆದರೆ ಚೆನ್ನನಗೌಡರ ಟಿಕೆಟ್‌ಗೆ ...ಡ್ಡಗಾಲಾಗಿರುವುದು ಅಮರಗುಂಡಪ್ಪ ಮೇಟಿ. ... ದೇವೇಗೌಡರ ಕ್ಯಾಂಡಿಡೇಟ್ ಆಗಿದ್ದಾನಲ್ಲದೆ, ...ನಿಗೆ ಇಲ್ಲಿ ಮತ್ತೊಂದು ಪ್ರಮುಖ ...ಮುದಾಯವಾಗಿರುವ ಲಿಂಗಾಯತ ಗಾಣಿಗೇರ ...ಬಲವೂ ಇದೆ.

... ಲಿಂಗಸೂರು ಕ್ಷೇತ್ರದ ಅಮರಗುಂಡಪ್ಪ, ...ಮರೇಗೌಡಭಯ್ಯಾಪುರನ ದೋಸ್ತು, ಆದರೆ ...ಜಕೀಯದಲ್ಲಿ ಬಯ್ಯಾಪುರ ಮತ್ತು ...ಸ್ಪರ್ಧೆಗಾರಿಕೆಯಲ್ಲಿ ಅಮರಗುಂಡಪ್ಪ ಬೆಳೆಯುತ್ತ ...ಿದರು. ಲಿಂಗಸೂರು ಕ್ಷೇತ್ರ ಮೀಸಲು ...ದ್ದರಿಂದ ಕಾಂಗ್ರೆಸ್ಸಿನಿಂದ ಅಮರೇಗೌಡ, ...ಎಸ್‌ನಿಂದ ಅಮರಗುಂಡಪ್ಪ ಕುಷ್ಟಗಿ ಕ್ಷೇತ್ರದತ್ತ ...ನ್ನ ಹಾಕಿದರು. ಆದರೆ ಕುಷ್ಟಗಿ ಕ್ಷೇತ್ರವನ್ನು ಕೆ. ...ಪ್ಪರಿಗೆ ಬಿಟ್ಟುಕೊಡಲು ತೀರ್ಮಾನಿಸಿದ ...ಮರಗುಂಡಪ್ಪ ತಮ್ಮ ಸ್ವಜಾತಿಯ 20 ...ವಿರಕ್ಕೂ ಹೆಚ್ಚು ಮತದಾರರಿರುವ ಯಲಬುರ್ಗಾ ...ಕ್ಷೇತ್ರದತ್ತ ಈಗ ಮುಖ ಮಾಡಿದ್ದಾರೆ.

... ಅನುಕಂಪದ ಆಧಾರದ ಮೇಲೆ ಚೆನ್ನನಗೌಡ, ...ತಿಯ ಬಲದ ಮೇಲೆ ಅಮರಗುಂಡಪ್ಪ - ...ವರಲ್ಲಿ ಯಾರಿಗೆ ಟಿಕೆಟ್ ಎಂಬುದರ ಮೇಲೆ ...ಎಸ್‌ನ ಭವಿಷ್ಯ ನಿಂತಿದೆ. ಇವರ್ಲಿಬ್ಬರ ನಡುವೆ ...ಮುರಿದ್ದಿಗೆ ಅಧಿಕೃತ ವಿರೋಧ ಪಕ್ಷವಾಗಿ ನಿಂತ ...ಪಿಯ ಕ್ಯಾಂಡಿಡೇಟ್ ಬಿ.ಕೆ. ಪರಶುರಾಮ ...ಬಿಡುವುದು ಖಚಿತ.


... ಒಟ್ಟಿನಲ್ಲಿ ಈಗ ಇಡೀ ಯಲಬುರ್ಗಾ ...


-ವರದಿಗಾರ



ವಿಜಯಕುಮಾರ್ ಶೆಟ್ಟಿ

ಸುರತ್ಕಲ್: ಕಾಂಗ್ರೇಸ್ ಸೆಟೆದು ನಿಂತೀತೆ?





ನವ ಮಂಗಳೂರು ಬಂದರು, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಬಜ್ಪೆ ವಿಮಾನ ನಿಲ್ದಾಣ, ಎಂ.ಆರ್.ಪಿ.ಎಲ್, ಎಂ.ಸಿ.ಎಫ್, ಕುದುರೆಮುಖ ಅದಿರು ಕಾರ್ಖಾನೆ, ಎನ್.ಐ.ಟಿ.ಕೆ. ತಾಂತ್ರಿಕ ಮಹಾವಿದ್ಯಾಲಯಗಳ ದೆಸೆಯಿಂದ ಸುರತ್ಕಲ್ ವಿಧಾನಸಭಾ ಕ್ಷೇತ್ರವು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಹೊರಹೊಮ್ಮಿದೆಯಲ್ಲದೆ ಇಲ್ಲಿನ ಅತಿ ಶ್ರೀಮಂತ ಕ್ಷೇತ್ರವೂ ಆಗಿದೆ.

ಮಂಗಳೂರು ಮಹಾನಗರ ಪಾಲಿಕೆಯ 27 ವಾರ್ಡ್‌ಗಳು ಮತ್ತು 12 ಗ್ರಾಮಗಳನ್ನೊಳಗೊಂಡ ಈ ಕ್ಷೇತ್ರವು ಇದೀಗ ಕ್ಷೇತ್ರ ಪುನರ್‌ವಿಂಗಡಣೆಯ ಪ್ರಕ್ರಿಯೆಗೆ ಸಿಲುಕಿ ಮಂಗಳೂರು ಉತ್ತರ ಎಂದು ಹೆಸರು ಬದಲಾಯಿಸಿಕೊಂಡಿದೆ. ಈಗ ಸುರತ್ಕಲ್‌ನ 12 ಗ್ರಾಮಗಳು ಮೂಡಬಿದಿರೆ ಕ್ಷೇತ್ರ ಪಾಲಾಗಿದ್ದು, ಬಂಟ್ವಾಳದ ಗುರುಪುರ ಹೋಬಳಿಯ ಕಾಂಗ್ರೆಸ್ ಬಾಹುಳ್ಯದ ಪ್ರದೇಶ ಇದಕ್ಕೆ ಸೇರ್ಪಡೆಯಾಗಿದ್ದನ್ನು ಬಿಟ್ಟರೆ ಹೆಚ್ಚಿನ ಬದಲಾವಣೆಗಳೇನೂ ಆಗಿಲ್ಲ. ಅಂದರೆ, ಕ್ಷೇತ್ರ ಪುನರ್‌ವಿಂಗಡಣೆಯ ಪರಿಣಾಮ ಸುರತ್ಕಲ್ ಮಟ್ಟಿಗೆ ಹಳೆಯ ಬಾಟಲಿಯ ಹೊಸ ಮದ್ಯ ಎಂದಷ್ಟೇ ಸಮೀಕರಿಸಬಹುದಾಗಿದೆ.

ಜಾತಿವಾರು ವಿಶ್ಲೇಷಣೆ ಮಾಡಿದರೆ ಈ ಕ್ಷೇತ್ರದಲ್ಲಿ ಬಂಟರದ್ದೇ ಪ್ರಾಬಲ್ಯ. ಅಂದಾಜು ಪ್ರಕಾರ ಬಂಟರು 60,000, ಬಿಲ್ಲವ ಮತ್ತು ಮುಸ್ಲಿಮರು ತಲಾ 40,000, ಮೊಗವೀರರು 20,000, ಕ್ರಿಶ್ಚಿಯನ್ ಸೇರಿದಂತೆ ಇತರರು ಒಟ್ಟು 20,000 ಸೇರಿ ಒಟ್ಟು 1,80,000 ರಷ್ಟು ಮತದಾರರಿರುವ ಸುರತ್ಕಲ್‌ನಲ್ಲಿ ಕಳೆದ ಬಾರಿ ಬಿಜೆಪಿ ಗೆದ್ದಿತ್ತು. ಬಿಜೆಪಿಯ ಕೃಷ್ಣ ಪಾಲೇಮಾರ್ ಹರಿಸಿದ ಹಣದ ಹೊಳೆ ಮತ್ತು ಕಾಂಗ್ರೆಸ್‌ನ ವಿಜಯಕುಮಾರ್ ಶೆಟ್ಟಿಯ ಅತಿ ಆತ್ಮವಿಶ್ವಾಸದ ಪರಿಣಾಮವಾಗಿ ಈ ಕ್ಷೇತ್ರವು ಬಿಜೆಪಿಯ ಪಾಲಾಗಿತ್ತೇ ವಿನಃ ಅದು ಬಿಜೆಪಿಯ ನೈಜ ಗೆಲುವಂತೂ ಆಗಿರಲಿಲ್ಲ. ಏಕೆಂದರೆ ಕಾಂಗ್ರೆಸನ್ನು 4 ನೇ ಬಾರಿ ಪ್ರತಿನಿಧಿಸಿದ ವಿಜಯಕುಮಾರ್ ಶೆಟ್ಟಿ ಮತ್ತು ಪಾಲೇಮಾರ್ ನಡುವೆ ನಡೆದ ಜಟಾಪಟಿಯಲ್ಲಿ ಗೆಲುವಿನ ಅಂತರ ಕೇವಲ 3,312 ಮತಗಳಾಗಿದ್ದವು. ಈ ನಡುವೆ ಜೆಡಿಎಸ್‌ನಿಂದ ವಿಜಯಕುಮಾರ್ ಶೆಟ್ಟಿಯನ್ನು ಸೋಲಿಸಲೆಂದೇ ಸ್ಪರ್ಧಿಸಿದ್ದ ಕಾರ್ಮಿಕ ನಾಯಕ ಸುರೇಶ್ಚಂದ್ರ ಶೆಟ್ಟಿ ಗಳಿಸಿದ 4136 ಓಟುಗಳು, ಕನ್ನಡನಾಡು ಪಕ್ಷದ ಅಬೂಬಕ್ಕರ್ ಹಾಗೂ ಪಕ್ಷೇತರ ಅಭ್ಯರ್ಥಿ ಸುರಯ್ಯ ಗಳಿಸಿದ ಮತಗಳೂ ಕಾಂಗ್ರೆಸ್‌ಗೆ ಕನ್ನ ಕೊರೆದಿದ್ದವು.

ಇನ್ನು ಕಳೆದ 3-5 ವರ್ಷದಲ್ಲಿ ಶಾಸಕ ಪಾಲೇಮಾರ್ ಕಾರ್ಯವೈಖರಿ ಮತ್ತು ಗಿಮಿಕ್ಕುಗಳ ಜತೆಗೆ ಇತ್ತೀಚಿಗಿನ ಮ.ನ.ಪಾ. ಚುನಾವಣೆಯನ್ನು ತುಲನೆ ಮಾಡಿ ನೋಡಿದರೆ ಮೇಲ್ನೋಟಕ್ಕೆ ಪರಿಸ್ಥಿತಿ ಬಿಜೆಪಿಗೆ ಪ್ಲಸ್ ಇದ್ದಂತೆ ಕಾಣುತ್ತದೆ. ಕಳೆದ ಎಂಎಲ್‌ಎ ಚುನಾವಣೆಯಲ್ಲಿ ಕಾಂಗ್ರೆಸ್ ಸೋತರೂ ಮ.ನ.ಪಾ. ವ್ಯಾಪ್ತಿಯಲ್ಲಿ 1,111 ಮತಗಳ ಲೀಡ್ ಸಾಧಿಸಿತ್ತು. ಒಟ್ಟು 27 ಕ್ಷೇತ್ರಗಳ ಪೈಕಿ 22 ಕಡೆ ಕಾಂಗ್ರೆಸ್‌ನ ಕಾರ್ಪೋರೇಟರ್‌ಗಳೇ ಇದ್ದರು. ಮೊನ್ನೆ ನಡೆದ ಮ.ನ.ಪಾ. ಚುನಾವಣೆಯಲ್ಲಿ ಪರಿಸ್ಥಿತಿ ಬದಲಾಗಿ ಸುರತ್ಕಲ್‌ನಲ್ಲಿ 17 ಸ್ಥಾನಗಳಿಗೆ ತನ್ನ ಬಲವನ್ನು ವೃದ್ಧಿಸಿಕೊಂಡ ಬಿಜೆಪಿ ಮ.ನ.ಪಾ.ದಲ್ಲಿ ಸ್ಪಷ್ಟ ಬಹುಮತ ಪಡೆದು ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಯಿತು. ಇದು ಕೂಡಾ ಬಿಜೆಪಿಯ ನೈಜ ವಿಜಯವಾಗದೆ ಕಾಂಗ್ರೆಸ್‌ನ ಸ್ವಯಂಕೃತ ಅಪರಾಧದ ಫಲವೆಂದೇ ಹೇಳಬೇಕು. ಜನಾರ್ದನ್ ಪೂಜಾರಿ, ವೀರಪ್ಪ ಮೊಯ್ಲಿಯಂತಹ ರಾಷ್ಟ್ರೀಯ ನಾಯಕರು ಸ್ಥಳೀಯರನ್ನು ನಿರ್ಲಕ್ಷಿಸಿ ತಮ್ಮ ಭಟ್ಟಂಗಿಗಳಿಗೆ ಮಣೆ ಹಾಕಲು ಚಿಲ್ಲರೆಗಳಂತೆ ವರ್ತಿಸಿದ್ದರ ಫಲವಾಗಿಯೇ ಕಾಂಗ್ರೆಸ್ ನೆಲಕಚ್ಚಿದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಸುರತ್ಕಲ್‌ನಲ್ಲಿ ಅವಕಾಶ ವಂಚಿತ ಕಾಂಗ್ರೆಸಿಗರು ಪಕ್ಷಕ್ಕೆ ಸೆಡ್ಡು ಹೊಡೆದು ಬಂಡುಕೋರ ಅಭ್ಯರ್ಥಿಗಳಾಗಿ ಕಣಕ್ಕಿಳಿದದ್ದು ಬಿಜೆಪಿ ದಾರಿಯನ್ನು ಸುಗಮಗೊಳಿಸಿತ್ತು. ಸುರತ್ಕಲ್ ಕ್ಷೇತ್ರ ವ್ಯಾಪ್ತಿಯೊಂದರಲ್ಲೇ ಪಕ್ಷೇತರ ಅಭ್ಯರ್ಥಿಗಳು 23,055 ಮತಗಳನ್ನು ಬಾಚಿ ಇಬ್ಬರು ಬಂಡುಕೋರ ಅಭ್ಯರ್ಥಿಗಳು ಗೆದ್ದು ಬಂದರು. ಇನ್ನು ಜೆಡಿಸ್, ಸಿಪಿಎಂ ಕೂಡಾ ಸ್ಪರ್ಧಿಸಿ ಕಾಂಗ್ರೆಸ್‌ಗೆ ಕೊಂಚಮಟ್ಟಿಗೆ ಹಾನಿ ಮಾಡಿದ್ದರಿಂದ ಬಿಜೆಪಿ ಕುಂತಲ್ಲೇ ಗೆಲುವನ್ನು ತನ್ನದಾಗಿಸಿಕೊಂಡಿತು. ಬಿಜೆಪಿ ಈ ಒಂದು ಮ.ನ.ಪಾ.ದ ಗೆಲುವಿನ ಭ್ರಮೆಯನ್ನೇ ಹಿಡಿದುಕೊಂಡು ಈಗ ಮತ್ತೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಯೋಚನೆಯಲ್ಲಿದೆ.

ಪ್ರಚಾರ ಪ್ರಿಯ ಪಾಲೇಮಾರ್

ತನ್ನ 3-5 ವರ್ಷದ ಶಾಸಕಗಿರಿಯ ಕಾರುಬಾರುಗಳನ್ನು ವರ್ಣಿಸುವ 150 ಪುಟಗಳ ಗ್ರಂಥವನ್ನೇ ಪ್ರಕಟಿಸಿರುವ ಕೃಷ್ಣ ಪಾಲೇಮಾರ್ ದಕ್ಷಿಣ ಜಿಲ್ಲೆಯಲ್ಲೇ ಶ್ರೀಮಂತ ಶಾಸಕ. ಈತನ ಸಂಪತ್ತು ಬಂದಿದ್ದೆಲ್ಲ ರಿಯಲ್ ಎಸ್ಟೇಟ್ ದಂಧೆಯಿಂದ. ತನ್ನ ಫೋಟೋ ನಾಳೆ ಪತ್ರಿಕೆಯಲ್ಲಿ ಅಚ್ಚಾಗುತ್ತದೆ ಎಂದಾದರೆ ತಂಡಾಸು ಉದ್ಘಾಟನೆಗೂ ಬಂದು ಫೋಟೋಗೆ ಪೋಸು ಕೊಡುವ ಪ್ರಚಾರಪ್ರಿಯ. ಈತನ ಪಾಲಿಗೆ ಎಮ್ಮೆಲ್ಲೆ ಎಂಬುದು ಒಂದು ನಾಮಾವಸ್ಥೆಯ ಪ್ರಚಾರದ ಹುದ್ದೆ. ಕಾಲಕ್ಕೆ ತಕ್ಕ ಕೋಲ ಕಟ್ಟುವ ವಿದ್ಯೆಯನ್ನು ಕರಗತ ಮಾಡಿಕೊಂಡಿರುವ ಪಾಲೇಮಾರ್ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲರಿಗೂ ಸಲ್ಲುವ ವ್ಯಕ್ತಿ. ಬಡಪಾಯಿ ಮುಸ್ಲಿಮರ ಮನೆಗೆ ಹೋಗಿ ಸಾಂತ್ವನ ಹೇಳುವುದು, ಬಡ ಹೆಣ್ಣುಮಕ್ಕಳ ಮದುವೆಗೆ 2-3 ಸಾವಿರ ಕೊಡುವುದು ಆತನ ಗಿಮಿಕ್ಕುಗಳು. ಮುಸ್ಲಿಂ ಕಂಟ್ರಾಕ್ಟರುಗಳಿಗೆ ಕೆಲಸ ಕೊಡಿಸಿ ಅವರನ್ನು ತನ್ನ ಸುತ್ತ ಇಟ್ಟುಕೊಂಡಿರುವ ನಿಪುಣನೀತ. ಅದೇ ಹೊತ್ತಿಗೆ ಕ್ಷೇತ್ರ ವ್ಯಾಪ್ತಿಯ ಪಣಂಬೂರು ಪೊಲೀಸ್ ಠಾಣೆಯಲ್ಲಿ ಪ್ರಮೋದ್ ಕುಮಾರ್, ಕಾವೂರಿನಲ್ಲಿ ಅನಂತಪದ್ಮನಾಭ, ಕಂಕನಾಡಿಯಲ್ಲಿ ಪ್ರಕಾಶ್ ಎನ್ನುವ ಚೆಡ್ಡಿ ಎಸ್ಸೈಗಳನ್ನು ಕಲೆಹಾಕಿ ಇಟ್ಟುಕೊಂಡಿರುವ ಈತ ಪರೋಕ್ಷವಾಗಿ ಸಂಘ ಪರಿವಾರದ ಡಾರ್ಲಿಂಗ್!

ಜನರನ್ನು ಯಾಮಾರಿಸುವುದರಲ್ಲಿ ಈತ ಅದೆಂತಹ ನಿಪುಣ ಎನ್ನುವುದಕ್ಕೆ ಈತ ಪ್ರಕಟಿಸಿರುವ ಸಾಧನಾ ಗ್ರಂಥವೇ ಸಾಕ್ಷಿ. ಈತ ಹೇಳುರುವಂತೆ 150 ಕೋಟಿ ಹಣವನ್ನು ಸುರತ್ಕಲ್ ಕ್ಷೇತ್ರಕ್ಕೆ ವಿನಿಯೋಗಿಸಿದ್ದೇ ಆದರೆ ಸುರತ್ಕಲ್ 'ಕಿಷ್ಕಿಂಧೆ'ಯಂತೆ ಕಂಗೊಳಿಸಬೇಕಿತ್ತು. ಮಾಜಿ ಶಾಸಕ ಶೆಟ್ಟಿಯ ಮುತುವರ್ಜಿಯಿಂದ ಆದ ಮರವೂರಿನ 18 ಕೋಟಿಯ ರಾಜೀವ್‌ಗಾಂಧಿ ಕುಡಿಯುವ ನೀರಿನ ವೆಂಟೆಡ್ ಡ್ಯಾಂ ಪಕ್ಕ ನಿಂತು ಫೋಟೋ ತೆಗೆಸಿ ಆ ಕಾಮಗಾರಿಯನ್ನೇ ತನ್ನ ಅಕೌಂಟ್‌ಗೆ ಹಾಕಿಕೊಂಡಿದ್ದಾನೆ ಪಾಲೇಮಾರ್. ಅಷ್ಟೇ ಅಲ್ಲದೆ, ಎನ್.ಎಂ.ಪಿ.ಟಿ ಏರ್‌ಪೋರ್ಟ್-ಪಿಲಿಕುಲ-ಎಂ.ಆರ್.ಪಿ.ಎಲ್ ಸೇರಿದಂತೆ ಆಯಾಯ ಸಂಸ್ಥೆಗಳು ತಮ್ಮ ಅನುದಾನದಲ್ಲಿ ಮಾಡಿದ ಕಾಮಗಾರಿಗಳನ್ನೆಲ್ಲಾ ಪಟ್ಟಿ ಮಾಡಿ 150 ಕೋಟಿಯ ಸಾಧನೆಯ ಕ್ರೆಡಿಟ್ ಅನ್ನು ಬಾಚಿಕೊಂಡಿರುವ ಪರಾಕ್ರಮಿ ಈತ. ಹೀಗೆ ಸುರತ್ಕಲ್‌ನಲ್ಲಿ ಸಾಬಣ್ಣಗಳಿಗೆ ಫೂಲ್ ಮಾಡುತ್ತಲೇ ಸಂಘ ಪರಿವಾರದ ಡಾರ್ಲಿಂಗ್ ಆಗಿ ಮಿಂಚುತ್ತಿರುವ ಕೃಷ್ಣ ಪಾಲೇಮಾರ್‌ನ ಓಟದ ವೇಗ ನೋಡಿದರೆ ಕಾಂಗ್ರೆಸ್‌ನ ವಿಜಯಕುಮಾರ್ ಶೆಟ್ಟಿಯದ್ದು ಮೊಲದೆದುರು ಆಮೆಯ ನಡಿಗೆಯಂತೆ ಕಾಣುತ್ತಿದೆ. ಆದ್ದರಿಂದಲೇ ಪ್ರಾಮಾಣಿಕ ಮತ್ತು ಒಳ್ಳೆಯ ಮನುಷ್ಯನಾಗಿದ್ದರೂ ಆತ ತನ್ನ 'ರಾಜಕೀಯ ಮಂದಗತಿಯ' ಕಾರಣಕ್ಕೆ ಪಾಲೇಮಾರ್ ಎದುರು ಮಂಕಾಗಿ ಕಾಣತೊಡಗಿದ್ದಾರೆ. ಕಳೆದ ನಾಲ್ಕು ಬಾರಿ ಸುರತ್ಕಲ್ ಕ್ಷೇತ್ರದಲ್ಲಿ ಸ್ಪರ್ಧಿಸಿ 2 ಬಾರಿ ಗೆದ್ದು ಬಂದಿರುವ ಶೆಟ್ಟಿ, 5 ನೇ ಬಾರಿಯೂ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಇಂಟಕ್ ಮೂಲಕ ರಾಜಕೀಯ ರಂಗಸ್ಥಳಕ್ಕೆ ಪಾದಾರ್ಪಣೆ ಮಾಡಿರುವ ರಾಕೇಶ್ ಮಲ್ಲಿ ಹಾಗೂ ಕಾಂಗ್ರೆಸ್ ಅಲ್ಪಸಂಖ್ಯಾತ ಜಿಲ್ಲಾಧ್ಯಕ್ಷ ಸ್ಥಳೀಯ ಮೊಯಿದಿನ್ ಬಾವ ಸೀಟು ಕೊಟ್ಟರೆ ಹಣವನ್ನು ನೀರಿನಂತೆ ಚೆಲ್ಲುವ ಆಮಿಷದೊಂದಿಗೆ ಟಿಕೆಟು ಆಕಾಂಕ್ಷಿಗಳಲ್ಲಿ ಪ್ರಮುಖರಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ಮತ್ತು ಇತ್ತೀಚಿನ ಮ.ನ.ಪಾ. ಚುನಾವಣೆಗಳೆರಡರಲ್ಲೂ ತನ್ನ ಸ್ವಯಂಕೃತ ಅಪರಾಧದಿಂದ ಸೋಲನ್ನು ತನ್ನದಾಗಿಸಿಕೊಂಡ ಕಾಂಗ್ರೆಸ್‌ಗೆ ಈ ಬಾರಿಯಾದರೂ ಸೋಲೇ ಪಾಠವಾದೀತೇ ಎನ್ನುವುದನ್ನು ಕಾದು ನೋಡಬೇಕಾಗಿದೆ. **-ಪ್ರಕಾಶ್ ಪಿಂಟೋ**

ಹಲವು ಚಂದಿರಗಳು

ಒಂದಾನೊಂದು ಕಾಲದಲ್ಲಿ, ಸಮುದ್ರ ತೀರದ ರಾಜ್ಯವೊಂದರಲ್ಲಿ ಲೆನೋರ್ ಎಂಬ ಪುಟ್ಟ ರಾಜಕುಮಾರಿ ಇದ್ದಳು.

ಹತ್ತು ವರ್ಷ ವಯಸ್ಸು ತುಂಬಿ, ಹನ್ನೊಂದನೆ ವರ್ಷಕ್ಕೆ ಕಾಲಿಟ್ಟಿದ್ದ ಲೆನೋರ್ ಒಮ್ಮೆ ಅತಿಹೆಚ್ಚು ರಾಸ್‌ಬೆರಿ ಕಡುಬುಗಳನ್ನು ತಿಂದಿದ್ದಕ್ಕೆ ಹಾಸಿಗೆ ಹಿಡಿದಳು. ಆಕೆಯನ್ನು ಪರೀಕ್ಷಿಸಲು ಬಂದ ರಾಜವಂಶದ ವೈದ್ಯ ಆಕೆಯ ನಾಡಿ ಮಿಡಿತ ನೋಡಿದ, ದೇಹದ ಶಾಖವನ್ನು ದಾಖಲಿಸಿ ಕೊಂಡ, ನಾಲಿಗೆ ಚಾಚಿಸಿ ಪರೀಕ್ಷಿಸಿದ. ಅದೆಲ್ಲದರಿಂದ ಚಿಂತಾಕ್ರಾಂತನಾದ ವೈದ್ಯ ಲೆನೋರ್‌ಳ ತಂದೆ ರಾಜನನ್ನೇ ಕರೆಸಿದ.

"ನಿನಗೇನಿಷ್ಟ ಹೇಳು, ನಾನು ಅದನ್ನು ನಿನಗಾಗಿ ತರಿಸಿ ಕೊಡುತ್ತೇನೆ" ಎಂದು ರಾಜ ತನ್ನ ಮಗಳಿಗೆ ಹೇಳಿದ.

"ಹೌದಾ? ಹಾಗಾದರೆ ನನಗೆ ಚಂದಿರ ಬೇಕು. ಅದನ್ನು ತರಿಸಿಕೊಟ್ಟರೆ ನಾನು ಹಾಸಿಗೆ ಬಿಟ್ಟು ಏಳುತ್ತೇನೆ" ಎಂದಳು ರಾಜಕುಮಾರಿ.

ತನ್ನ ಆಸ್ಥಾನದಲ್ಲಿ ಹಲವಾರು ಪಂಡಿತರಿದ್ದು, ತಾನು ಬಯಸಿದ್ದನ್ನೆಲ್ಲ ಅವರು ಕೊಡುತ್ತಿದ್ದುದರಿಂದ ತನ್ನ ಮಗಳಿಗೆ ಚಂದಿರನನ್ನು ತರಿಸುವ ಭರವಸೆಯನ್ನು ರಾಜ ನೀಡಿದ. ಅಲ್ಲಿಂದ ತನ್ನ ಆಸ್ಥಾನಕ್ಕೆ ತೆರಳಿದ ರಾಜ ತನ್ನ ಪ್ರಧಾನಮಂತ್ರಿಯನ್ನು ಕರೆಸಿದ.

ಎತ್ತರಕ್ಕೆ, ದಪ್ಪಗೆ ಇದ್ದ ಪ್ರಧಾನಮಂತ್ರಿ ಕನ್ನಡಕ ಧರಿಸುತ್ತಿದ್ದ, ಆ ಕನ್ನಡಕ ಎಷ್ಟು ದಪ್ಪಗಿತ್ತೆಂದರೆ ಅವುಗಳ ಮೂಲಕ ಆತನ ಕಣ್ಣುಗಳು ಎರಡು ಪಟ್ಟು ದೊಡ್ಡದಾಗಿ ಕಾಣಿಸುತ್ತಿದ್ದವು. ಅಂದಹಾಗೆ ಆತನ ಕಣ್ಣು ಹಾಗೆ ದಪ್ಪಗೆ ಕಾಣಿಸುತ್ತಿದ್ದರಿಂದಲೇ ಆತ ಎಲ್ಲರಿಗಿಂತ ಎರಡು ಪಟ್ಟು ಹೆಚ್ಚು ಬುದ್ಧಿವಂತ ಎಂಬ ಭ್ರಮೆಯನ್ನು ಮೂಡಿಸುತ್ತಿದ್ದವು.

"ನನ್ನ ಮಗಳಾದ ಲೆನೋರ್‌ಗೆ ಚಂದಿರ ಬೇಕಂತೆ" ಎಂದು ರಾಜ ಹೇಳಿದ.

"ಚಂದಿರ?" ಎಂದು ಉದ್ಗಾರವೆತ್ತಿದ ಪ್ರಧಾನಮಂತ್ರಿಯ ಕಣ್ಣುಗಳು ಇನ್ನೂ ಅಗಲಗೊಂಡು ಆತ ನಾಲ್ಕು ಪಟ್ಟು ಹೆಚ್ಚು ಬುದ್ಧಿವಂತನಂತೆ ಕಂಡುಬಂದ.

"ಹೌದು ಚಂದಿರ, ಚಂ-ದಿ-ರ. ಇವತ್ತು ರಾತ್ರಿಯೊಳಗೆ, ಕನಿಷ್ಠ ನಾಳೆಯೊಳಗೆ ಅದನ್ನು ತರಿಸು" ಎಂದ ರಾಜ.

ಈ ಅನಿರೀಕ್ಷಿತ ಬೇಡಿಕೆಯಿಂದ ಬೆವರಲಾರಂಭಿಸಿದ ಪ್ರಧಾನಿ ತನ್ನ ಕರವಸ್ತ್ರದಿಂದ ಹಣೆಯನ್ನು ಒರೆಸಿಕೊಂಡು "ಮಹಾಪ್ರಭು, ಈ ಹಿಂದೆ ನೀವು ಕೇಳಿದ್ದನ್ನೆಲ್ಲ ನಾನು ತರಿಸಿಕೊಟ್ಟಿದ್ದೇನೆ" ಎಂದು ಹೇಳಿ "ಅದೃಷ್ಟವಶಾತ್ ಅಂತಹವುಗಳ ಪಟ್ಟಿ ನನ್ನ ಜೇಬಿನಲ್ಲಿದೆ" ಎಂದ. ಆ ಪಟ್ಟಿಯನ್ನು ಹೊರತೆಗೆದು "ನೋಡಿ, ನಿಮಗೆ ಏನೇನನ್ನು ತರಿಸಿದ್ದೇನೆ. ದಂತ, ಕೋತಿ, ನವಿಲು, ವಜ್ರ, ವೈಢೂರ್ಯ, ಕಪ್ಪು ಗುಲಾಬಿ, ಪಿಂಕ್ ಆನೆಗಳು, ನೀಲಿ ನಾಯಿಗಳು, ಮತ್ಸ್ಯ ಕನ್ಯೆಯರು, ಸುಗಂಧಗಳು, ನರ್ತಕಿಯರು, ಒಂದು ಕೆಜಿ ಬೆಣ್ಣೆ ಎರಡು ಡಜನ್ ಮೊಟ್ಟೆ, ಒಂದು ಕಿಲೋ ಸಕ್ಕರೆ..... ಕ್ಷಮಿಸಿ ಕೊನೆಯ ಮೂರು ವಸ್ತುಗಳನ್ನು ನನ್ನ ಹೆಂಡತಿ ಸೇರಿಸಿದ್ದಾಳೆ" ಎಂದ.

"ನೀಲಿ ನಾಯಿಗಳ ಬಗ್ಗೆ ನನಗೆ ನೆನಪಿಲ್ಲ" ಎಂದ ರಾಜ.

"ಮಹಾಪ್ರಭು, ನೋಡಿ ಇಲ್ಲಿ ನೀಲಿ ನಾಯಿಗಳ ಪಕ್ಕ ಒಂದು ಚಿಕ್ಕ ರೈಟ್‌ಮಾರ್ಕ್ ಹಾಕಲಾಗಿದೆ. ನೀವೆಲ್ಲೋ ಮರೆತಿದ್ದೀರಿ ಮಹಾಪ್ರಭು" ಎಂದ ಪ್ರಧಾನಿ.

"ಅದೆಲ್ಲ ಇರಲಿ, ಈಗ ನನಗೆ ಚಂದಿರ ಬೇಕು" ಎಂದ ರಾಜ.

"ಮಹಾಪ್ರಭು, ದೂರದ ದೇಶಗಳಾದ ಸಮರ್‌ಖಂಡ್, ಅರೆಬಿಯಾ, ಜಾಂಜಿಬಾರ್‌ಗಳಿಂದ ನೀವು ಆಸೆಪಟ್ಟಿದ್ದನ್ನೆಲ್ಲ ತರಿಸಿದ್ದೇನೆ. ಆದರೆ ಚಂದಿರನನ್ನು ತರೆಸಲಾರೆ. ಅದು 35,000 ಮೈಲಿ ದೂರ ಇದೆಯಲ್ಲದೆ, ಅದು ರಾಜಕುಮಾರಿಯ ಕೊಠಡಿಗಿಂತ ಎರಡು ಪಟ್ಟು ದೊಡ್ಡದಾಗಿದೆ. ಮಾತ್ರವಲ್ಲ ಅದನ್ನು ಕಾಯಿಸಿದ ತಾಮ್ರದಿಂದ ರಚಿಸಲಾಗಿದೆ. ನಾನು ನೀಲಿ ನಾಯಿಗಳನ್ನು ತರಿಸಬಲ್ಲೆ ಆದರೆ ಚಂದಿರನನ್ನು ತರಿಸುವುದು ಅಸಾಧ್ಯ" ಎಂದ ಪ್ರಧಾನಿ.

ಆತನ ಉತ್ತರದಿಂದ ಕೋಪಗೊಂಡ ರಾಜ ಪ್ರಧಾನಿಯನ್ನು ತೊಲಗಿಸಿ ತನ್ನ ಆಸ್ಥಾನದ ಮಂತ್ರವಾದಿಯನ್ನು ಕರೆಸಿದ.

ತೆಳ್ಳಗೆ, ಕುಳ್ಳಗೆ, ಕೋಲುಮುಖದವನಾಗಿದ್ದ ಮಂತ್ರವಾದಿ ಆಗಮಿಸಿದ. ಆತನ ತಲೆ ಮೇಲೆ ಬೆಳ್ಳಿ ನಕ್ಷತ್ರಗಳಿದ್ದ ಕೆಂಪನೆ ಚೂಪಾದ ಟೋಪಿ ಇತ್ತು. ಆತ ಧರಿಸಿದ್ದ ನೀಲಿ ಬಣ್ಣದ ನಿಲುವಂಗಿಯನ್ನು ಚಿನ್ನದ ಗೂಬೆಗಳಿಂದ ಅಲಂಕರಿಸಲಾಗಿತ್ತು, ಆದರೆ ಇಂತಹ ವರ್ಣರಂಜಿತ ವ್ಯಕ್ತಿಯ ಮುಖ ಕೂಡ ರಾಜನ ಅಪೇಕ್ಷೆಯನ್ನು ಕೇಳಿ ಕಳೆಗುಂದಿತು.

"ಮಹಾಪ್ರಭು, ಈ ಹಿಂದೆ ನಿಮಗಾಗಿ ನಾನು ಹಲವಾರು ಬಗೆಯ ಜಾದೂ ಮಾಡಿದ್ದೇನೆ. ನೋಡಿ, ಅದರ ಪಟ್ಟಿಯೊಂದು ಇಲ್ಲಿದೆ" ಎಂದು ಹೇಳಿದ ಮಂತ್ರವಾದಿ ತನ್ನ ನಿಲುವಂಗಿಯ ಆಳದಿಂದ ಒಂದು ಪಟ್ಟಿಯನ್ನು ಹೊರತಂದು ಅದನ್ನು ಓದಲಾರಂಭಿಸಿದ. "ಈ ಪಟ್ಟಿ ಪ್ರಾರಂಭವಾಗುವುದು ಹೀಗೆ: 'ಪ್ರೀತಿಯ ಆಸ್ಥಾನ ಮಾಂತ್ರಿಕರೆ, ತತ್ವಜ್ಞಾನಿಯ ಮಣಿ ಎಂದು ನೀವು ನನಗೆ ಕೊಟ್ಟಿದ್ದ ಈ ಕಲ್ಲನ್ನು ವಾಪಸ್ಸು ಹಿಂದಿರುಗಿಸುತ್ತಿದ್ದೇನೆ. ಕಾರಣ ನೀವು ಅದಕ್ಕೆ ಆರೋಪಿಸಿದ ಶಕ್ತಿ...' ಕ್ಷಮಿಸಿ, ಇದು ಸರಿಯಾದ ಪಟ್ಟಿಯಲ್ಲ" ಎಂದ ಮಾಂತ್ರಿಕ ಮತ್ತೊಂದು ಜೇಬಿನಿಂದ ಇನ್ನೊಂದು ಕಾಗದವನ್ನು ಹೊರತಂದ. "ನೋಡಿ, ನಿಮಗಾಗಿ ನಾನು ಮಾಡಿದ ಮಂತ್ರಜಾಲಗಳು ಎಷ್ಟಿವೆ. ತರಕಾರಿಯಿಂದ ರಕ್ತ ರಕ್ತದಿಂದ ತರಕಾರಿ, ಟೋಪಿಯಿಂದ ಮೊಲ, ಮೊಲದಿಂದ ಟೋಪಿ ಮಾಡಿದ್ದೇನೆ. ಗಾಳಿಯಿಂದ ಹೂವು, ಹಕ್ಕಿಗಳನ್ನು ಸೃಷ್ಟಿಸಿದ್ದೇನೆ. ಅನ್ವೇಷಕ ದಂಡ, ಯಕ್ಷಿಣಿ ಕೋಲು, ಭವಿಷ್ಯವನ್ನು ಹೇಳುವ ಸ್ಫಟಿಕ ಗಾಜುಗಳನ್ನು ಕೊಟ್ಟಿದ್ದೇನೆ. ನಿಮ್ಮ ಬೆನ್ನುನೋವಿಗೆ ಔಷಧಿ, ಕಿವಿನೋವಿಗೆ ತೈಲ, ದೆವ್ವ ಭೂತಗಳನ್ನು ಒದ್ದೋಡಿಸುವ ಮಂತ್ರ... ಇವೆಲ್ಲವನ್ನೂ ಮಾಡಿದ್ದೇನೆ. ಅಷ್ಟೇ ಅಲ್ಲದೆ ನಿಮ್ಮನ್ನು ಅದೃಷ್ಯಗೊಳಿಸುವ ಮೇಲಂಗಿಯನ್ನು ನೀಡಿದ್ದೇನೆ..." ಎಂದ.

"ಆ ಮೇಲಂಗಿ ತನ್ನ ಕೆಲಸ ಮಾಡಲಿಲ್ಲ" ಎಂದ ರಾಜ.

"ಅದು ಹೇಗೆ ಸಾಧ್ಯ?" ಕೇಳಿದ ಮಾಂತ್ರಿಕ.

"ಕೆಲಸ ಮಾಡಲಿಲ್ಲ ಅಂದ್ರೆ ಮಾಡಲಿಲ್ಲ. ಅದನ್ನು ನಾನು ತೊಟ್ಟಿದ್ದರೂ ಎಲ್ಲಾ ವಸ್ತುಗಳಿಗೆ ಡಿಕ್ಕಿ ಹೊಡೆಯುತ್ತಿದ್ದೆ" ಎಂದ ರಾಜ.

"ಅದು ನಿಮ್ಮನ್ನು ಅದೃಷ್ಯಗೊಳಿಸುತ್ತದೆಯೇ ಹೊರತು ನಿಮ್ಮ ಸುತ್ತಲಿರುವ ಸಾಮಾನುಗಳನ್ನಲ್ಲ" ಎಂದು ಮಾಂತ್ರಿಕ ಹೇಳಲಾರಂಭಿಸಿದಾಗ ಆತನನ್ನು ತಡೆದ ರಾಜ "ಅದೆಲ್ಲ ಇರಲಿ, ಈಗ ನನಗೆ ಚಂದಿರ ಬೇಕು. ಅದನ್ನು ತಂದ ನಂತರವೇ ನನ್ನ ಮಗಳು ಚೇತರಿಸಿಕೊಳ್ಳುವುದು" ಎಂದು ಮತ್ತೆ ಆಜ್ಞಾಪಿಸಿದ.

"ಮಹಾಪ್ರಭು, ಅದು ಯಾರಿಂದಲೂ ಸಾಧ್ಯವಿಲ್ಲ, ಅದು 150,000 ಮೈಲಿ ದೂರವಿದೆಯಲ್ಲದೆ ಅದನ್ನು ಹಸಿರು ಬೆಣ್ಣೆಯಿಂದ ಮಾಡಲಾಗಿದೆ. ಅಷ್ಟೇ ಅಲ್ಲ, ಅದು ಈ ಅರಮನೆಗಿಂತಲೂ ಎರಡು ಪಟ್ಟು ದೊಡ್ಡದಾಗಿದೆ" ಎಂದ ಮಾಂತ್ರಿಕ.

ಈ ಉತ್ತರದಿಂದಲೂ ಕೋಪೋದ್ರಿಕ್ತನಾದ ರಾಜ ಮಾಂತ್ರಿಕನನ್ನು ಆತನ ಗುಹೆಗೆ ಅಟ್ಟಿ, ತನ್ನ ಆಸ್ಥಾನದ ಗಣಿತಶಾಸ್ತ್ರಜ್ಞನನ್ನು ಕರೆಸಿದ.

ಬೊಕ್ಕ ತಲೆಯ, ಅರೆ ಕುರುಡನಾಗಿದ್ದ ಗಣಿತ ಶಾಸ್ತ್ರಜ್ಞ ತನ್ನ ಕಿವಿಯ ಹಿಂದೆ ಒಂದು ಪೆನ್ಸಿಲ್ ಅನ್ನು ಸಿಕ್ಕಿಸಿಕೊಂಡು ರಾಜನ ಮುಂದೆ ಹಾಜರಾದ.

"ನೀನು ಇಲ್ಲಿಯವರೆಗೂ ನನಗಾಗಿ ಮಾಡಿರುವ ಸಾಧನೆಗಳ ಪಟ್ಟಿಯನ್ನು ವಿವರಿಸುವ ಅಗತ್ಯವಿಲ್ಲ, ನನ್ನ ಮಗಳಿಗೆ ಚಂದಿರನನ್ನು ತರಿಸಿದರೆ ಸಾಕು" ಎಂದು ರಾಜ ಆದೇಶಿಸಿದ.

"ಮಹಾಪ್ರಭು, ನನ್ನ ಸಾಧನೆಗಳನ್ನು ತಾವು ನೆನಪಿಸಿಕೊಂಡಿದ್ದಕ್ಕೆ ಧನ್ಯವಾದಗಳು. ಆದರೂ ನೋಡಿ, ನಿಮಗಾಗಿ ನಾನು ಏನೇನೆಲ್ಲ ಮಾಡಿದ್ದೇನೆ. ಉಭಯ ಸಂಕಟಗಳ ನಡುವಿನ ಅಂತರ, ಹಗಲು ರಾತ್ರಿಯ ನಡುವಿನ ವ್ಯತ್ಯಾಸ, ಎತ್ತರ ಎಂದರೆ ಎಷ್ಟು, ಆಳ ಎಂದರೆ ಎಷ್ಟು, ಹೋಗುವುದಕ್ಕೆ ಎಷ್ಟು ಹೊತ್ತು, ಹೋದದ್ದು ಎಲ್ಲಿಗೆ ಹೋಯಿತು, ಅಮೂಲ್ಯವಾದದ್ದರ ಮೌಲ್ಯವೆಷ್ಟು, ಇವೆಲ್ಲವನ್ನು ಲೆಕ್ಕ ಹಾಕಿದ್ದೇನೆ. ಅಷ್ಟೇ ಅಲ್ಲ ಸಮುದ್ರದಲ್ಲಿನ ಉಪ್ಪಿನಿಂದ ಎಷ್ಟು ಹಕ್ಕಿಗಳನ್ನು ಹಿಡಿಯಬಹುದು ಎಂಬುದನ್ನೂ ಲೆಕ್ಕ ಮಾಡಿದ್ದೇನೆ. ಅವುಗಳ ಸಂಖ್ಯೆ ನಿಖರವಾಗಿ 187,796,132" ಎಂದ.

"ಅಷ್ಟು ಹಕ್ಕಿಗಳೇ ನಮ್ಮ ಸಾಮ್ರಾಜ್ಯದಲ್ಲಿಲ್ಲ, ಅದೆಲ್ಲ ಇರಲಿ, ರಾಜಕುಮಾರಿ ಲೆನೋರ್‌ಳಿಗೆ ಚಂದಿರನನ್ನು ಕರೆಸು" ಎಂದ ರಾಜ.

"ಮಹಾಪ್ರಭು, ಚಂದಿರ 300,000 ಮೈಲಿ ದೂರವಿದ್ದಾನೆ ಮತ್ತು ಚಂದಿರನನ್ನು ಆಸ್‌ಬೆಸ್ಟಸ್‌ನಿಂದ ಮಾಡಲಾಗಿದೆ. ಅದು ಒಂದು ನಾಣ್ಯದಂತೆ ಚಪ್ಪಟೆಯಾಗಿದ್ದು ಅದನ್ನು ಆಕಾಶಕ್ಕೆ ಅಂಟಿಸಲಾಗಿದೆ. ಅಷ್ಟೇ ಅಲ್ಲ, ಚಂದಿರ ನಿಮ್ಮ ಸಾಮ್ರಾಜ್ಯದ ಅರ್ಧ ಭಾಗದಷ್ಟು ದೊಡ್ಡದಾಗಿದ್ದು ಅದನ್ನು ತರಲು ಯಾರಿಂದಲೂ ಸಾಧ್ಯವಿಲ್ಲ" ಎಂದ ಗಣಿತಶಾಸ್ತ್ರಜ್ಞ.

ಮತ್ತೆ ಕುಪಿತನಾದ ರಾಜ ಆತನನ್ನು ಅಲ್ಲಿಂದ ಒದ್ದೋಡಿಸಿ ತನ್ನ ಆಸ್ಥಾನದ ನಗೆಗಾರನನ್ನು ಕರೆಸಿದ. ತನ್ನ ಗಂಟೆ, ಗೆಜ್ಜೆಗಳ ನಾದದೊಂದಿಗೆ ಕುಣಿಯುತ್ತಾ ಹಾಜರಾದ ನಗೆಗಾರ ರಾಜನ ಪಾದಗಳ ಬಳಿ ಕೂತು "ಮಹಾಪ್ರಭು, ನಿಮ್ಮ ಅಪೇಕ್ಷೆ ಏನೆಂದು ಕೇಳಬಹುದೇ?" ಎಂದ.

"ಯಾರೂ ನನ್ನ ನೆರವಿಗೆ ಬರುತ್ತಿಲ್ಲ, ರಾಜಕುಮಾರಿ ಲೆನೋರ್‌ಳಿಗೆ ಚಂದಿರ ಬೇಕಂತೆ. ಆದರೆ ನಾನು ಪ್ರತಿಬಾರಿ ಕೇಳಿದಾಗ ಅದು ದೂರವಾಗುತ್ತಿದೆಯಲ್ಲದೆ, ದೊಡ್ಡದೂ ಆಗುತ್ತಿದೆ. ನಿನ್ನಿಂದಲೂ ಅದು ಸಾಧ್ಯವಿಲ್ಲ, ಆದ್ದರಿಂದ ನೀನು ನಿನ್ನ ಲೂಟ್‌ನಲ್ಲಿ ನನಗೊಂದು ಶೋಕದ ಸಂಗೀತವನ್ನು ಹೊರಡಿಸು" ಎಂದ ರಾಜ.

"ಮಹಾಪ್ರಭು, ಚಂದಿರ ಎಷ್ಟು ದೂರವಿದೆಯಂತೆ ಮತ್ತು ಎಂದು ದೊಡ್ಡದಾಗಿದೆಯಂತೆ?" ಎಂದು ನಗೆಗಾರ ಕೇಳಿದ.

"ಪ್ರಧಾನಮಂತ್ರಿಯ ಪ್ರಕಾರ 35,000 ಮೈಲಿ ದೂರ ಮತ್ತು ರಾಜಕುಮಾರಿ ಲೆನೋರ್‌ಳ ಕೊಠಡಿಗಿಂತ ಎರಡು ಪಟ್ಟು ದೊಡ್ಡದು. ಮಂತ್ರವಾದಿಯ ಪ್ರಕಾರ 150,000 ಮೈಲಿ ದೂರ ಮತ್ತು ಈ ಅರಮನೆಗಿಂತ ಎರಡು ಪಟ್ಟು ದೊಡ್ಡದು. ಗಣಿತಶಾಸ್ತ್ರಜ್ಞನ ಪ್ರಕಾರ 300,000 ಮೈಲಿ ದೂರ ಮತ್ತು ನಮ್ಮ ಸಾಮ್ರಾಜ್ಯದ ಅರ್ಧ ಭಾಗದಷ್ಟು ಗಾತ್ರದ್ದು" ಎಂದು ರಾಜ ಉತ್ತರಿಸಿದ.

"ಅವರೆಲ್ಲ ಮೇಧಾವಿಗಳಾದ್ದರಿಂದ ಅವರು ಸರಿಯಾಗೇ ಹೇಳಿರಬಹುದು. ಆದರೆ ಅವರು ಹೇಳಿರುವಂತೆ ಚಂದಿರ ಅವರವರ ಅನಿಸಿಕೆಗಳಷ್ಟು ದೂರದಲ್ಲಿದ್ದಾನೆ ಮತ್ತು ದೊಡ್ಡದಾಗಿದ್ದಾನೆ. ಆದ್ದರಿಂದ ರಾಜಕುಮಾರಿ ಲೆನೋರ್ ಪ್ರಕಾರ ಚಂದಿರ ಎಷ್ಟು ದೂರದಲ್ಲಿದ್ದಾನೆ ಮತ್ತು ಎಷ್ಟು ದೊಡ್ಡದಾಗಿದ್ದಾನೆ ಎಂದು ಅರಿತುಕೊಳ್ಳುವುದೂ ಸೂಕ್ತವಲ್ಲವೇ?" ಎಂದ ನಗೆಗಾರ.

"ಹೌದಲ್ಲಾ, ನಾನು ಅದರ ಬಗ್ಗೆ ಯೋಚಿಸಿಯೇ ಇರಲಿಲ್ಲ" ಎಂದ ರಾಜ.

"ಮಹಾಪ್ರಭು, ನಾನೇ ಅವಳನ್ನು ಕೇಳುತ್ತೇನೆ" ಎಂದ ನಗೆಗಾರ ರಾಜಕುಮಾರಿಯ ಕೊಠಡಿಯನ್ನು ಪ್ರವೇಶಿಸಿದ.

ಆಗಿನ್ನೂ ಎಚ್ಚರವಾಗಿದ್ದ ರಾಜಕುಮಾರಿಗೆ ಆಸ್ಥಾನದ ನಗೆಗಾರನನ್ನು ಕಂಡು ಸಂತೋಷವಾದರೂ "ನನಗೆ ಚಂದಿರನನ್ನು ತಂದೆಯಾ?" ಎಂದು ಕೇಳಿದಳು.

"ಇನ್ನೂ ತಂದಿಲ್ಲ, ಆದರೆ ಸದ್ಯದಲ್ಲೇ ತರುತ್ತೇನೆ. ಆದರೆ ರಾಜಕುಮಾರಿ, ಚಂದಿರ ಎಷ್ಟು ದೊಡ್ಡದಾಗಿದ್ದಾನೆ ಅಂತ ನಿನಗೆ ಗೊತ್ತಾ?" ಎಂದು ಕೇಳಿದ.

"ಗೊತ್ತು, ಆತ ನನ್ನ ಹೆಬ್ಬೆರಳಿನ ಉಗುರಿಗಿಂತಲೂ ಚಿಕ್ಕದಾಗಿದ್ದಾನೆ. ಯಾಕೆಂದರೆ ನಾನು ನನ್ನ ಕೈಯನ್ನು ಚಾಚಿದರೆ ಆತ ನನ್ನ ಹೆಬ್ಬೆರಳಿನ ಹಿಂದೆ ಮರೆಯಾಗುತ್ತಾನೆ" ಎಂದಳು ಲೆನೋರ್.

"ಆತ ಎಷ್ಟು ದೂರ ಇದ್ದಾನೆ?" ಕೇಳಿದ ನಗೆಗಾರ.

"ನನ್ನ ಕಿಟಕಿಯ ಹೊರಗಿರುವ ದೊಡ್ಡ ಮರಕ್ಕಿಂತ ಹೆಚ್ಚಿನ ಎತ್ತರದಲ್ಲಿ, ಯಾಕೆಂದರೆ ಒಮ್ಮೊಮ್ಮೆ ಆತ ಆ ಮರದ ಕೊಂಬೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ" ಎಂದು ರಾಜಕುಮಾರಿ ಉತ್ತರಿಸಿದಳು.

"ಅಂದಹಾಗೆ, ಚಂದಿರನನ್ನು ಯಾವುದರಿಂದ ಮಾಡಲಾಗಿದೆ?" ಎಂಬ ಕೊನೆ ಪ್ರಶ್ನೆಯನ್ನು ನಗೆಗಾರ ಕೇಳಿದ.

"ನೀನೊಬ್ಬ ಪೆದ್ದು. ಅದನ್ನ ಬಂಗಾರದಿಂದ ಮಾಡಲಾಗಿದೆ ಅಂತಾನೂ ಗೊತ್ತಿಲ್ವಾ?" ಎಂದಳು ರಾಜಕುಮಾರಿ.

ರಾಜಕುಮಾರಿಯ ಕೊಠಡಿಯಿಂದ ಹೊರನಡೆದ ನಗೆಗಾರ ಕೂಡಲೇ ಅಕ್ಕಸಾಲಿಗನನ್ನು ಕಂಡು ಲೆನೋರ್‌ಳ ಹೆಬ್ಬೆರಳಿನ ಉಗುರಿಗಿಂತಲೂ ಚಿಕ್ಕದಾದ ಚಿನ್ನದ ಗೋಲಾಕಾರದ ಚೆಂಡನ್ನು ತಯಾರಿಸಿ ಕೊರಳಿನ ಸುತ್ತ ಹಾಕಿಕೊಳ್ಳುವಂತೆ ಅದರೊಂದಿಗೆ ಒಂದು ಚಿನ್ನದ ಚೈನನ್ನು ಮಾಡುವಂತೆ ಹೇಳಿದ.

ಆತ ಹೇಳಿದಂತೆ ಮಾಡಿದ ಅಕ್ಕಸಾಲಿಗ "ನಾನು ಇದೆಂತಹದ್ದನ್ನು ತಯಾರಿಸಿದ್ದೇನೆ?" ಎಂದು ಕೇಳಿದ.

"ನೀನು ಚಂದಿರನನ್ನೇ ಸೃಷ್ಟಿಸಿದ್ದೀಯಾ" ಎಂದ ನಗೆಗಾರ.

"ಆದರೆ ಚಂದಿರ 500,000 ಮೈಲಿ ದೂರ ಇದ್ದಾನೆ ಮತ್ತು ಕಂಚಿನಿಂದ ಮಾಡಲ್ಪಟ್ಟಿದ್ದಾನೆ" ಎಂದ ಅಕ್ಕಸಾಲಿಗ.

"ಅದು ನಿನ್ನ ಅಭಿಪ್ರಾಯ" ಎಂದು ಉತ್ತರಿಸಿದ ನಗೆಗಾರ ಚಂದಿರನನ್ನು ರಾಜಕುಮಾರಿಗೆ ಕೊಟ್ಟಾಗ ಆಕೆ ಎಷ್ಟು ಸಂತೋಷಗೊಂಡಳೆಂದರೆ ಮಾರನೆ ದಿನವೇ ಹಾಸಿಗೆಯಿಂದ ಎದ್ದು ಉದ್ಯಾನದಲ್ಲಿ ಆಟವಾಡತೊಡಗಿದಳು.

ಆದರೆ ರಾಜನ ಚಿಂತೆ ಮಾತ್ರ ಅಂತ್ಯಗೊಂಡಿರಲಿಲ್ಲ, ರಾತ್ರಿಯಾಗುತ್ತಿದ್ದಂತೆ ಆಗಸದಲ್ಲಿ ಚಂದ್ರ ಹೊಳೆಯಲಾರಂಭಿಸುತ್ತಾನೆ; ಅದನ್ನು ತನ್ನ ಮಗಳು ನೋಡುತ್ತಾಳೆ; ಆಗ ತನ್ನ ಬಳಿ ಇರುವ ಚಂದಿರ ನಿಜವಾದ ಚಂದಿರವಲ್ಲ ಎಂದು ಆಕೆಗೆ ಗೊತ್ತಾಗುತ್ತದೆ ಎಂದೆಲ್ಲ ರಾಜ ಯೋಚಿಸಲಾರಂಭಿಸಿದ.

ಆಗ ಮತ್ತೆ ಪ್ರಧಾನಮಂತ್ರಿ ತನ್ನ ಮುಂದೆ ಹಾಜರಾಗುವಂತೆ ಆದೇಶಿಸಿದ ರಾಜ "ನನ್ನ ಮಗಳು ಆಕಾಶದಲ್ಲಿರುವ ಚಂದಿರನನ್ನು ನೋಡದಂತೆ ಮಾಡುವುದು ಹೇಗೆ? ಯೋಚಿಸಿ ಸಲಹೆ ನೀಡು" ಎಂದು ಹೇಳಿದ. ಸ್ವಲ್ಪ ಹೊತ್ತು ಚಿಂತಿಸಿದ ಪ್ರಧಾನಮಂತ್ರಿ "ಹ್ಞಾ ಆಕೆಗೆ ದಟ್ಟವಾದ ಕಪ್ಪು ಕನ್ನಡಕಗಳನ್ನು ಹಾಕಿದರೆ?" ಎಂಬ ಸಲಹೆಯನ್ನು ನೀಡಿದ.

"ಛೆ! ಅಂತಹ ಕನ್ನಡಕಗಳನ್ನು ತೊಟ್ಟು ಆಕೆ ಯಾವುದಕ್ಕಾದರೂ ಎಡವಿ ಬೀಳಬಹುದು" ಎಂದು



"ಅವರೆಲ್ಲ ಮೇಧಾವಿಗಳಾದ್ದರಿಂದ ಅವರು ಸರಿಯಾಗೇ ಹೇಳಿರಬಹುದು. ಆದರೆ ಅವರು ಹೇಳಿರುವಂತೆ ಚಂದಿರ ಅವರವರ ಅನಿಸಿಕೆಗಳಷ್ಟು ದೂರದಲ್ಲಿದ್ದಾನೆ ಮತ್ತು ದೊಡ್ಡದಾಗಿದ್ದಾನೆ. ಆದ್ದರಿಂದ ರಾಜಕುಮಾರಿ ಲೆನೋರ್ ಪ್ರಕಾರ ಚಂದಿರ ಎಷ್ಟು ದೂರದಲ್ಲಿದ್ದಾನೆ ಮತ್ತು ಎಷ್ಟು ದೊಡ್ಡದಾಗಿದ್ದಾನೆ ಎಂದು ಅರಿತುಕೊಳ್ಳುವುದೂ ಸೂಕ್ತವಲ್ಲವೇ?"

ಯನ್ನು ಸಾಗುತಾಗ ಮಂತ್ರವಾದಿಗೆ ಬರಹೇಳಿದ.

ಮಾರಿಯಿಂದ ಚಂದ್ರನನ್ನು ಬಚ್ಚಿಡುವುದು ಹೇಗೆ?" ಎಂದು ನ್ನು ರಾಜ ಪ್ರಶ್ನಿಸಿದ. ತನ್ನ ಕೈಗಳ ಮೇಲೆ ನಿಂತು, ನಿಂತು. ಕೊನೆಗೆ ಕಾಲುಗಳ ಮೇಲೆ ನಿಂತು ಯೋಚಿಸಿದ "ಅರಮನೆಯ ಸುತ್ತ ಸರ್ಕಸ್ ಟೆಂಟಿನಂತೆ ದಪ್ಪನೆಯ ತೂಗು ಹಾಕಿದರೆ ಹೇಗಿರುತ್ತೆ? ಆ ಬಟ್ಟೆಯ ಮೂಲಕ ಚಂದಿರ ಕಾಣಿಸುವುದಿಲ್ಲ!" ಎಂದ.

ಕೇಳಿ ಕೋಪಗೊಂಡ ರಾಜ ಥೂ, ಥೈ, ಥಕ ದೀಮ್ ದಾಡಿ "ಅಂತಹ ಟೆಂಟ್‌ನಿಂದಾಗಿ ಗಾಳಿ ಆಡುವುದಿಲ್ಲ, ಮಾರಿಗೆ ಉಸಿರು ಗಟ್ಟಿದಂತಾಗಿ ಆಕೆ ಕಾಯಿಲೆ ಬೀಳುತ್ತಾಳೆ" ಗಿದ. ಮಂತ್ರವಾದಿಯನ್ನು ಒದ್ದೋಡಿಸಿ, ಗಣಿತ ಶಾಸ್ತ್ರಜ್ಞನನ್ನು

ತ್ನೆಯನ್ನು ಆತನನ್ನು ಕೇಳಿದಾಗ ಗಣಿತಶಾಸ್ತ್ರಜ್ಞ ಮೊದಲು ವಲ್ಲಿ ಸುತ್ತಾಡಿದ. ಆಮೇಲೆ ಚೌಕಾಕಾರದಲ್ಲಿ ನಡೆದಾಡಿದ. ನಿಂತ "ಹೊಳೆಯಿತು! ಪ್ರತಿರಾತ್ರಿ ಆಕಾಶದಲ್ಲಿ ಬಣ್ಣಬಣ್ಣದ ಹಾರಿಸುವ. ಅವುಗಳ ಬೆಳಕಿನಲ್ಲಿ ರಾಜಕುಮಾರಿಗೆ ಸುವುದಿಲ್ಲ" ಎಂದ.

ಕೇಳಿದ ರಾಜ ಕೋಪದಿಂದ ಮೇಲೆ, ಕೆಳಗೆ ಹಾರಾಡಿ ಸದ್ದಿನಿಂದಾಗಿ ಆಕೆಗೆ ನಿದ್ದೆ ಬರುವುದಿಲ್ಲ, ನಿದ್ದೆ ಇಲ್ಲದೆ ರುತ್ತದೆ" ಎಂದು ಕಿರುಚಾಡಿದ.

ತ್ತಿಗೆ ಹೊರಗಡೆ ಕತ್ತಲು ಆವರಿಸುತ್ತಾ ಚಂದಿರ ಆಸ್ಪಷ್ಟವಾಗಿ ಮವುದು ರಾಜನ ಗಮನಕ್ಕೆ ಬಂತು. ಕೂಡಲೆ ತನ್ನ ಗಾರನಿಗೆ ಹೇಳಿ ಕಳುಹಿಸಿದ. ಕುಣಿದು, ಕುಣಿದು ಬಂದ ಜನ ಪಾದಗಳ ಬಳಿ ಕೂತು "ಮಹಾಪ್ರಭು, ನಿಮ್ಮ ?" ಎಂದು ಕೇಳಿದ.

ರವಿಗೆ ಬರಲು ಯಾರಿಂದಲೂ ಸಾಧ್ಯವಿಲ್ಲ, ಆಕಾಶದಲ್ಲಿ ಬೆಳಗಲಿದ್ದಾನೆ. ಆತನನ್ನು ನೋಡಿದ ನನ್ನ ಮಗಳಿಗೆ ತನ್ನ ರುವುದು ನಿಜವಾದ ಚಂದ್ರನಲ್ಲ ಎಂದು ಗೊತ್ತಾಗುತ್ತದೆ. ತ್ತೆ ಹಾಸಿಗೆ ಹಿಡಿಯುತ್ತಾಳೆ. ನನ್ನ ದುಃಖವನ್ನು ಮರೆಸುವ ನಿನ್ನ ಲೂಟ್‌ನಿಂದ ನುಡಿಸು" ಎಂದ ರಾಜ.

ಕತೆ

ಇಂಗ್ಲಿಷ್ ಮೂಲ: **ಜೇಮ್ಸ್ ಥರ್ಬರ್**
ಕನ್ನಡಕ್ಕೆ: **ಗೌರಿ ಲಂಕೇಶ್**

ಅನ್ನು ನುಡಿಸಲಾರಂಭಿಸಿದ ನಗೆಗಾರ "ನಿಮ್ಮ ಆಸ್ಥಾನದ ಈ ಸಮಸ್ಯೆ ಬಗ್ಗೆ ಏನೆನ್ನುತ್ತಾರೆ?" ಎಂದು ಕೇಳಿದ.

ಕುಮಾರಿಯ ಆರೋಗ್ಯದ ಮೇಲೆ ಪರಿಣಾಮ ಬೀರದಂತಹ ದು ಸಲಹೆಯೂ ಅವರಲ್ಲಿಲ್ಲ" ಎಂದ ರಾಜ.

ನುಡಿಸುವುದನ್ನು ಮುಂದುವರೆಸಿದ ನಗೆಗಾರ "ಅವರೆಲ್ಲ ಸು. ಅವರಿಂದ ಚಂದಿರನನ್ನು ಮುಚ್ಚಿಡಲಾಗಲಿಲ್ಲವೆಂದರೆ ಯಾರಿಂದಲೂ ಮುಚ್ಚಿಡಲಾಗುವುದಿಲ್ಲ" ಎಂದ.

ರು ಬಿಟ್ಟ ರಾಜ ಕಿಟಕಿಯಿಂದ ಹೊರ ನೋಡಿ "ಚಂದಿರ ಗುತ್ತಿದ್ದಾನೆ. ತನ್ನ ಕತ್ತಿನ ಸುತ್ತ ಇರುವ ಚಂದಿರ ಮತ್ತೆ ಬೆಳಗುತ್ತಿರುವುದನ್ನು ಆಕೆಗೆ ವಿವರಿಸುವುದು ಹೇಗೆ?" ಎಂದ.

ಮೇಧಾವಿಗಳೆಲ್ಲ ಚಂದಿರ ತುಂಬಾ ದೂರವಿದ್ದಾನೆ, ತುಂಬಾ ದ್ದಾನೆ ಎಂದಾಗ ಆತನನ್ನು ಕರೆತರುವುದು ಹೇಗೆ ಎಂದು ರಾಜಕುಮಾರಿ. ಅಂದರೆ ಆಕೆ ನಿಮ್ಮ ಆಸ್ಥಾನದ ತ ಬುದ್ಧಿವಂತೆ. ಆದ್ದರಿಂದ ಈ ಪ್ರಶ್ನೆಗೂ ಅವಳಿಂದಲೇ ಯುತ್ತೇನೆ" ಎಂದು ನಗೆಗಾರ ರಾಜಕುಮಾರಿ ಕೊಠಡಿಯನ್ನು

ಂಚದ ಮೇಲೆ ಮಲಗಿದ್ದ ರಾಜಕುಮಾರಿ ಎಚ್ಚರವಾಗಿದ್ದಳಲ್ಲದೆ, ದ ಚಂದಿರನನ್ನು ನೋಡುತ್ತಿದ್ದಳು. ಆಕೆಯ ಕೈಯಲ್ಲಿ ನಗೆಗಾರ ಟ್ಟಿದ್ದ ಚಿನ್ನದ ಚಂದಿರ ಮಿನುಗುತ್ತಿತ್ತು, ದುಃಖದ ಮುಖ ಕ್ಕರಿಡುತ್ತಾ ಆಕೆಯ ಹತ್ತಿರ ಬಂದ ನಗೆಗಾರ "ರಾಜಕುಮಾರಿ ಹೇಳು, ನಿನ್ನ ಕೊರಳಿನ ಸುತ್ತ ಇರುವ ಚಂದಿರ ಹೇಗೆ ಶದಲ್ಲಿ ಮೂಡಿದ್ದಾನೆ?" ಎಂದು ಪ್ರಶ್ನಿಸಿದ.

ನ್ನು ನೋಡಿ ನಗಲಾರಂಭಿಸಿದ ರಾಜಕುಮಾರಿ, "ಏ ಪೆದ್ದು ಲ್ಲೊಂದು ಉದುರಿದಾಗ ಅದರ ಜಾಗದಲ್ಲಿ ಹೊಸ ಹಲ್ಲೊಂದು " ಎಂದಳು.

ದಲ್ವಾ? ಜಿಂಕೆ ಕಾಡಿನಲ್ಲಿ ತನ್ನ ಕೊಂಬನ್ನು ಕಳೆದುಕೊಂಡರೆ ಗದಲ್ಲಿ ಮತ್ತೊಂದು ಕೊಂಬು ಮೂಡುತ್ತಲ್ವಾ?" ಎಂದ. ವಾಗಿ ಹೇಳಿದೆ. ನಮ್ಮ ಅರಮನೆಯ ಮಾಲಿ ಗಿಡಗಳಲ್ಲಿನ ತ್ತರೂ ಅದೇ ಜಾಗದಲ್ಲಿ ಹೊಸ ಹೂಗಳು ಅರಳುವಂತೆ"

ದಿನ ಪ್ರತಿ ದಿನ ಬೆಳಕು ಹರಿಯುವಂತೆ" ಎಂದ ನಗೆಗಾರ. ದೇ ಚಂದಿರ ಕೂಡ" ಎಂದ ರಾಜಕುಮಾರಿ "ಎಲ್ಲವೂ ತ್ತೆ, ಹುಟ್ಟಿ ಬರುತ್ತವೆ ಅನ್ಸುತ್ತೆ..." ಎಂದು ಹೇಳಿ ದಲ್ಲಿ ನಿದ್ದೆಗೆ ಜಾರಿದ್ದಳು.

ನಗೆ ಬೀರಿದ ನಗೆಗಾರ ಕಿಟಕಿಯಿಂದ ಚಂದಿರನತ್ತ ನೋಡಿದ. ದ ಕಣ್ಣು ಮಿಟುಕಿಸಿದಂತೆನಿಸಿ ಆತ ಕೂಡ ಚಂದಿರನತ್ತ

ನಂದದ ಪ್ರಶ್ನೆಗಳು

'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಪುಸ್ತಕದ ಬಗ್ಗೆ ಪ್ರಕಟವಾದ ಜನವರಿ ೩೧ರ ನನ್ನ ವಿಮರ್ಶೆಗೆ ಫಣಿರಾಜರ ಎರಡು ಪ್ರತಿಕ್ರಿಯೆಗಳು ಇದುವರೆಗೆ ಪ್ರಕಟವಾಗಿವೆ. ಈ ಪ್ರತಿಕ್ರಿಯೆ-ಮರುಪ್ರತಿಕ್ರಿಯೆಗಳ ಸರಣಿ ದ್ರೌಪದಿಯ ಸೀರೆಯಂತೆ ಸೆಳೆದಷ್ಟೂ ಬೆಳೆದೀತಾದರೂ ಕೊಟ್ಟಕೊನೆಯದಾಗಿ (ನನ್ನ ಮಟ್ಟಿಗೆ) ಕೆಲವು ಮಾತುಗಳನ್ನು ಹೇಳಲೇಬೇಕು ಅನ್ನಿಸಿದ್ದರಿಂದ ಓದುಗರಲ್ಲಿ ಮತ್ತು ಫಣಿರಾಜರಲ್ಲಿ ಕ್ಷಮೆ ಯಾಚಿಸುತ್ತಲೇ ಈ ಮರು-ಮರು-ಪ್ರತಿಕ್ರಿಯೆ.

ಮೊದಲನೆಯದಾಗಿ ನನ್ನ ಪದ ಬಳಕೆಯ ಬಗೆಗಿನ ಫಣಿರಾಜರ ಅನುಮಾನಗಳ ಬಗ್ಗೆ ಒಂದು ಮಾತು. "ಭಳಾರೆ ವಿಚಿತ್ರಂ" ಭಾಗ ಒಂದರಲ್ಲಿ ನಾನು ಬಳಸಿದ "ಸುಲಭ" ಎಂಬ ಪದದ ಬಗ್ಗೆ ಅನುಮಾನವಿದ್ದಂತೆ ಭಾಗ ಎರಡರಲ್ಲೂ ಒಂದು ಪದದ ಬಳಕೆಯ ಧರ್ಮ ಸೂಕ್ಷ್ಮದ ಬಗ್ಗೆ ಫಣಿರಾಜರು ಬರೆಯುತ್ತಾರೆ. ನಾನು ಅವರು "ಗಮನಾರ್ಹವಾಗಿವೆ" ಎಂದು ಹೇಳಿದ್ದನ್ನು "ಒಪ್ಪಿ"ಕೊಂಡುಬಿಡುವುದು ಎಂದು ನಾನು ತಪ್ಪಾಗಿ ಅರ್ಥೈಸಿದ್ದೇನೆ ಎನ್ನುತ್ತಾರೆ ("'ಶ್ರೀಯವರ ವಿಮರ್ಶಾತ್ಮಕ ಅನುಮಾನಗಳು 'ಗಮನಾರ್ಹವಾಗಿವೆ' ಎಂದು ಹೇಳಿದ್ದೇನೆ ಹೊರತಾಗಿ 'ಒಪ್ಪಿ'ಕೊಂಡಿದ್ದೇನೆ ಎಂದಲ್ಲ.") "ಒಪ್ಪು" ಅನ್ನುವ ಪದ ಫಣಿರಾಜರಿಗೆ ಒಪ್ಪಿಗೆ ಇಲ್ಲದಿದ್ದರೆ ಸರಿ. ಆದರೆ ಅವರೇ "ಭಳಾರೆ ವಿಚಿತ್ರಂ" ಭಾಗ ಒಂದರಲ್ಲಿ "ಈ ಪುಸ್ತಕಕ್ಕೆ ನಾನೆ ಅನುವಾದಿಸಿರುವ ಕೆಲವು ಬರಹಗಳ ಬಗ್ಗೆ ನನ್ನಲ್ಲೂ ಈ ನಮೂನೆಯ ವಿಮರ್ಶಾತ್ಮಕ ಅನುಮಾನಗಳಿವೆ" ಎಂದು ಹೇಳಿರುವ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳಿದ್ದು. ಈ "ವಿಮರ್ಶಾತ್ಮಕ ಅನುಮಾನ"ಗಳು ಏನು ಎಂಬುದರ ಬಗ್ಗೆ ನನಗೆ ನಿಜಕ್ಕೂ ಕುತೂಹಲವಿದೆ.

ಇನ್ನು ನಂದಿಯವರ ವಾದವನ್ನು ಒಪ್ಪದವರ ಬಗ್ಗೆ ಫಣಿರಾಜರ ಅಭಿಪ್ರಾಯದ ವಿಷಯ. ತಮ್ಮ ಎರಡನೆಯ ಪ್ರತಿಕ್ರಿಯೆಯಲ್ಲಿ ಅವರು ನಾನು ಉದ್ಧರಿಸಿದ ಮೀರ ನಂದರ ಬಗ್ಗೆ ಫಣಿರಾಜರು ಹೀಗೆನ್ನುತ್ತಾರೆ: "ತನ್ನ ವೈಚಾರಿಕ ಕ್ರಮವೇ ಆಂಶಿಕವಾಗಿ ಶ್ರೇಷ್ಠವೆಂಬ ಕಟು ದಾರ್ಷ್ಟ್ಯ. ಅದನ್ನು ವಿರೋಧಿಸುವವರನ್ನು ಅಪರಾಧಿಗಳೆಂದು ಪರಿಗಣಿಸಿ ಅವರ ವಿರುದ್ಧ ಒಂದು ದೋಷಾರೋಪಣಾ ಪಟ್ಟಿ ತಯಾರಿಸುವುದು, ನಂತರ ಅವರ ವಿಚಾರಗಳನ್ನು ಕಟಕಟೆಯಲ್ಲಿ ನಿಲ್ಲಿಸಿ ತನಗೆ ಬೇಕಾದ ಉತ್ತರಗಳನ್ನು ಪಡೆಯುವ ಪಾಟಿಸವಾಲು ನಡೆಸುವುದು ಹಾಗು ಅಪರಾಧ ಸಾಬೀತಾಯಿತು ಎಂದು ತಾನೇ ಘೋಷಿಸುವ ಮೀರಾ ನಂದರ ವರಸೆ, ವೈಚಾರಿಕ ವಾಗ್ವಾದದ ಅತ್ಯಂತ ಕೆಟ್ಟ ಮಾದರಿ..." ಇತ್ಯಾದಿ.

ನಾನು ಮೀರಾನಂದರನ್ನು ಉದ್ಧರಿಸಿದ್ದು ನಂದಿಯವರ ಮತ್ತು ಅವರ ಜಾಡಿನ ವಸಾಹತೋತ್ತರ ನಿಲುವುಗಳನ್ನು ಒಪ್ಪದ ವಾದಸರಣಿಯ ಉದಾಹರಣೆಯಾಗಿಯೇ ಹೊರತು ಇವರು ಈ ರೀತಿ ಯೋಚನಾಕ್ರಮದ ಏಕಮೇವ ಪ್ರತಿನಿಧಿ ಎಂದೇನೂ ಅಲ್ಲ. ನಾನು ಉದ್ಧರಿಸಿದ "ಟ್ರೋಜನ್ ಕುದುರೆ"ಯ ಸಾಲು "ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು" ಪುಸ್ತಕದ ಮೂಲಕೃತಿಯ ಸಹಸಂಪಾದಕರಾದ ವಿನಯ್ ಲಾಲ್‌ರವರು ಮೀರಾನಂದಾರ "ಪ್ರೊಫೆಟ್ ಫೇಸಿಂಗ್ ಬ್ಯಾಕ್ವರ್ಡ್ಸ್" ಪುಸ್ತಕಕ್ಕೆ ಬರೆದ ಕಟು ವಿಮರ್ಶೆಗೆ ಪ್ರತ್ಯುತ್ತರವಾಗಿ ಬರೆದ ಲೇಖನದಿಂದ ಆಯ್ದದ್ದು. ನಾನು ಮೂಲದಲ್ಲಿ ಬರೆದದ್ದು 600 ಪದಗಳ ಪುಸ್ತಕ ವಿಮರ್ಶೆಯಾಗಿತ್ತೇ ಹೊರತು ಫಣಿರಾಜರು ಸೆಲೆಕ್ಟಿವ್ ಆಗಿ ಉಲ್ಲೇಖಿಸಿ ನಿರ್ಧರಿಸಿದಂತೆ ನಂದಿಯವರ ಮೇಲೆ ಹೂಡಿದ ಸಮರ ಆಗಿರಲಿಲ್ಲವಾದ್ದರಿಂದ ಇದಕ್ಕಿಂತ ಹೆಚ್ಚು ನನ್ನ ಜ್ಞಾನವನ್ನಾಗಲಿ ಅಜ್ಞಾನವನ್ನಾಗಲಿ ಸಾಬೀತುಗೊಳಿಸುವ ಅಗತ್ಯ ಇದೆ ಎನ್ನಿಸಿರಲೂ ಇಲ್ಲ. ಆದರೆ ಫಣಿರಾಜರು ತಮ್ಮ "ಭಳಾರೆ ವಿಚಿತ್ರಂ" ಭಾಗ ಒಂದು ಮತ್ತು ಎರಡರಲ್ಲಿ ನಂದಿಯವರ ವಾದಗಳನ್ನು ಒಪ್ಪದವರನ್ನು "ಎಸ್ ಎಮ್ ಎಸ್ ಕೊಚ್ಚಿ" ಹರಿಸುವ ಆರೆಸ್ಸೆಸ್ಸಿಗರೆಂದೋ ಇಲ್ಲದಿದ್ದರೆ ಆಧುನಿಕತೆಗೆ ಮಾರು ಹೋಗಿ "ವೈಚಾರಿಕ ದಾರಿದ್ರ್ಯ"ದಿಂದ ಬಳಲುವವರು ಎಂದೋ ತೀರ್ಮಾನಕ್ಕೆ ಬರುತ್ತಾರೆ. ಆದರೆ ನಂದಿ ಮತ್ತು ಅವರ ವಿಚಾರಗಳನ್ನು ಒಪ್ಪದವರ ನಡುವೆ ನಡೆದ ವಾಗ್ವಾದಗಳನ್ನು ಇಷ್ಟು ಸರಳೀಕರಿಸಿ ತಳ್ಳಿ ಹಾಕುವುದಾದರೆ ಸರಿಯೆ? ರಾಧಿಕ ದೇಸಾಯಿಯವರ ಇಪಿಡಬ್ಲ್ಯು ನಲ್ಲಿ ಪ್ರಕಟವಾದ "ಕಲ್ಚರಲಿಸಂ ಎಂಡ್ ದ ಕಾಂಟೆಂಪರರಿ ರೈಟ್" ಲೇಖನ, ಔಟ್‌ಲುಕ್ ಪತ್ರಿಕೆಯಲ್ಲಿ ಉತ್ತರ-ಪ್ರತ್ಯುತ್ತರಗಳ ಸರಣಿಯಲ್ಲಿ ಪ್ರಕಟವಾದ ಕುಲ್ದೀಪ್ ನಯ್ಯರ್ ಅವರ "ಅಭ್‌ಹೋರ್ ಸಿಂಗ್ಯುಲಾರಿಟಿ", (ನಡುವೆ ಆಶೀಶ್ ನಂದಿಯವರ "ಎ ಬಲಿಯನ್ ಗಾಂಧೀಸ್" ಎಂಬ ಪ್ರತಿಕ್ರಿಯೆ), ನಂತರದ ಸಂಜಯ್ ಸುಬ್ರಹ್ಮಣ್ಯಮ್ ಅವರ "ಅವರ್ ಓನ್ಲಿ ಕಲೋನಿಯಲ್ ಥಿಂಕರ್" ಲೇಖನ ಹೀಗೆ ಈ ರೀತಿಯ ಎಲ್ಲ ವಾದಗಳೂ ನಂದಿಯವರನ್ನು "ಓದಿ ಚರ್ಚಿಸುವ ಗೋಜಿಗೆ ಹೋಗದ" ಮಾದರಿಗಳೆ?

"ಆಶೀಶ್ ನಂದಿಯಂತಹ ಚಿಂತಕರ ವಿಚಾರಗಳ ವಿಮರ್ಶೆ ಮಾಡುವಾಗ ತೋರಬೇಕಾದ ಎಚ್ಚರ ಹಾಗು ವೈಚಾರಿಕ ಸಂಯಮವನ್ನು ಕಡೆಗಾಣಿಸಿದರೆ ಆಗುವ ನಷ್ಟದ ಬಗ್ಗೆ ಎಡಪಂಥೀಯರು ಇಂದಿಗೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ" ಎನ್ನುತ್ತಾರೆ ಫಣಿರಾಜ್. ಈ ರೀತಿಯ ಸಂಯಮ ನಂದಿಯವರನ್ನು ಒಪ್ಪದವರ ವಿಚಾರಧಾರೆಯ ಬಗ್ಗೆಯೂ ಅಗತ್ಯವೇ ಇದ್ದೀತು. ಪರಂಪರೆಯ ಜ್ಞಾನ ಭಂಡಾರಗಳನ್ನು ಸಾರಾಸಗಟಾಗಿ ಧಾರ್ಷ್ಟ್ಯದಿಂದ ನಿರಾಕರಿಸಿದ ಆಧುನಿಕತೆಯ ಜ್ಞಾನಸಂಹಿತೆಯನ್ನು (ಸಕಾರಣವಾಗಿಯೇ) ವಿಮರ್ಶಿಸುವಾಗ ಆಧುನಿಕತೆಯ ಜ್ಞಾನಸಂಚಯದ ಪ್ರಕ್ರಿಯೆಯೇ ಬೇರು ರಹಿತವಾಗಿದೆ ಎಂದು ನಿರಾಕರಿಸುವ ಮತ್ತು ಪರಂಪರೆಯನ್ನು ರೊಮ್ಯಾಂಟಿಸೈಸ್‌ಗೊಳಿಸುವ ಆತುರ ನಮ್ಮಲ್ಲಿ ಢಾಳಾಗಿ ಕಾಣುವ ಬಗ್ಗೆಯೂ ತಲೆಕೆಡಿಸಿಕೊಳ್ಳುವ ಅಗತ್ಯ ಇದೆ


ಇನ್ನು ಆಧುನಿಕ ಶಿಕ್ಷಣದ ಮಾತು. ಫಣಿರಾಜರು "ಆಧುನಿಕ ಶಿಕ್ಷಣದ ಕುರಿತಾಗಿ ವಸಾಹತುಶಾಹಿ ವಿರೋಧಿ ಹೋರಾಟದ ಪರಿಪಕ್ವತೆಯ ಕಾಲಘಟ್ಟದಲ್ಲಿ ಫುಲೆ-ಅಂಬೇಡ್ಕರರು ಪ್ರಕಟಿಸಿದ ವಿಚಾರಗಳಿಗೆ ಇದ್ದ ಪ್ರಖರ ಕಾರ್ಯಸಾಧ್ಯತೆಗಳು, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಧಿಕಾರಸ್ಥ ಜಾತ್ಯತೀತ ವರಸೆಗಳಿಂದ ಮೊಂಡಾಗುತ್ತಿರುವುದನ್ನೂ ದಲಿತ ಚಳವಳಿಗಳೇ ಚರ್ಚಿಸುತ್ತಿವೆ" ಎನ್ನುತ್ತಾರೆ. ಸರಿಯೇ. ಆದರೆ ಇಲ್ಲಿ ಎದ್ದಿರುವ ಬಹಳಷ್ಟು ವಾದವಿವಾದಗಳು ಆಧುನಿಕ ಶಿಕ್ಷಣವನ್ನು ನಿರಾಕರಿಸುವುದಕ್ಕಿಂತಲೂ ಹೆಚ್ಚಾಗಿ ಈ ಶಿಕ್ಷಣಕ್ಕೆ ವರ್ಗಗಳ ನಂತರವೂ ಆಕ್ಸೆಸ್ ಇಲ್ಲದೆ ಹೋಗಿರುವುದರ ಬಗ್ಗೆಯೇ ಹೆಚ್ಚಾಗಿ ನಡೆದಿದೆ.

ಉದಾಹರಣೆಯಾಗಿ ಕರ್ನಾಟಕದ ಸಂದರ್ಭದಲ್ಲಿ ತೀರಾ ಇತ್ತೀಚಿಗೆ ಒಂದನೆ ತರಗತಿಯಿಂದ ಇಂಗ್ಲಿಷ್ ಭಾಷೆ ಕಲಿಸುವುದರ ಪರ ವಿರೋಧ ನಡೆದ ಚರ್ಚೆಗಳನ್ನು ನೋಡಬಹುದು. ಈ ವಾದದಲ್ಲಿ ದಲಿತ ಚಳವಳಿಯಿಂದ ಬಂದ ಬಹುತೇಕ ದನಿಗಳು ಸ್ವಾಗತಿಸಿದವು. ದಲಿತ/ದಲಿತ ಚಳವಳಿಯಿಂದ ಬಂದ ವಿರೋಧದ ದನಿಗಳು ಈ ಸಂದರ್ಭದಲ್ಲಿ ಕ್ಷೀಣವಾಗಿದ್ದವು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ದಲಿತ ಕವಿ ಸಿದ್ದಲಿಂಗಯ್ಯನವರೂ ಇಂಗ್ಲಿಷ್‌ಅನ್ನು ಒಂದು ಭಾಷೆಯನ್ನಾಗಿ ಕಲಿಸುವುದನ್ನು ವಿರೋಧಿಸಲಿಲ್ಲ. ವಿರೋಧಿಸಿದ ಕನ್ನಡ ಸಾಹಿತ್ಯ ಪರಿಷತ್ ಮತ್ತು ಅದರ ಅಧ್ಯಕ್ಷ ಚಂಪಾ "ದಲಿತ ವಿರೋಧಿ", "ಆಧುನಿಕತೆಯ ವಿರೋಧಿ" ಎಂಬ ನಿಂದನೆಗೆ ಒಳಗಾಗಬೇಕಾಯಿತು. ಸರ್ಕಾರಕ್ಕೆ ಇಂಗ್ಲಿಷ್ ಬಗ್ಗೆ ಇರುವ ಆಸ್ಥೆಯ ಮೂಲ ಒಟ್ಟು ಶಿಕ್ಷಣಕ್ರಮವನ್ನು ಜಾಗತಿಕ ಮಾರುಕಟ್ಟೆಗೆ ಪೂರಕ ಮಾಡುವುದೇ ಇರಬಹುದು. "ಆಧುನಿಕತೆ" ಒಂದು ಏಕಮುಖ ವ್ಯವಸ್ಥೆಯಲ್ಲ ಮತ್ತು ಇದರ ಟಿಸಿಲುಗಳು ಸಮಾಜವಾದಿ ಸಾಧ್ಯತೆಗಳಿಂದ ಹಿಡಿದು ಬಂಡವಾಳಶಾಹಿ ವ್ಯವಸ್ಥೆಯವರೆಗೂ ಹಬ್ಬುತ್ತವೆ ಎಂಬುದೂ ಹೌದು. ಆದರೆ ಈ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯನ್ನು ಆಧುನಿಕ ಶಿಕ್ಷಣ, ಆಧುನಿಕತೆ, ಉದ್ಯೋಗದ ಮಾರುಕಟ್ಟೆಯ ರಹದಾರಿಯಾಗಿ ಬಹುತೇಕ ದಲಿತ ಚಳವಳಿಗಳು ಕಂಡವು. ಚಂದ್ರಭಾನ್ ಪ್ರಸಾದರಂತಹ ದಲಿತ ಚಿಂತಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಮೆಕಾಲೆ ತಿರಸ್ಕಾರ ಯೋಗ್ಯರೆ?" (ಸಂವಾದ, ಮಾರ್ಚ್ ಸಂಚಿಕೆ) ಎಂಬ ಮೂಲಭೂತ ಪ್ರಶ್ನೆಯನ್ನೂ ಎತ್ತುತ್ತಾರೆ. ಈ ವಾದವನ್ನು ಒಪ್ಪುವುದು ಬಿಡುವುದು ಬೇರೆ ಮಾತು. ಆದರೆ ಈಗಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಈ ಮೇಲೆ ಹೇಳಿದ ರಹದಾರಿ ಢಾಳಾಗಿ ತೆರೆದಿರುವುದು ಮೇಲ್‌ಸ್ತರದ, ಮೇಲ್ಜಾತಿಯ ಮಕ್ಕಳಿಗೆ ಮಾತ್ರ. ಈ ವ್ಯವಸ್ಥೆ ಅನುಕರಣೀಯ ಯೋಗ್ಯವೇ ಅಲ್ಲವೆ ಎಂಬುದೂ ಚರ್ಚಿಸಬೇಕಾದ, ಚರ್ಚಿತವಾದ ಪ್ರಶ್ನೆಯೇ. ಆದರೆ ಈ ಹಿನ್ನೆಲೆಯನ್ನು ಗೌಣಗೊಳಿಸಿ ಶಿಕ್ಷಣ ಮತ್ತು ಜ್ಞಾನವ್ಯವಸ್ಥೆಗಳನ್ನು ನಮ್ಮ ಸಂದರ್ಭದಲ್ಲಿ ಅರ್ಥೈಸುವುದು ಹೇಗೆ? ಮಕ್ಕಳ ಶಿಕ್ಷಣವೆಂಬ ಮೊದಲ ಉಲ್ಲೇಖ ಕಾಣಿಸಿಕೊಳ್ಳುವುದು 1498ರ ಒಂದು ಫ್ರೆಂಚ್ ದಾಖಲೆಯಲ್ಲಿ ಎಂದು "ಶಿಕ್ಷಣ" ಲೇಖನದಲ್ಲಿ ಹೇಳಲಾಗಿದೆ. ಈ ಮಾತನ್ನು ಓದುವಾಗ ನನಗೆ ತಕ್ಷಣ ನೆನಪಾಗುವುದು ನಮ್ಮಲ್ಲಿ ಸಾವಿರಾರು ವರ್ಷದ ಮುಂಚೆ ಇದ್ದ ಶ್ರೇಣೀಕೃತ ಗುರುಕುಲ ವ್ಯವಸ್ಥೆ. ಈ ನೆನಪು ಅಪ್ರಸ್ತುತವಲ್ಲ ಎಂದು ನಂಬಿದ್ದೇನೆ.

ನಾನು "ಆಹಾರ" ಲೇಖನದ ಬಗ್ಗೆ ಬರೆಯುವಾಗ ಹೇಳಿದ ಮಾತುಗಳೂ ಇದೇರೀತಿ ಮೂಲ ಲೇಖನ ಆಶಯವೇನೆ ಇದ್ದರೂ ಅನುವಾದಿತ ಕಾಂಟೆಕ್ಸ್ಟ್‌ನಲ್ಲಿ ಅವು ಹೊಳೆಸುವ ಮತ್ತೊಂದು ಪದರದ ಅರ್ಥಗಳಿಗೆ ಸಂಬಂಧಿಸಿದ್ದು, ನಾನು ಲೇಖನ ಪ್ರಸ್ತಾಪಿಸುವ ವೈಷ್ಣವ ಬಂಡವಾಳ ಹೂಡುವ ಮಾಂಸಾಹಾರದ ಚೈನುಗಳು ರಾಜಕೀಯ-ಆರ್ಥಿಕವಾಗಿ ನಡೆಸುವ ಏಕಸ್ವಾಮ್ಯ-ದಬ್ಬಾಳಿಕೆಯ ರಾಜಕೀಯವನ್ನು ಗುರುತಿಸಿದ ನಂತರವೇ ಇವು ಹೊಳೆಸುವ ಬೇರೆ ಸಾಧ್ಯತೆಗಳನ್ನು ಪ್ರಸ್ತಾಪಿಸಿದ್ದು. ನನ್ನ ಸೀಮಿತ ತಿಳಿವಳಿಕೆಯಲ್ಲಿ ಈ ಅರ್ಥಗಳು "ಬರಹದ ಕಾಳಜಿಯನ್ನು ಸಾರಾಸಗಟು ಅರ್ಥಹೀನಗೊಳಿಸುವ ಮಾತು"ಗಳಲ್ಲ, ಅನುವಾದಕ್ಕಾಗಿ ನಾವು ಮಾಡುವ ಆಯ್ಕೆಯಲ್ಲಿಯೇ ನಮ್ಮ ಸಂದರ್ಭದಲ್ಲಿ ಈ ವಿಚಾರಧಾರೆ ಪ್ರಸ್ತುತ ಮತ್ತು ಜರೂರು ಎಂಬ ನಮ್ಮ ಜಡ್ಜ್‌ಮೆಂಟ್ ಕೂಡ ಅಡಕವಾಗಿರುತ್ತದೆ ಅಲ್ಲವೆ?

ಈ ರೀತಿಯ ವಾದಗಳನ್ನೆತ್ತುವುದೇ "ಭಿನ್ನ ಚಿಂತನಾ ಮೂಲಗಳ ಬಗ್ಗೆ ಆಸ್ಥೆ ಗೌರವ" ಇಲ್ಲದಿರುವುದು, "ಖಚಿತವಾದ ದೋಷಾರೋಪಣಾ ಪಟ್ಟಿ ಎನ್ನುವ ದಾರ್ಷ್ಟ್ಯ" ಎಂದೇ ಧ್ವನಿಸುವುದಾದರೆ ಆಸ್ಥೆ, ಗೌರವ, ದಾರ್ಷ್ಟ್ಯ ಪದ/ಪರಿಕಲ್ಪನೆಗಳ ಅರ್ಥ ನನ್ನ ಮತ್ತು ಫಣಿರಾಜರ ಪರಿಭಾಷಾಕೋಶಗಳಲ್ಲಿ ಬೇರೆಬೇರೆಯೇ ಇರಬೇಕು. ತಮ್ಮ ಎರಡೂ ಪ್ರತಿಕ್ರಿಯೆಗಳಲ್ಲಿ ಫಣಿರಾಜರು ನನ್ನ ಎಲ್ಲ ಮಾತುಗಳನ್ನು "ಉಡಾಫೆ", "ಸೀಮಿತ ಓದು", "ದಾರ್ಷ್ಟ್ಯ" ಇತ್ಯಾದಿ, ಇತ್ಯಾದಿ ಪದಗಳನ್ನು ಉದ್ದಕ್ಕೂ ಬಳಸುತ್ತಾ ತಳ್ಳಿಹಾಕುತ್ತಾರೆ. "ನಂದಿಯವರ ಬಗ್ಗೆ ಮಾತಾಡುವುದಕ್ಕೆ ನಿನಗೇನು ಗೊತ್ತು ಮಹಾ?" ಅನ್ನುವ ಇವರ ಎರಡೂ ಪ್ರತಿಕ್ರಿಯೆಗಳ ಸ್ಥಾಯಿಭಾವದ ಬಗ್ಗೆ ಕನ್ನಡದ ದತ್ತ ದದ್ದಿಯರ ಸಾಲಿನಲ್ಲಿಯೇ ನಿಂತು ವಿನಯಪೂರ್ವಕ ಮೌನ ವಹಿಸುತ್ತಾ ಕೊನೆಯದಾಗಿ ಒಂದು ಮಾತು: 'ಭಳಾರೆ ವಿಚಿತ್ರಂ' ಎಂಬ ಚಂದದ ಪಂಚ್ ಲೈನ್ ಫಣಿರಾಜರಿಗೆ ತೋಚಿದಂತೆ ನನಗೆ ಯಾವ ಪಂಚ್ ಲೈನೂ ಹೊಳೆಯಲಿಲ್ಲ ಎನ್ನುವುದರ ಬಗ್ಗೆ ನನಗೆ "ವಿಷಾದ"ವೇ ಹೊರತು ಇದರ "ನಾಗರಿಕ..." [illegible]

■ ಶ್ರೀ



ನೀನೇನೆ ಹೇಳು ಯಸ್ಸೆಂ ಕಿಸ್ನ ಜೆಂಟ್ಳು ಮ್ಯಾನು ಕಂಡ್ಯ

ಬಿರೋಬ್ಬರಿ ಒಂದು ಮೀಟರ್ ಕಾಫಿ ಆಳೆಯುತ್ತಲೇ ಕಾಳಮಾವನ ಬಳಿ ಬಂದ ಚಿಕ್ಕಯ್ಯ, ಯಾವುದೊ ತಮಾಷೆ ಸುದ್ದಿಯನ್ನು ಹೇಳುವಂತೆ ಹುಸಿನಗೆ ಬೀರಿ,

"ಯಸ್ಸೆ ಕಿಸ್ನ ತಿರಗ ಬಂದನಂತೆ" ಎಂದು ಕಾಳಮಾವನ ಕೈಗೆ ಕಾಫಿ ಕೊಟ್ಟ. ಅದನ್ನು ಸೊರಗರಿಯುವ ಶಬ್ದದೊಂದಿಗೆ ಹೀರಿದ ಕಾಳಮಾವ,

"ಬರ್ಲಿ ಬುಡ್ರ, ಅವುನೇನು ನಮ್ಮನಿಗೆ ಬಂದನೆ?" ಎಂದ.

ಬಯಲು ಸೀಮೆಯ ಕಟ್ಟೆಪುರಾಣ

ಬ. ಚಂದ್ರೇಗೌಡ

"ಅವುನೊಂತರ ಜಂಟ್ಳು ಮಾನು" ಎಂದ ಸೀರ.

"ಪರವಾಗಿಲವಪ್ಪ, ಸೀರಮಾವನು ಜೆಂಟ್ಳುಮ್ಯಾನು, ಮೆಂಟ್ಳು ಮ್ಯಾನು ಅನ್ನದ್ನ ಕಲ್ತವುನೆ. ಹೋಗ್ಲಿ ಜಂಟ್ಳುಮ್ಯಾನು ಅಂದ್ರೇನು ಹೇಳೊ ಮಾವ?" ಎಂದು ಉಗ್ರಿ ಸೀರನನ್ನು ಹಾಸ್ಯ ಮಾಡಿದ. ಇದನ್ನ ಸವಾಲಾಗಿ ಸ್ವೀಕರಿಸಿದ ಸೀರ.

"ಅದೆ ಕಂಡ್ಯ, ಕಿಸ್ನ ಯಾರನ್ನ ವೈ ಮುಟ್ಟಸಿಗಳದಂಗೆ ಮಾತಾಡ್ತನೆ. ಬೀಡಿ ಸಿಗರೇಟ ಸೇದಕುಲ್ಲ ಕುಡಿಯದಿಲ್ಲಾ....."

"ಕುಡಿಯದಿಲ್ಲ ಅಂತ ಯಾರೇಳಿದ್ರು? ನೀನೇನು ನೋಡಕ್ಕೋಗಿದ್ಯಾ?"

"ಕಂಡೋರೇಳ್ತರಪ್ಪ."

"ಪಾರಿನ್ ವಿಸ್ಕಿ ಕುಡಿತನೆ ಕಣೊ. ನಿನ್ನಂಗೆ ರಾಜಾವಿಸ್ಕಿ ಕುಡಿಯದಿಲ್ಲ ಅವುನು ಗೊತ್ತೆ?"

"ಯಾರಿಗೂ ಕಾಣದಂಗೆ ಕುದಿತನೆ ಅನ್ನು?"

"ಇನ್ನೇನು? ಬೀದಿಲಿ ನಿಂತಗಂಡು ಕುಡಿಯಕ್ಕಾದತೇ. ಅವುನ ಲೆವೆಲ್ಲಿನೋರು ಸೇರಿಕೊಂಡಾಗ ಕುಡಿಬವುದು, ಕುಡಿದೆನೂ ಇರಬವುದು, ಕುಡುದ್ರೂ ಜಂಟ್ಳುಮ್ಯಾನು ಅನ್ನಿಸಿಗಬವುದು."

"ರಾಜ್ಯಪಾಲಾದೋನು ತಿರಗ ಬರುಬವುದೇನ್ಲ?" ಎಂದ ಕಾಳಮಾವ.

"ಬರಬವುದು, ಬರದೇನೂ ಇರಬವುದು ಕಣಮಾವ. ಆದ್ರೆ ಕಿಸ್ನ ಬರದಿದ್ರೆ ನಾವು ಹಾಳಾಗೋಯ್ತಿವಿ ಅಂತ ಇಲ್ಲೊಸಿ ಜನ ಹಾರಾಡಿದ್ರು. ಕಡಿಗೆ ಬಂಬಾಯಿಗೂ ಹೋಗಿ ಅತ್ತು ಕರುದು ಬಂದ್ರು. ಆದ್ಮೆ ಅವುನು ಬಂದ ಅತ್ತಗೆ...."

"ಅದ್ಯಾರತ್ತುಕೊಂಡು ಕರಿಯಕ್ಕೋಗಿದ್ರುರ್ಲ?" ಎಂದಳು ಜುಮ್ಮಿ.


"ಶಿವಕುಮಾರ, ಶಿವುರಾಮು, ಇಂತವ್ರೆಲ್ಲ ಹೋಗಿದ್ದವಂತೆ ಕಣೆ. ಹೋಗಿ 'ಆ ಖರ್ಗೆ ಮನೆತ ಹರಿಜನರ್ನೆಲ್ಲ ಸೇರಿಕಂಡವುರೆ. ಸಿದರಾಮಯ್ಯನ ಮನೆತ ಕುರುಬರ್ನೆಲ್ಲ ತಡಕಂಡವುರೆ. ದೇಶಪಾಂಡೆ ಮನೆತ ಬ್ರಾಂಬ್ರೆಲ್ಲ ಉಣ್ತಾ ಕುಂತವುರೆ. ವೀರಭದ್ರಪ್ಪ, ಎಚಕೆ ಪಾಟೀಲನ ಮನೆತ ಲಿಂಗಾಯಿತರ್ನೆಲ್ಲ ಸೇರಿಕಂಡು ಮಾತಾಡ್ತ ಅವುರೆ. ನಾವು ಯಾರ ಮನೆತಕ್ಕೋಗನಣ್ಣಾ' ಅಂತ ಅತ್ತವಂತೆ. ಅವುನೊಂದು ಸತಿ ಕಣ್ಣುಮುಚ್ಚಿಸಿ, ಅವುಡಗಚ್ಚಿ, 'ಆಯ್ತು, ಬತ್ತಿನಿ ನಡಿರಿ' ಅಂತ ಹೇಳಿದೋನು ಬಂದೇಬುಟ್ಟ ಅತ್ಗೆ."

"ಇವುನು ಬಂದಿರದ್ರಿಂದ ಕಾಂಗರೆಸ್ಸಿಗೇನಾರ ವಳ್ಳೆದಾದತ್ತ?" ಎಂದಳು ಜುಮ್ಮಿ.

"ಆಯ್ತದೆ. ಮದ್ಲು ಯಾರ ಮನೆತಕ್ಕಾರೂ ಹೋಯ್ತಿರಲಿಲ್ಲ. ಈಗ ಖರಗೆ, ಸಿದರಾಮಯ್ಯ, ದೇಶಪಾಂಡೆ ಯಲ್ಲ ಕಿಸ್ನನ ಮನೆತಕ್ಕೋಯ್ತರೆ, ಮಾತಾಡ್ತರೆ. ಅಂತೂ ಯಲ್ಲ ಸೇರಕ್ಕೊಂದು ಜಾಗಾಯ್ತು ಕಣೆ. ಯಂಗೆ ಅಂದ್ರೆ ಈ ಚಿಕ್ಕಣ್ಣನ ಹೋಟ್ಲುಮನಿಗೆ ಯಲ್ಲ ಬತ್ತರೆ ನೋಡು ಅಂಗೆ. ಇನ್ಮ್ಯಾಲೆ ಯಸ್ಸೆಂ ಕೃಷ್ಣನ ಮನೆತಕ್ಕೆ ಯಲ್ಲ ಹೋಗಿ ಕೂತಗಂಡು ಮಾತಾಡ್ತರೆ. ಆದ್ರೆ ಕ್ಯಾಟೆವಳಗೆ ಮಾತ್ರ ಡಿ.ಕೆ. ಶಿವಕುಮಾರ ಇರತನೆ."

"ಅದ್ಯಾಕವುನು ಕ್ಯಾಟೆ ವಳಗಿದ್ದನೂ?"

"ಯಲ್ಲಾರು ಏನು ಮಾತಾಡ್ತರೆ ಅಂತ ಕೇಳಿಸಿಗಳಕ್ಕೆ. ಕೇಳಿಸಿಗಂಡು ಯಾರ್ಯಾರಿಗೆ ಏನೇನು ಮಾಡಬೇಕು ಅನ್ನದ ಲೆಕ್ಕ ಹಾಕ್ತನೆ. ಈ ದಳದಲ್ಲಿ ಕುಮಾರಸ್ವಾಮಿ ಯಂಗೆ, ಕಾಂಗ್ರೆಸ್ಸಿನಲ್ಲಿ ಡಿ.ಕೆ. ಶಿವಕುಮಾರ. ಕುಮಾರಸ್ವಾಮಿಯಿಂದ ಕರ್ನಾಟಕ ಬಿಡುಗಡೆಯಾಯ್ತು ಅನ್ನಕಂಡು ನಿಟ್ಟುಸಿರು ಬುಡಂಗಿಲ್ಲ, ಅವುರಪ್ಪನ ಮೀರಿಸಿದ ಶಿವಕುಮಾರ ಬತ್ತನೆ" ಎಂದ ಉಗ್ರಿ.



ಆಗ ಪಕಾರೆಂದು ನಗಾಡಿದ ಸೀರ,

"ಇದೊಳ್ಳೆ ಚನಾಯ್ತು ಕಂಡ್ಯ. ಕೈಸಿಯೋ ಕ್ಯಾಣನ ಕೊಟ್ಟು ವದಿಯೋ ಕತ್ತೆ ತಂದು ಕಟಗಂಡಂಗಾಯ್ತದೆ" ಎಂದ.

"ಬಚ್ಚೇಗೌಡ ಬಜೆಪಿಗೋಗಿ ಬುಟ್ನಂತೆ?" ಎಂದ ಕಾಳಮಾವ.

"ವಂದ್ಲ ಅವುನು ಬಚ್ಚ ಅವುನ್ಯಾವ ಪಾರ್ಟಿಗೋದ್ರು ಅಷ್ಟೆ ದೊಡಪ್ಪ, ಹೋಗ್ಲಿ ಬುಡು. ಈ ದ್ಯಾವೇಗೌಡನ ಹಾಳು ಮನೆಲಿ ಯಾರಿದ್ದರು?" ಎಂದುಕೊಂಡು ವಾಟಿಸ್ಸೆ ಬಂದ.

"ಅಂಗರೆ ದ್ಯಾವೇಗೌಡನ ಪಾರ್ಟಿಯಿಂದ ಯಲ್ಲ ಕಾಲಿಯಾದ್ರು ಅನ್ನು?"

"ಹೆಚ್ಚುಕಮ್ಮಿ ಖಾಲಿಯಾದ್ರು. ಇನ್ನೇನಿದ್ರು ಅಪ್ಪ ಮಕ್ಕಳು, ಬೀಗರು, ಬಿಜ್ಜರ ಪಾರ್ಟಿ ಅದು."

"ಅದ್ರು ದ್ಯಾವೇಗೌಡ ಹೆದರದಿಲ್ಲ ಬುಡು."

"ಅವುನ್ಯಾವತ್ತು ಯಾತಕೆದಿರ್ದವುನೆ ದೊಡ್ಡಪ್ಪ? ಯಾವುದೇ ಮನುಸುನಿಗೆ ಒಂಚೂರು ಹೆದಿಕೆ ಅದೆ ಅಂದ್ರೆ ಅವುನಲ್ಲಿ ಇನ್ನು ಒಂಚೂರು ವಳ್ಳೆದದೆ ಅಂತ ಅರ್ಥ. ಯಾರಿಗೂ ಯಾತಕೂ ಹೆದರದಿಲ್ಲ ಅಂದ್ರೆ ಏನೋ ಕೇಡಗಾಲ ಅಂತ."

"ಅಂಗರೆ ಕೇಡಗಾಲ ಬತ್ತು ಅಂತಿಯಾ?" ಎಂದ ಉಗ್ರಿ.

"ಕಿಸ್ನನ ಪ್ರವೇಶ ಆಗಿರದರಿಂದ ದ್ಯಾವೇಗೌಡನಿಗೆ ಕೇಡುಗಾಲ ಬತ್ತು ಅಂತ ಕಾಂಗ್ರೆಸ್‌ನವು ಬಡಕತ್ತಾ ಅವೆ."

ಮೂರನ್ನೂ ಬಿಟ್ಟವರು

ಚುನಾವಣೆ ಮನೆಯ ಹೊಸಲಿಗೆ ಬಂದಂತಿದೆ.

ರಾಜಕೀಯ ಧುರೀಣರಿಗೆ ಎಲ್ಲರನ್ನೂ ತೃಪ್ತಿಗೊಳಿಸುವ ತವಕ. ಆಶ್ವಾಸನೆಗಳ ಸುರಿಮಳೆ.

ಕುಮಾರಸ್ವಾಮಿ ಘೋಷಿಸಿದರು– 'ಬರುವ ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ.'

ಯುವ ಜನತೆಯ ಮೇಲೆ ಯಾಕೆ ಇದ್ದೊಂದು ಆಸಕ್ತಿ?

ಸಿದ್ದರಾಮಯ್ಯ ಅಂಡ್ ಕಂಪನಿ ಆಯ್ತು.

ಎಂ.ಪಿ. ಪ್ರಕಾಶ್ ಅಂಡ್ ಕಂಪನಿ ಹೋಯ್ತು.

ಜಿ.ಟಿ. ದೇವೇಗೌಡ ಹೋದರು. ಬಚ್ಚೇಗೌಡ ಹಿಂಬಾಲಿಸಿದರು.

ಹಿರಿಯರೆಲ್ಲ ಪಕ್ಷದಿಂದ ಹೊರಹೋದ ಮೇಲೆ ಉಳಿದವರು ಯಾರು?

ಯುವಕರು!

ಆದಕ್ಕೇ ಈ ಭರವಸೆ! ಅವರನ್ನು ಬಿಟ್ಟರೆ ಅಭ್ಯರ್ಥಿಗಳು ಬೇಕಲ್ಲ!

* * * *

ಭಾಜಪ ಅನ್ನುವುದು ಇರುಳೇ ಕಂಡಬಾವಿ. ಹಗಲೇ ಇದ್ದರೂ ಎಚ್.ಎನ್. ನಂಜೇಗೌಡ ಬಿದ್ದರು; ಎಸ್. ಬಂಗಾರಪ್ಪ ಅದೇ ದಾರಿ ಹಿಡಿದರು. ಬಿದ್ದಮೇಲೆ ಗೊತ್ತಾಯಿತು– 'ಅಲ್ಲಿನದು ಗರ್ಭಗುಡಿ ಸಂಸ್ಕೃತಿ.' ಉಗಿದು ಹೊರಬಂದರು.

ಈಗ ಬಚ್ಚೇಗೌಡ ಸರದಿ.

ಈ ಹೊಸಕೋಟೆ ಯಾಕೆ ಹಳೇ ಬಾವಿಗೆ ಬಿದ್ದಿತು?

ಭಾರತೀಯ ಜನತಾಪಕ್ಷದ ತತ್ವ, ಸಿದ್ಧಾಂತದ ಆಕರ್ಷಣೆ!

ಹಾಗಂತ ಅವರೇ ಹೇಳಿದ್ದಾರೆ.

ಇದೇ ಹೊಸಕೋಟೆ ಭಾಜಪ ಕೋಮುವಾದಿ ಪಕ್ಷ ಹಾಗೆ ಹೀಗೆ ಅಂತ ತಾರಾಮಾರಿ ಉಗೀತಿದ್ದರಲ್ಲ?

ಆಗ ಕಣ್ಣಿಗೆ ಪೊರೆ ಬಂದಿತ್ತಂತೆ! ಆಪರೇಷನ್‌ಗೆ ಒಳಗಾಗಿ, ಪೊರೆ ಹರಿಸಿಕೊಂಡ ಮೇಲೆ ತಿಳಿಯಿತಂತೆ–ಇದು ದೇಶಪ್ರೇಮಿಗಳ ಪಕ್ಷ!

ಈ ಪೊರೆ ಬರಿಸಿದ್ದು ಯಾವುದು?



ಜಾತ್ಯತೀತದಳ ವಿಧಾನ ಪರಿಷತ್ ಸದಸ್ಯ ಮಾಡುತ್ತದೆಂಬ ದೂರದ ಆಸೆ!

ಆದದ್ದು ಏನಪ ಅಂದರೆ... ಕುಮಾರಸ್ವಾಮಿ ಅಧಿಕಾರದಲ್ಲಿದ್ದಾಗಲೇ ಐದು ವಿಧಾನಸಪರಿಷತ್ತಿನ ಸದಸ್ಯರ ಸ್ಥಾನ ತೆರವಾಯಿತು. ಅದು ಸರ್ಕಾರವೇ ನಾಮಕರಣ ಮಾಡುವ ಸ್ಥಾನಗಳು. ಬಚ್ಚೇಗೌಡರು ಕಳೆದ ಚುನಾವಣೆಯಲ್ಲಿ ಸೋತ ಅಭ್ಯರ್ಥಿ; ವಿಧಾನಪರಿಷತ್ತು ಸೋತವರ ಆಶ್ರಯ ಸ್ಥಾನ ಅಲ್ಲ ಎಂಬಂತಹ ಯಾವುದೇ ನೀತಿ ನಿಯಮವೂ ಪಕ್ಷದ ವರಿಷ್ಠರ ಹತ್ತಿರವೂ ಸುಳಿದಿರಲಿಲ್ಲ, ದಾರ್ಶನಿಕರ ರೀತಿ ಮಾತನಾಡುವ ಎಂ.ಪಿ. ಪ್ರಕಾಶ್ ಅವರನ್ನು ಚುನಾವಣೆಯಲ್ಲಿ ಸೋತ ತಕ್ಷಣ ಜೆ.ಎಚ್. ಪಟೇಲರು ವಿಧಾನಪರಿಷತ್ತಿಗೆ ನಾಮಕರಣ ಮಾಡಿದ್ದು ಅವರಿಗೇನು ತಿಳಿಯದೇ ಇರಲಿಲ್ಲ. ಇಂತಹವು ಬಹಳಷ್ಟು ಆಗಿರುವುದೂ ಗೊತ್ತಿತ್ತು.

ಆದರೆ ಒಂದು, ಆ ಸ್ಥಾನ ತೆರವು ಇದೆ. ಅದನ್ನು ಭರ್ತಿ ಮಾಡುವ ದೊರೆ ನಾನು ಅಂತ ತಿಳಿದಾಗ ಮನಸ್ಸಿಗೆ ಒಂದು ರೀತಿಯ ಹೆಮ್ಮೆ ಅನ್ನಿಸುತ್ತದೆ. ಸೀಟಾಂಕಾಂಕ್ಷಿಗಳೂ ಅವರ ಹಿಂದೆಮುಂದೆ, ಸುತ್ತಮುತ್ತ ಸುಳೀತಿರ್ತಾರೆ. ಅದನ್ನು ಭರ್ತಿ ಮಾಡೇಬಿಟ್ಟರೆ... ಫಲಾನುಭವಿ ಋಣಿಯಾಗಿರ್ತಾನೆ ಅಂತ ಖಾತರಿ ಇರೋಲ್ಲ; ಅಧಿಕಾರ ಸಿಗದೇ ಇದ್ದೋನು ಕೊಸರಿಕೊಂಡು ಹೋಗ್ತಾನೆ. ಅದಕ್ಕೆ ಇವತ್ತು ಮಾಡ್ತೀನಿ, ನಾಳೆ ಮಾಡ್ತೀನಿ; ಆಗ ಮಾಡ್ತೀನಿ, ಈಗ ಮಾಡ್ತೀನಿ ಅಂತ ದಿನ ನೂಕ್ತಾನೆ ಬಂದ್ರು. ಅಷ್ಟರಲ್ಲಿ ಅವರ ಸರ್ಕಾರವೇ ಮಗುಚಿಕೊಂಡಿತು. ಒಂದು ವೇಳೆ ಬಚ್ಚೇಗೌಡರನ್ನು ಎಂಎಲ್‌ಸಿ ಮಾಡಿಯೇಬಿಟ್ಟಿದ್ದರೆ ಜಾತ್ಯತೀತ ಜನತಾದಳ ಅತ್ಯುತ್ತಮ ಪಕ್ಷವಾಗಿ ಗೋಚರಿಸುತ್ತಿತ್ತು. ಅದನ್ನು ಮಾಡಲಿಲ್ಲ, ಹೀನಪಕ್ಷವಾಗಿ ಕಾಣಿಸಿದೆ!

ತತ್ವ ಸಿದ್ಧಾಂತಗಳ ಆಧಾರದ ಮೇಲೇ ನಿಂತಿರುವ ಭಾರತೀಯ ಜನತಾ ಪಕ್ಷ ಯಾಕೆ ಬರಗೆಟ್ಟವರ ತರಹ ಸಿಕ್ಕಿದ್ದಕ್ಕೆಲ್ಲ ಕೈಹಾಕ್ತಿದೆ? ನಿನ್ನೆಮೊನ್ನೆ ಹಿಗ್ಗಾಮುಗ್ಗಾ ಉಗೀತಿದ್ದವರನ್ನೂ 'ನೀನೇ ನನ್ನ ಗೆಳೆಯ' ಅಂತ ತಬ್ಬಿಕೊಳ್ಳದೆ ಅಂದರೆ...

ಅಭಿವೃದ್ಧಿಯ ಯಾವುದೇ ಕಾರ್ಯಕ್ರಮ ಇಲ್ಲ!

ಇದ್ದಿತಲ್ಲಾ ಅನುಕಂಪದ ಅಲೆ? ದೊರಕಿಸದೆ ಅಧಿಕಾರವ?

ಇದು ಆಗಬಹುದಿತ್ತೇನೋ. ಆದರೆ.....

ಹಲವು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಅಭಾವ!

ದಂತಗೋಪುರದಿಂದ ಕುಸಿದರು. ತಡಕಾಡಿದರು ಅಭ್ಯರ್ಥಿಗಳಿಗಾಗಿ. ಎಲ್ಲಿದ್ದರು ಅಂತಹವರು?

ಎಲ್ಲಿರುವುದಿಲ್ಲ? ಎಲ್ಲ ಪಕ್ಷಗಳೂ ತಮ್ಮ ಪಕ್ಷದವರೆಲ್ಲರನ್ನು ತೃಪ್ತಿಪಡಿಸಲಾದೀತೆ?

ಹಿಡಿದರು ಈ ಅಸಮಾಧಾನಿಗಳ!

ಅನಾಕ್

ಎಚ್.ಎಲ್. ಕೇಶವಮೂರ್ತಿ

* * * *

ಈಗ ಎಲ್ಲ ಪಕ್ಷದವರೂ ಸಮಾನ ದುಃಖಿಗಳು.

ಯಾಕೆ ಹೀಗಾಯಿತು?

ಕ್ಷೇತ್ರ ಮರುವಿಂಗಡಣೆ!

ಗ್ರಾಮೀಣ ಕ್ಷೇತ್ರಗಳ ಕಡಿತ; ನಗರ ಕ್ಷೇತ್ರಗಳ ಹೆಚ್ಚಳ. ಬೆಂಗಳೂರು ನಗರಕ್ಕೇ ಇಪ್ಪತ್ತೆಂಟು ಕ್ಷೇತ್ರ!

ಅಭ್ಯರ್ಥಿಗಳ ಕೊರತೆಯೆ?

ಇಲ್ಲ, ಸಭ್ಯರೂ ಇದ್ದಾರೆ. ಆದರೆ ಅವರು ಗೆಲ್ಲುವ ಅವಕಾಶ ಸೀಮಿತ!

ಪ್ರಾಮಾಣಿಕರು?

ಹುಡುಕಿದರೆ ಸಿಗಬಹುದು. ಇರಬೇಕಲ್ಲ ಅವರ ಬಳಿ ಹಣ? ಚುನಾವಣೆ ಎಂದರೆ ಹಲವು ಕೋಟಿಗಳ ಲೆಕ್ಕ!

ರಿಯಲ್ ಎಸ್ಟೇಟ್ ಏಜೆಂಟರು?

ಹಲವರಿದ್ದಾರೆ. ಹಣವೂ ಇದೆ. ತಮ್ಮ ಕಸುಬು ಹೇಳಿಕೊಳ್ಳಲು ಅವರಿಗೇ ಯಾಕೋ ಅಳುಕು!

"ಅವು ಬದಕಳದು ಮಾಮೂಲು. ನಿನಿಗನ್ನಿಸಿ ...ೇ?"

"ಏನೇಳಬೊ ಉಗ್ರಿ? ಶಿಷ್ಟ ಮಾಡಿರೊ ದ್ಯಾವುದಾರ ...ಕಾರ್ಯ ಇದ್ರೆ ಹೇಳನಾ ಅಂದ್ರೆ ಒಂದೂ ಗ್ಯಾಪುಕ್ಕೆ ...ಯಿಲ್ಲ."

"ರಾಜಕುಮಾರನ್ನ ಬುಡಿಸಿಗಂಡು ಬಂದಿರಲಿಲ ...?" ಎಂದಳು ಜುಮ್ಮಿ.

"ಅದು ಕ್ಯಾಶ್ ಕೊಟ್ಟು ಬುಡಿಸಿಗಂಡು ಬಂದಿದ್ದು ... ಇವುನೆ ಹೋಗಿ ಫೈಟ್ ಮಾಡಿ ಬುಡಿಸಿಗಂಡು ...ದ್ರೆ ಹೇಳು. ಅದೇ ಇನ್ನಿದೆಂಟು ಕುಮಾರಸ್ವಾಮಿ ...ದಲ್ಲಾಗಿದ್ರೆ ವೀರಪ್ಪನ್ ಕೇಳಿದ್ದಕ್ಕಿಂತ ಹತ್ತು ಕೋಟ ...ನೆ ಕೊಟ್ಟು ಬುಡಿಸಿಗಂಡು ಬತ್ತಿದ್ರು. ಅದು ...ದಂಗೆ ಅವುರಿವುರತ್ರ ಕೇಳಕ್ಕೋಯಿತ್ತಿರಲಿಲ್ಲ, ಬಾಲಕಿಸ್ನ ...ೇತ, ರೇವಣ್ಣನೆ ಹತ್ತತ್ತು ಕೋಟಿ ಕೊಡೋರು. ...ದ್ದ ಚನ್ನಿಗಪ್ಪ ಕೊಡೋನು. ಮ್ಯಾಲೆ ಇವುನೊಂದಿ ... ಅವುರಿಗಿಂತ ಮದ್ದೆ ಬುಡಿಸಿಗಂಡು ಬಂದು ...ಕೋನು ಕಣಕ್ಕ."

"ನೀನೇಳತಯಿರದು ತಪ್ಪು ಕಣೊ ವಾಟಿಸ್ಸೆ" ಎಂದ ...

"ಯಂಗಪ್ಪ?"

"ಮದ್ದೆ ರಾಜಕುಮಾರನ ಫ್ಯಾಮಿಲಿಗೂ ಕುಮಾರ ...ಗೂ ಆಯ್ತಿರಲಿಲ್ಲ. ಅಂತದ್ರಲ್ಲಿ ರಾಜಕುಮಾರನ್ನ ...ಸಿಗಂಡು ಬತ್ತಿದ್ದ ಅಂತಿಯಲ್ಲ ಹೇಳು? ಏನೇ ... ನೀನು ಕುಡುಂದಾಗ್ಲೆ ಕಣೊ ಸರಿಯಾಗಿ ...ಡದು."

"ಅಂಗಂತಿಯಾ?"

"ಇನ್ನೇನು ಮತ್ತೆ? ಅಣ್ಣಾರು ತೀರಿಕಂಡಾಗ ಅವುರ ... ನಿಭಾಯಿಸಕ್ಕಾಗದೆ ಎಂಟು ಜನ ಬಲಿ ಕೊಟ್ಟೊನು ... ಕುಮಾರಸ್ವಾಮಿ. ಇಂಥೊನು ರಾಜಕುಮಾರ ...ದ್ದಾದಾಗ ಬುಡಿಸಿಗಂಡು ಬತ್ತಿದ್ದ ಅಂತ ಹೇಳ್ತಿಯಲ್ಲ, ...ಣನ?"

"ಸಾರಿ ಕಣೊ ಉಗ್ರಿ."

"?"

...ಮೊಗತಿ ಪಾತಕಿಗಳು?

...ಹೆಸರಿಗಾದರೂ ಮಾಜಿಗಳಾಗಿರಬೇಕು!

...ಇಂತಹವರು ಬಂದರೆ ಜಯಗಳಿಸಬಹುದು. ಅವರ ...ಷು ಹೇಳಲು ರಾಜಕೀಯ ನಾಯಕರಿಗೆ ಹಿಂಜರಿಕೆ. ...ವನ್ನು ಸೆಳೆಯಲು ಪಕ್ಷಗಳ ಮುಸುಕಿನೊಳಗಿನ ...ಟ!

* * * *

...ಕೋಮುವಾದಿ ಭಾಜಪ ಅಧಿಕಾರಕ್ಕೆ ಬರುವುದು ...

...ಯಾರಿಗೆ ಬೇಡ?

...ಕಾಂಗ್ರೆಸ್ಸಿಗೆ? ಅದನ್ನು ಚಿಂತಿಸಲೂ ಸಮಯ ಇಲ್ಲ. ...ಾಂದೋಲನ' ಕಾರ್ಯಕ್ರಮಕ್ಕೆ ಕೃಷ್ಣ ...ನಿಸಬೇಕೋ, ಬೇಡವೋ ಅನ್ನುವ ಆಂತರಿಕ ...ದಲ್ಲಿ ಅದು ಮಗ್ನ! ಯಾರು ಬಂದರೆ ಯಾರು ...ಮುಖ್ಯತೆ ಕಳೆದುಕೊಳ್ಳುತ್ತಾರೆ ಎನ್ನುವ ಚಿಂತೆ ...ಗೆ!

...ಪ್ರಗತಿಪರ ಚಿಂತಕರಿಗೆ?

...ಖಂಡಿತ ಭಾಜಪ ಬೇಡ.

...ಜನಸಂಘಟನೆ ಮಾಡಬೇಕಲ್ಲ? ಭಾಜಪ ಅಧಿಕಾರಕ್ಕೆ ...ರೆ ಆಗುವ ಅಪಾಯ ತಿಳಿಸಬೇಕಲ್ಲ? ಜನರನ್ನು ...ಸಬೇಕಲ್ಲ?

...ಮಾಡಿರಿ ಸಮಾವೇಶ.

...ಆಯಿತು. ಕರೆಯುವುದು ಯಾರನ್ನ?

...ಈ ಸಂಘಟನೆ ಆದೀತೆ?

...ಬೇಡ ಅವರು ನಕ್ಸಲ್ ಅನುಕಂಪ ಉಳ್ಳವರು!

...ಅದು ಬೇಡ. ಇದು ಆಗಬಹುದೆ?

...ಬೇಡ ಅವರು 'ಸಿಮಿ' ಅನುಕಂಪ ಉಳ್ಳವರು!

...ಯಾರು ಹೇಳಿದರು ಹಾಗೆಂದು?

...ಬಲ್ಲ ಮೂಲ'ಗಳಿಂದ ತಿಳಿದುಬಂದಿದೆ!

...ಎಲ್ಲ ಸಂಘಟನೆಗಳ ಬಗ್ಗೆಯೂ ಇಂತಹದ್ದೇ ಉತ್ತರ! ...ಲ್ಲ ಒಬ್ಬರ ಆಕ್ಷೇಪಣೆ. ಕೂದಲು ಸೀಳುವ ಚರ್ಚೆ! ...ಕೋಮುವಾದಿಗಳಲ್ಲವೆ ಅವರು?

...ಅಪಾದನೆ ಸುಳ್ಳೇ ಇರಬಹುದು. ಆದರೆ ಅಪಾದನೆ ...ವುದು ಸತ್ಯವೇ. ಅಂತಹ ಸಂಘಟನೆಗಳು ಬೇಡ. ...ಹಾಗಾದರೆ ಕರೆಯುವುದು ಯಾರನ್ನ?

...ಜನಸಂಪರ್ಕವೇ ಇಲ್ಲದವರನ್ನ!

ಅಳಿಯ, ಹೋಳಿಗೆ

ನಿಮ್ಮ ಅನುಭವಗಳೇ ನಿಮ್ಮನ್ನು ಹೇಗೆ ಬಂದು ಚುಂಬಿಸುತ್ತವೆ! ಇದೊಂದು ಕಂದಾಚಾರದ ಟಿಪ್ಪಣಿ ಬರೆಯುತ್ತಿದ್ದೇನೆ: ಕ್ಷಮಿಸಿ. ಮೊನ್ನೆ ನಾನು ಬಲ್ಲ ವೆಂಕಟಸ್ವಾಮಿಗೆ ನಮ್ಮ ತೋಟಕ್ಕೆ ಬರಲು ಹೇಳಿ ಕಳಿಸಿದ್ದೆ. ಆತ ಹಾಲು ಮಾರುವವನು, ಹೂ ಮಾರುವವನು. ನನ್ನನ್ನೊಬ್ಬ ವಿಚಿತ್ರ ಮನುಷ್ಯ ಎಂಬಂತೆ ನೋಡಿ ಪ್ರೀತಿ ಇಟ್ಟುಕೊಂಡವನು. ಆತ ಬೆಂಗಳೂರಿನ ನನ್ನ ಪರಿಚಿತರೊಬ್ಬರಿಗೆ ಹಾಲು, ಹೂವು ಕೊಡಬೇಕಿತ್ತು, ಅದನ್ನು ತಿಳಿಸಲು ಅವನನ್ನು ಕರೆಸಿದ್ದೆ. ವೆಂಕಟಸ್ವಾಮಿ ನಮ್ಮ ತೋಟಕ್ಕೆ ಬರಿಗೈಲಿ ಬರಲಿಲ್ಲ. ದೊಡ್ಡ ಸ್ಟೇನ್‌ಲೆಸ್ ಸ್ಟೀಲ್ ಟಿಫಿನ್ ಕ್ಯಾರಿಯರ್ ತಂದ. "ಏನೋ ಅದು?" ಅಂದೆ. "ಹೋಳಿಗೆ ಸಾರ್. ನಮ್ಮನೇಲಿ ಮಾಡ್ತಾ ಇದ್ರು. ಅದೇ ವ್ಯಾಳ್ಯಾಕ್ಕೆ ಹೇಳೀಕಳಿಸ್ರಿ. ನೀವು ನಮ್ಮ ಹೋಳಿಗೆ ತಿನ್ನಲೇಬೇಕು" ಅಂದ. ನಾನು ಯೋಚಿಸಿದೆ. ನಾನು ತಿನ್ನುವುದೇ ಕಮ್ಮಿ, ಸಿಹಿ ಎಂದರೆ ಆಗುವುದಿಲ್ಲ. ಆದರೆ ಅವನ ಪ್ರೀತಿಯಿಂದ ಕರಗಿಹೋಗಿ ಕೇಳಿದೆ, "ಇವತ್ತು ಹಬ್ಬವಲ್ಲ ಏನೂ ಅಲ್ಲ, ಹೋಳಿಗೆ ಯಾಕೆ ಮಾಡ್ತಿದ್ದೀರಯ್ಯ?" ಅಂದೆ.



"ಏನಿಲ್ಲ ಸಾರ್. ಆರು ತಿಂಗಳ ಹಿಂದೆ ಮದುವೆ ಆಯ್ತಲ್ಲ ನನ್ನ ತಂಗಿ, ಅದರ ಯಜಮಾನ ಬಂದವ್ರೆ. ನಿನ್ನೆ ಬಂದ್ರು, ಬಾಡು ಮಾಡಿದ್ವಿ, ಇವತ್ತೂ ಇರಬೇಕು ಅಂತ ಬಲಾತ್ಕಾರ ಮಾಡಿದ್ರಿಂದ ಅವ್ರೆ. ಇವತ್ತು ಅವರಿಗಾಗಿ ಹೋಳಿಗೆ ಮಾಡ್ತಿದಾರೆ" ಅಂದ ವೆಂಕಟಸ್ವಾಮಿ.

ನಾನು ಹೋಳಿಗೆ ತಿನ್ನುವವರೆಗೆ ಬಿಡಲೇ ಇಲ್ಲ. ಇನ್ನೂ ಬಿಸಿ ಇದ್ದ, ಗಟ್ಟಿ ತುಪ್ಪವನ್ನು ಕರಗಿಸುತ್ತಿದ್ದ ಹೋಳಿಗೆ. ಒಂದು ತಿಂದು ಅವನಿಗೂ ತಿನ್ನಲು ಹೇಳಿದೆ.


ಯಾಕೆ ಬರೆಯುತ್ತಿದ್ದೇನೆಂದರೆ ಇದು ಕಣ್ಮರೆಯಾಗುತ್ತಿರುವ ಪರಂಪರೆ. ಮದುವೆಯಾದ ಹೊಸದರಲ್ಲಿ ಅಳಿಯ ಮನೆಗೆ ಬಂದರೆ ಆತ ರಾಜನಂತೆ, ವಿಶೇಷ ಅತಿಥಿಯಂತೆ. ಈ ಮನೆಯ ಹೆಣ್ಣುಮಗಳನ್ನು ಪ್ರೀತಿಸುತ್ತಿರುವವನು, ನೋಡಿಕೊಳ್ಳುತ್ತಿರುವವನು. ಆತನಿಗೆ ಕೊಡುವ ಗೌರವ ಆತನ ಪ್ರೀತಿಗೆ, ಈ ಮನೆಯೊಂದಿಗೆ ಆತ ಬೆಳೆಸಿಕೊಂಡ ಸಂಬಂಧಕ್ಕೆ, ಈ ಮನೆಯ ಹುಡುಗಿಯ ಮೈ, ಮನಸ್ಸು ಸ್ವೀಕರಿಸಿದ ಕ್ರಿಯೆಗೆ ಕೊಡುವ ಮನ್ನಣೆ.

ಇದಕ್ಕೆ ಇನ್ನೊಂದು ಮುಖವಿದೆ. ಈ ಅಳಿಯ ಹೊರಗಿನ ಜಗತ್ತಿನಲ್ಲಿ ಎಂಥವನಾದರೂ ಆಗಿರುವ ಸಂಭವವಿದೆ. ಬಡವನಾದ, ಈ ಬಡತನದಿಂದಾಗಿಯೇ ಕುಡಿಯುವ, ಸಾಲ ಮಾಡುವ, ಸೋಮಾರಿಯಾದ, ಎಲ್ಲರ ತಾತ್ಸಾರಕ್ಕೆ ತುತ್ತಾದ ಸಾಮಾನ್ಯ ಮನುಷ್ಯನಾಗಿರುವ ಸಂಭವವಿದೆ. ಆದ್ದರಿಂದಲೇ ಈ ಅಳಿಯ ದೇವರಿಗೆ ದೊರೆಯುವ ಗೌರವ ಕುತೂಹಲಕರ. ಜಗತ್ತಿನಲ್ಲಿ ದೊರೆಯದಿರುವ ಮನ್ನಣೆ ಈತನಿಗೆ ತಾನು ಪಡೆದ ಹೆಣ್ಣಿನ ತೌರಿನಲ್ಲಿ ದೊರೆಯುತ್ತದೆ; ಮೈದುನರ, ನಾದಿನಿಯರ, ಅತ್ತೆಮಾವಂದಿರ ಪ್ರೀತಿ ದೊರೆಯುತ್ತದೆ. ಇದರಿಂದಾಗಿ ಹೊರಜಗತ್ತಿನಲ್ಲಿ ಕುಗ್ಗಿಹೋದ ಹುಡುಗ ತನ್ನ ಅತ್ತೆಮಾವಂದಿರ ಎದುರು ಗೌರವ, ಪ್ರೀತಿಯಿಂದ ಚೇತರಿಸಿಕೊಳ್ಳುತ್ತಾನೆ.

ಪರಂಪರಾಗತ ಮದುವೆಗಳೂ ಅಷ್ಟೆ. ಎಲ್ಲೋ ಆಡಿಕೊಂಡಿದ್ದ, ತುಡುಗು ತಿರುಗುತ್ತ ಎಲ್ಲರ ಗೇಲಿ, ಬೈಗುಳಕ್ಕೆ ತುತ್ತಾಗುತ್ತಿದ್ದ ಹುಡುಗ ಮದುಮಗನಾದೊಡನೆ ವಿಶೇಷ ವ್ಯಕ್ತಿ; ಬಾಸಿಂಗ ಸೂಡಿಕೊಂಡು ಊರಿನ ಗಣ್ಯರಿಗಿಂತಲೂ ಎತ್ತರದಲ್ಲಿ, ತನ್ನ ಹುಡುಗಿಯೊಂದಿಗೆ ಕೂತು ತಮ್ಮಿಬ್ಬರ ಯೌವನ, ಪ್ರೀತಿಯನ್ನು ಸಾರುವ ದಿಟ್ಟ. ಈ ಕ್ರೂರ ಜಗತ್ತನ್ನು ಒಬ್ಬನೇ ಎದುರಿಸಲು ಸಾಧ್ಯವಿಲ್ಲ ಎಂದು ಗೆಳತಿಯನ್ನು ಪಡೆಯುತ್ತಲೇ ಮದುವೆಯ ಸಮಯದಲ್ಲಿ ಅನೇಕಾನೇಕ 'ಶಾಸ್ತ್ರ'ಗಳ ಮೂಲಕ, ವರ್ಣರಂಜಿತ ಉಡುಪುಗಳ ಮೂಲಕ, ಎಲ್ಲರ ಎದುರಿಗೆ 'ಸ್ಪೆಷಲ್' ವ್ಯಕ್ತಿಯಾಗುವ ಮೂಲಕ ಬದುಕನ್ನು ಎದುರಿಸಲು ಸಿದ್ಧತೆ ಮದುವೆ. ಹುಡುಗಾಟದ ಕಾಲ ಮುಗಿದು ಗೃಹಸ್ಥಾಶ್ರಮ ಸೇರಿ ಪ್ರಬುದ್ಧರ ಲೋಕ ಸೇರುವ ಸಂಭ್ರಮ ಮದುವೆ.

ಲೋಕಾಚಾರ ಎಂಬಂತೆ ನೋಡಿದಾಗ ಅದ್ಭುತವಾಗಿ ಕಾಣುವ ಈ ಮದುವೆಗೆ ಏನಾಯಿತು? ಇಲ್ಲಿ ವರದಕ್ಷಿಣೆ, ಲೆಕ್ಕಾಚಾರ, ಸಣ್ಣತನವೆಲ್ಲ ಸೇರಿ ಮದುವೆಯೆಂದರೇ ಗಡಗಡ ನಡುಗುವ ಪರಿಸ್ಥಿತಿ ಹೇಗೆ ಹುಟ್ಟಿಕೊಂಡಿತು? ಪುರೋಹಿತನ ಸುಳ್ಳು, ಹೆತ್ತವರ ಭ್ರಷ್ಟತೆ, ತರುಣತರುಣಿಯರ ನಿರುದ್ಯೋಗ, ಹೃದಯ ಸ್ಪಂದನವನ್ನು ಕಳೆದುಕೊಂಡ ಜಾತಿಪದ್ಧತಿ, ಎಲ್ಲ ಸಂಬಂಧಗಳನ್ನು ಮೀರಿಸಿ ಸಂಭೋಗವೇ ವಿಜೃಂಭಿಸತೊಡಗಿದ್ದು–ಇವೆಲ್ಲವೂ ಮದುವೆಯಷ್ಟೇ ಮುಖ್ಯವಾದ ಮತ್ತೊಂದು ಆಚರಣೆಯತ್ತ ಜನರನ್ನು ಸೆಳೆಯಿತು. ಅದು ವೇಶ್ಯಾವೃತ್ತಿ.

ಇಷ್ಟನ್ನೆಲ್ಲ ಬರೆಯುವಾಗ ವೆಂಕಟಸ್ವಾಮಿಯನ್ನು ನಾನು ಮರೆಯುವುದಿಲ್ಲ. ಈತನದು ಸೋಮಾರಿಗಳ ಕುಟುಂಬ; ಸಾಕಷ್ಟು ಜಮೀನುಳ್ಳ ಈ ಕುಟುಂಬ ಬಡತನದಲ್ಲೇ ಇದೆ. ವೆಂಕಟಸ್ವಾಮಿ ಈ ಬಗ್ಗೆ ಹೇಳಿಕೊಂಡು ಕೊರಗಿದ್ದಾನೆ. ಆದರೆ ಈ ಬಡ ಕುಟುಂಬದ ಅತಿಥ್ಯ ಸ್ವೀಕರಿಸಿದ ಮನೆಯಳಿಯ, ಆತನಿಗಾಗಿ ಮಾಡಿದ ಬಾಡು ಮತ್ತು ಹೋಳಿಗೆ... ಇದಕ್ಕಾಗಿ ನಾನು ಕೃತಜ್ಞ.




ಪಿ. ಲಂಕೇಶ್

ಮೇ 27, 1990

ಚಾಡಿ ಮಾತು ಕೇಳಿ!

ಆತ ಗಟ್ಟಿಯಾಗಿ ಕೂಗುತ್ತಿದ್ದ. "ಸಾಹೇಬ್ರು ಚಾಡಿ ಮಾತು ಕೇಳಿಕೊಂಡು ನನ್ನನ್ನ ಬೈತಾರೆ... ಸತ್ಯ ಅವರಿಗೇ ಗೊತ್ತಾಗುತ್ತೆ!"

ನಾನು ಇಲ್ಲಿ ಸಾಹೇಬ. ಈ ತರಹೆಯ ಮಾತು ಕೇಳಿಕೇಳಿ ತಲೆ ಚಿಟ್ಟು ಹಿಡಿದಿತ್ತು, ಅವನನ್ನು ಕರೆದೆ, ಆತ ಹೇಳುತ್ತಿದ್ದುದನ್ನು ಮತ್ತೊಮ್ಮೆ ಹೇಳಲು ಹೇಳಿದೆ. ಹೆದರಿಕೊಂಡು ನಿಂತ. ನಾನು ತಣ್ಣಗೆ ಹೇಳಿದೆ: "ನೋಡು, ನಾನು ಚಾಡಿ ಮಾತು ಕೇಳಿರೋದು ನಿಜ. ವಿಷಯ ಪೂರ್ತಿ ತಿಳಿದುಕೋ. ಬೆಂಗಳೂರು ಬಸ್‌ಸ್ಟಾಂಡಿನಲ್ಲಿರುವ ನಮ್ಮ ಪುಸ್ತಕದ ಅಂಗಡಿಯಲ್ಲಿ ಪುಸ್ತಕ ಕೊಳ್ಳುವಾಗ ಗಿರಾಕಿಯೊಬ್ಬರು ತಮ್ಮ ಮಕ್ಕಳ ಹೊಸಬಟ್ಟೆ ಇರುವ ಬ್ಯಾಗ್ ಬಿಟ್ಟುಹೋದರು. ಅದು ಅಂಗಡಿಯಲ್ಲಿ ಹಲವು ಗಂಟೆ ಇದ್ದುದನ್ನು ನಿನ್ನೊಂದಿಗೆ ಅಂಗಡಿಯಲ್ಲಿ ಕೆಲಸ ಮಾಡುವ ಎಲ್ಲರೂ ನೋಡಿದ್ದಾರೆ. ಬ್ಯಾಗ್ ಕಳೆದುಕೊಂಡ ಗಿರಾಕಿ ಬ್ಯಾಗ್‌ಗಾಗಿ ಬಂದು ಕೇಳಿದರೆ ಬ್ಯಾಗ್ ಇಲ್ಲ, ಗಿರಾಕಿ ರೇಗಿ, ಶಪಿಸಿ ಹೋಗಿದ್ದಾನೆ. ನಾನು ಎಲ್ಲರೂ ಹೇಳುವುದಕ್ಕೆ ಕಿವಿಗೊಟ್ಟಿದ್ದೇನೆ. ಚಾಡಿ ಮಾತು ಕೇಳಿದ್ದೇನೆ. ಈ ಚಾಡಿ ಮಾತು ಗೂಢಚರ್ಯೆಯ ಮಾತಿನಷ್ಟೇ ಮುಖ್ಯವಾಗಿ ನನಗೆ ಕಂಡಿದೆ."



"ಹಾಗಾದ್ರೆ ಆ ಬ್ಯಾಗ್‌ನ ನಾನು ಕದ್ದಿದ್ದೇನೆ ಅಂತೀರಾ ಸಾರ್?"

ಈ ಪ್ರಶ್ನೆ ಕೇಳುವುದಕ್ಕೆ ಮೊದಲು ಆತ ಯೋಚಿಸಬೇಕಿತ್ತು, ತುಂಬ ದಡ್ಡ. ನನ್ನ ಸಿಟ್ಟು ತಡೆಯಲಾಗದೆ ಕೆನ್ನೆಗೆ ಎರಡು ಕೊಟ್ಟು, "ಚಾಡಿಮಾತು ಎಂಥದು ಅನ್ನೋದು ನಿನಗೇ ಗೊತ್ತಾಗುತ್ತೆ, ಮೂರ್ಖ. ನಾಳೆ ಬೆಳಗ್ಗೆ ಎಲ್ಲ ಬಟ್ಟೆಗಳೊಂದಿಗೆ ಆ ಬ್ಯಾಗ್ ಹಿಂದಿರುಗಿಸದಿದ್ದರೆ ನೀನು ಕೆಲಸದಲ್ಲಿರೋಲ್ಲ, ಹೋಗು" ಅಂದೆ.

ಮಾರನೆ ದಿನ ಆತ ಬ್ಯಾಗ್ ಹಿಂದಿರುಗಿಸಿದ. ಪತ್ರಿಕೆಯಲ್ಲಿ ಆ ಬ್ಯಾಗ್ ಬಗ್ಗೆ ಪ್ರಕಟಿಸಿದೆವು. ಗಿರಾಕಿ ಬಂದು ತೆಗೆದುಕೊಂಡು ಹೋದ.

ಸತ್ಯವನ್ನು ತಿಳಿಯುವ ನೂರಾರು ವಿಧಾನಗಳಲ್ಲಿ ಚಾಡಿ ಒಂದು. ಚಾಡಿ ಹೇಳುವವರು ಯಾರು, ಅವರ ಉದ್ದೇಶವೇನು, ನಿಮ್ಮ ಹಿತ ಅವರಿಗೆ ಬೇಕೆ–ಇದು ಮುಖ್ಯ. ನಾನು ಬಲ್ಲಂತೆ ನಿಮ್ಮನ್ನು ಶೋಷಿಸದೆ ನಿಮ್ಮನ್ನು ಪ್ರೀತಿ ಮಾಡುವವರು, ನಿಮ್ಮ ವಿನಾಶದ ಬಗ್ಗೆ ಹೆದರಿಕೆ ಇರುವವರು, ನೀವು ನಂಬುವ ಮೌಲ್ಯಗಳ ಪ್ರಾಮುಖ್ಯ ಅರಿತವರು–ಇಂಥವರು ಹೇಳುವುದು ಚಾಡಿಯಲ್ಲ, ಸತ್ಯಸಂಗತಿ. ಇವರು ನಿಜಕ್ಕೂ ನಿಮ್ಮ 'ಇಂಟಲಿಜನ್ಸ್' ಬೇಹುಗಾರರು. ನನ್ನಂಥ ಸಣ್ಣ ಉದ್ದಿಮೆಯ ಮನುಷ್ಯನಿಂದ ಹಿಡಿದು ಗಾಂಧೀಜಿಯಂಥ ರಾಷ್ಟ್ರಪಿತನಿಗೆ ಕೂಡ ಚಾಡಿ ಮುಖ್ಯ.

ಅವಳು

ಅವಳು ಕಡಲ ಅಲೆ
ಮನವ ಮುಟ್ಟಿ
ಮರಳಿ ಹೋಗಿದ್ದಾಳೆ.

ಅವಳನ್ನು ನೋಡಿದ ಮನ
ತೂಗುಸೇತುವೆಯಾಯಿತು
ಅಂಬರಗುಬ್ಬಿಯಾಯಿತು.

ಅವಳು ಮೊದಲ ಸ್ವಾತಿಹನಿ
ನನ್ನ ಕಣ್ಣ ಚಿಪ್ಪಿನಲ್ಲಿ
ಮುತ್ತಾಗಿ ಅರಳಿದ್ದಾಳೆ.

ಸೂರ್ಯ ರವಾನಿಸಿದ್ದಾನೆ
ಗೇರು ಮರಗಳ ಮಧ್ಯೆ
ಸಡೆವ ಅವಳ ಚಿತ್ರ

ಆಗಸದಲ್ಲಿ ಮೂಡಿದ
ಚುಕ್ಕಿಗಳು ಅವಳ
ನೆನಪನ್ನು ಚೆಲ್ಲುತ್ತಿವೆ.

ಅವಳೊಂದು
ಚೈತನ್ಯದ ಚಿಲುಮೆ
ಒಂದು ಹನಿ ನಾನು.

ಅವಳ ಮಾತಲ್ಲಿ
ಕವಳೆ ಹಣ್ಣಿನ ಸಿಹಿ ಇದೆ
ಆಗಾಗ ಒಗರೂ ಸಹ


ಅವಳ ಮನದಲ್ಲಿ
ಸುರಿಯುತ್ತಿರುವ ಮಳೆಗೆ
ಮೈಯೊಡ್ಡಿ ತಂಪಾದೆ

ಅವಳ ಹೃದಯದ ಎದುರು
ನಿಂತಿದ್ದೇನೆ
ಯಾವ ಕವಾಟಗಳು ತೆರೆಯುತ್ತಿಲ್ಲ.

ಅವಳು
ಏಕವಚನವಾಗಲಿಲ್ಲ
ಬಹುವಚನದಲ್ಲೇ ಉಳಿದಳು.


ಎಳೆಯ ಸೂರ್ಯ
ನೋಡುತ್ತಿದ್ದಾನೆ ನಮ್ಮಿಬ್ಬರನ್ನು
ನಾವು ಮಾತ್ರ ದೂರ....

ಡಾ.ಸಿ.ರವೀಂದ್ರನಾಥ್



(2 ನೇ ಪುಟದಿಂದ)

ವಿಧಿಸಿರುವ ಎಕ್ಸೈಸ್ ಸುಂಕ ವಿನಾಯಿತಿ ಇತ್ಯಾದಿಗಳನ್ನು ಹಲವಾರು ಕಂಪನಿಗಳು ತಮ್ಮ ಗ್ರಾಹಕರಿಗೇ ವರ್ಗಾಯಿಸಿ ಲಾಭ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ. ಉದಾಹರಣೆಗೆ ಮಾರುತಿ ಆಟೊಮೊಬೈಲ್ಸ್ ಕಂಪನಿ ಈ ಸುಂಕ ರಿಯಾಯಿತಿಯಿಂದಾಗಿ ತನ್ನ ಕಾರುಗಳನ್ನು 6,500 ರೂ. ಇಂದ 18,030 ರೂ.ಗಳಷ್ಟು ಅಗ್ಗದ ದರದಲ್ಲಿ ಗ್ರಾಹಕರಿಗೆ ಮಾರುವ ನಿರ್ಧಾರ ಮಾಡಿದೆ. ಅದೇ ರೀತಿ ಹುಂಡೈ ಮೋಟಾರ್ ಕಂಪನಿ ತನ್ನ ಸ್ಯಾಂಟ್ರೋ ಮಾಡೆಲ್ ಕಾರುಗಳನ್ನು 13,278-16,324 ರೂ.ಗಳಷ್ಟು ಕಡಿಮೆ ದರಕ್ಕೆ ಮಾರುವ ಯೋಜನೆ ರೂಪಿಸಿ ಗ್ರಾಹಕರನ್ನು ಸೆಳೆಯುವ ತಂತ್ರ ಹೂಡಿದೆ. ಹೀಗಾಗಿ ಉದ್ಯಮಿಗಳು ಸಾಲಮನ್ನಾ ಯೋಜನೆಯ ಬಗ್ಗೆ ಪ್ರಾರಂಭದಲ್ಲಿ ಅಲ್ಪಸ್ವಲ್ಪ ಗೊಣಗಾಡಿದರೂ ಒಟ್ಟಾರೆಯಾಗಿ ಈ ಬಜೆಟ್ಟನ್ನು ಮೆಚ್ಚಿಕೊಳ್ಳುತ್ತಿದ್ದಾರೆ.



ಇದೇ ಈ ಬಜೆಟ್ಟಿನ ಅಸಲೀ ಹೂರಣ. ಬೇಡಿಕೆಯ ಹಿಂದ್ಸರಿತದಿಂದ ಕಂಗಾಲಾಗಿದ್ದ ಉದ್ಯಮಿಗಳಿಗೆ ಮಾರುಕಟ್ಟೆ ಗಳಿಸಿಕೊಟ್ಟು ಅವರನ್ನು ಉಳಿಸುವ ಬಜೆಟ್ ಇದಾಗಿದೆ. ಸಾಲಮನ್ನಾದ ಒಟ್ಟು ಮೊತ್ತವೂ ಸಹ ಸಾರಾಂಶದಲ್ಲಿ ಇದೇ ಯೋಜನೆಗೆ ಪೂರಕವಾಗುತ್ತದೆ.

ಹಣಕಾಸು ಮಂತ್ರಿ ಚಿದಂಬರಂ ತಮ್ಮ ಸಾಲಮನ್ನಾ ಯೋಜನೆಯನ್ನು ಘೋಷಿಸುತ್ತಾ ತಾನು ಈ ನಿಲುವಿಗೆ ಬರಲು ರೈತರ ಸಾಲಬಾಧೆಯ ಬಗ್ಗೆ ಅಧ್ಯಯನ ಮಾಡಲು ನೇಮಿಸಿದ್ದ ಪ್ರೊ.ರಾಧಾಕೃಷ್ಣನ್ ವರದಿಯೇ ಕಾರಣವೆಂದು ಹೇಳಿದರು. ಆದರೆ ಅದೇ ಸಮಯದಲ್ಲಿ ಆ ವರದಿ ಹೇಳದೇ ಬಿಟ್ಟಿದ್ದ ಸಾಲಮನ್ನಾ ಕಾರ್ಯಕ್ರಮ ವನ್ನು ತಾನು ಅನುಷ್ಠಾನಕ್ಕೆ ತರುತ್ತಿರುವುದಾಗಿ ಹೇಳಿದರು. ಆದರೆ ರಾಧಾಕೃಷ್ಣನ್ ಸಮಿತಿ ಹೇಳಿದ ಮತ್ತೊಂದು ಪ್ರಮುಖ ಶಿಫಾರಸ್ಸಿನ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ.

ಆ ವರದಿಯಲ್ಲಿ ಪ್ರಮುಖವಾಗಿ ಪ್ರಸ್ತಾಪಿತವಾದದ್ದು:

- ಈವರೆಗೆ ಸಾಂಸ್ಥಿಕ ಸಾಲದ ಜಾಲದಿಂದ ಹೊರಗಡೆ ಉಳಿಸಲ್ಪಟ್ಟವರನ್ನು ಬಡ್ಡಿ ವ್ಯಾಪಾರಿಗಳ ಸಾಲದ ಜಾಲದಿಂದ ಹೊರತಂದು ಒಳಗೊಳ್ಳುವುದು. ಯುಪಿಎ ಸರ್ಕಾರ ಘೋಷಿಸಿರುವ ಸಾಲಮನ್ನಾದ ಫಲಾನುಭವಿಗಳು ಮಧ್ಯಮ ರೈತರೇ ವಿನಃ ಈ ಸಣ್ಣ ರೈತರಲ್ಲವೇ ಅಲ್ಲ. ಹಾಗೂ ಸಾಲದ ಬಾಧೆ ತಡೆಯದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರು ಸಹ ಈ ವರ್ಗದ ರೈತರೇ ಆಗಿದ್ದಾರೆ.
- ಅದೇರೀತಿ ಅವರನ್ನು ಸಾಂಸ್ಥಿಕ ಸಾಲದ ವಲಯದೊಳಕ್ಕೆ ತರಬೇಕೆಂದರೆ ಶೇ.4ರ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕೆಂಬ ಶಿಫಾರಸ್ಸೂ ಸಹ ಪರಿಗಣಿತವಾಗಿಲ್ಲ. ಮಾತ್ರವಲ್ಲ ಅದರ ಬಗ್ಗೆ ನಿರ್ದಿಷ್ಟವಾಗಿ ಕೇಳಿದ ಪ್ರಶ್ನೆಗೆ ಯಾವ ಕಾರಣಕ್ಕೂ ಶೇ.4ರ ಬಡ್ಡಿ ದರದಲ್ಲಿ ಸಾಲ ಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.
- ಆ ವರದಿಯ ಮೂರನೇ ಸಲಹೆ ಬೆಲೆ ಬಿಕ್ಕಟ್ಟು ನಿವಾರಣಾ ನಿಧಿಯ ರಚನೆ. ಅದರ ಮೂಲಕ ಬೆಳೆದ ಬೆಳೆಯ ಬೆಲೆಯು ದಿಢೀರ್ ಕುಸಿದಾಗ ಸಣ್ಣ ರೈತರ ಸಹಾಯಕ್ಕೆ ಬರುವಂತೆ ಈ ನಿಧಿಯನ್ನು ರಚಿಸುವ ಬಗ್ಗೆ ಕೇಂದ್ರ ಸರ್ಕಾರ ಏನನ್ನೂ ಹೇಳಿಲ್ಲ.
- ಅದೇರೀತಿ ಪ್ರಧಾನಿಯವರು ಆತ್ಮಹತ್ಯೆ ಪೀಡಿತ 30 ಜಿಲೆಗಳಿಗೆ ಕೊಟ್ಟ 6,000 ಕೋಟಿ ಪ್ಯಾಕೇಜನ್ನು ಒಟ್ಟು 100 ಜಿಲ್ಲೆಗಳಿಗೆ ವಿಸ್ತರಿಸಿ ಅಲ್ಲಿ ಎಲ್ಲಾ ಬಗೆಯ ಕೃಷಿ ಪುನಶ್ಚೇತನಾ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಬಗ್ಗೆಯೂ ಕೇಂದ್ರ ಸರ್ಕಾರ ಯಾವುದೇ ಯೋಜನೆ ಪ್ರಕಟಿಸಿಲ್ಲ.

ಹಾಗೆಯೇ ಬಡ್ಡಿ ವ್ಯಾಪಾರಿ ನಿಯಂತ್ರಣಾ ಕಾಯಿದೆಯನ್ನು ಜಾರಿಗೆ ತರುವ ಬಗ್ಗೆಯೂ ಈ ಸರ್ಕಾರ ಯಾವುದೇ ಭರವಸೆ ನೀಡಿಲ್ಲ. ಸಿಪಿಎಂ ಅನ್ನು ಒಳಗೊಂಡಂತೆ ಯಾವುದೇ ಪಕ್ಷವೂ ಇದರ ಬಗ್ಗೆ ಒತ್ತಾಯ ಹಾಕುತ್ತಿಲ್ಲ.

ಅದೇರೀತಿ ಈ ಸಾಲ ಮನ್ನಾದಿಂದ ಉಂಟಾಗುವ ಆರ್ಥಿಕ ಹೊರೆಯನ್ನು ಯಾರ ಮೇಲೆ ವರ್ಗಾಯಿಸಲಾಗುತ್ತದೆ ಎಂಬ ಬಗ್ಗೆ ಯಾವುದೇ ಸೂಚನೆಯನ್ನು ಬಜೆಟ್ಟಿನಲ್ಲಿ ನೀಡಲಾಗಿಲ್ಲ. ಬಜೆಟ್ ಮಂಡಿಸಿದ ನಂತರ ಇತ್ತೀಚೆಗೆ ಸದನದಲ್ಲಿ ಹೇಳಿಕೆ ನೀಡುತ್ತಾ ಒಟ್ಟು 60,000 ಕೋಟಿ ರೂಪಾಯಿಯಲ್ಲಿ 25,000 ಕೋಟಿ ರೂಪಾಯಿಗಳನ್ನು ಈ ಆಯವ್ಯಯ ವರ್ಷದಲ್ಲೂ, 2009-10 ರ ಬಜೆಟ್ಟಿನ ಸಾಲಿನಲ್ಲಿ 15,000 ಕೋಟಿ ರೂ.ಗಳನ್ನು, 2010-11ರಲ್ಲಿ 12,000 ಕೋಟಿ ರೂ.ಗಳನ್ನು ಮತ್ತು 2011-12ರಲ್ಲಿ 8,000 ಕೋಟಿ ರೂ.ಗಳನ್ನು ಬ್ಯಾಂಕುಗಳಿಗೆ ಸಂದಾಯ ಮಾಡುವುದಾಗಿ ಹೇಳಿದ್ದಾರೆ. ಆದರೆ 'ಯಾವ ಮೂಲಗಳಿಂದ ಇಷ್ಟು ಹೆಚ್ಚುವರಿ ಹಣವನ್ನು ರೂಢಿಸಿಕೊಳ್ಳಲಾಗುವುದು ಎಂಬ ಪ್ರಶ್ನೆಗೆ ಈಗಲೂ ಸರಿಯಾದ ಉತ್ತರವನ್ನು ನೀಡುತ್ತಿಲ್ಲ. ಅವರು ಸದನದಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ ಅಷ್ಟು ಹಣವನ್ನು ತೆರಿಗೆ ಮೂಲದಿಂದ, ಅಥವಾ ತೆರಿಗೆಯೇತರ ಮೂಲದಿಂದ ಅಥವಾ ಅಗತ್ಯ ಬಿದ್ದರೆ ಸಾಲ ಎತ್ತುವ ಮೂಲಕ ಭರಿಸುವುದಾಗಿ ಹೇಳಿದ್ದಾರೆ.

ಇದರರ್ಥವಿಷ್ಟೆ: ಜನರ ಮೇಲೆಯೇ ತೆರಿಗೆ ಹೇರುವ ಮೂಲಕ ಅಥವಾ ಸರ್ಕಾರಿ ಆಸ್ತಿಯನ್ನು ಮಾರುವ ಮೂಲಕ ಅಥವಾ ಜನರಿಂದಲೇ ಸಾಲ ಎತ್ತುವ ಮೂಲಕ ಈ ಹಣವನ್ನು ರೂಢಿಸಿಕೊಳ್ಳಲಿದ್ದಾರೆ. ಮಾತ್ರವಲ್ಲ, ಹಲವಾರು ಬಾರಿ ಬೆಳೆ ವಿಮೆಗೆ ಅರ್ಹರಾದ ವ್ಯಕ್ತಿ ಈ ಸಾಲಮನ್ನಾದಲ್ಲಿ ಫಲಾನುಭವಿಯಾಗಿದ್ದರೆ ಆ ವಿಮೆ ಹಣವನ್ನು ಸಾಲಮನ್ನಾ ಖಾತೆಗೆ ಜಮಾ ಮಾಡಿಕೊಳ್ಳಲಾಗುತ್ತದೆ.

ಇವೆಲ್ಲ ರೈತರಿಗೆ ಅರ್ಥವಾಗುವ ಹೊತ್ತಿಗೆ ಚುನಾವಣೆ ಮುಗಿದುಹೋಗಿರುತ್ತದೆ!!!

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rules, 1956.

FORM - IV

(See Rule 8)

1.	Place of Publication	:	Bangalore
2.	Periodicity of Publication	:	Weekly
3.	Printer's Name Whether Citizen of India? Address	:	Gauri Lankesh Yes No. 9, E.A.T. Street Basavanagudi, Banglaore -560 004
4.	Publisher's Name Whether Citizen of India? Address	:	Gauri Lankesh Yes No. 9, E.A.T. Street Basavanagudi, Banglaore -560 004
5.	Editor's Name Whether Citizen of India? Address	:	Gauri Lankesh Yes No. 9, E.A.T. Street, Basavanagudi, Banglaore -560 004

I, Gauri Lankesh, hereby declare that the particulars given above are true to the best of my knowledge and belief.

Date : 16.3.2008

Sd/-
GAURI LANKESH


ಹೊಗೇನಕಲ್ ವಿವಾದ ಜನತೆಯನ್ನು ಎಚ್ಚರಿಸಬೇಕಿದೆ

ಒಂದು ಕಡೆ ನೋಡಿದರೆ ಮೀಸಲು ಅರಣ್ಯದ ಹೆಸರು ಹೇಳಿಕೊಂಡು ಹಲವಾರು ಬಡ ಕುಟುಂಬಗಳನ್ನು ಒಕ್ಕಲೆಬ್ಬಿಸಿ ಬೀದಿಪಾಲು ಮಾಡುವ ಕಾರ್ಯ ನಡೆಯುತ್ತಿದೆ. ಇದರ ವಿರುದ್ಧ ಯಾರೇ ದನಿ ಎತ್ತಿದರೂ ಸರ್ಕಾರದ ರೂವಾರಿಗಳಿಗೆ ಕೇಳಿಸುತ್ತಿಲ್ಲ. ಆದರೆ ಮೀಸಲು ಅರಣ್ಯವಿರುವ ಪ್ರದೇಶಗಳಲ್ಲೇ ಇದೀಗ ಪ್ರವಾಸಿ ರೆಸಾರ್ಟ್‌ಗಳನ್ನು ನಿರ್ಮಿಸಲು ಸರ್ಕಾರ ಅನುಮತಿ ನೀಡುತ್ತಿದೆ. ಈ ರೆಸಾರ್ಟಗಳನ್ನು ನಿರ್ಮಿಸುವುದರಿಂದ ಕಾಡು, ಹುಲ್ಲುಗಾವಲು, ಪ್ರಾಣಿಪಕ್ಷಿಗಳಿಗೆ ಧಕ್ಕೆಯಾಗುವುದಿಲ್ಲವೇ? ಇವತ್ತು ಬಾಬಾಬುಡನ್‌ಗಿರಿ ಶ್ರೇಣಿಯ ಅರಿಶಿಣಗುಪ್ಪೆ ಬಳಿ ಐಷಾರಾಮಿ ಕೊಠಡಿಗಳ ರೆಸಾರ್ಟ್ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಪ್ರದೇಶದಲ್ಲಿ ರೆಸಾರ್ಟ್ ನಿರ್ಮಿಸುವುದು ಸೂಕ್ತವಲ್ಲವೆಂದು ಅರಣ್ಯ ಇಲಾಖೆ ಹೇಳಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕೆ ಅರಣ್ಯ ಸಂರಕ್ಷಣಾ ಕಾಯ್ದೆ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಮಾಡಲಾಗಿದೆ.

ಬಡವರ ಭೂಮಿಯನ್ನು ಅಕ್ರಮ ಭೂಮಿಯೆಂದು ಪರಿಗಣಿಸುವ ಆಡಳಿತ ವ್ಯವಸ್ಥೆಯೇ ಈಗ ಅಕ್ರಮ ಯೋಜನೆಗಳನ್ನು ಮಾಡತೊಡಗಿದ್ದು, ಇದನ್ನು ನಾಡಿನ ಎಲ್ಲಾ ಪ್ರಜ್ಞಾವಂತರು ವಿರೋಧಿಸುವ, ಪ್ರತಿಭಟಿಸುವ ಅಗತ್ಯವಿದೆ.

-ಕಿರುಗುಂದ ರಫೀ, ಮೂಡಿಗೆರೆ



'ಯಾದವರ ಮಠದಲ್ಲಿ ಪೇಜಾವರ ದಬ್ಬಾಳಿಕೆ' ವರದಿ ಓದಿದೆ. ಯಾದವ ಜನಾಂಗದ ಶ್ರೀ ಬಸವ ಯಾದವಾನಂದ ಸ್ವಾಮೀಜಿಗೆ ಪಟ್ಟಾಭಿಷೇಕ ಚಿತ್ರದುರ್ಗದಲ್ಲಿ ನಡೆದದ್ದು, ಆ ಸಮಾರಂಭಕ್ಕೆ ಕರೆಯದೇ ಅತಿಥಿಯಾಗಿ ಬಂದಿದ್ದ ಪೇಜಾವರ ಶ್ರೀಗಳಿಗೆ ನಾಚಿಕೆ ಇಲ್ಲವೇ? ಗೊಲ್ಲರಿಗೂ, ಕುರುಬರಿಗೂ, ಹಿಂದುಳಿದವರಿಗೂ, ದಲಿತರಿಗೂ ಹಾಗೂ ಅಲ್ಪಸಂಖ್ಯಾತರಿಗೂ ಸದಾ ನಂಟು. ಆದರೆ ಇವರ ಜೊತೆ ಪುರೋಹಿತ ವೈದಿಕ ಬ್ರಾಹ್ಮಣಶಾಹಿಗಳಿಗೆ ಎತ್ತಣದಿಂದ ಸಂಬಂಧವಯ್ಯಾ ಕೂಡಲ ಸಂಗಮದೇವಾ!

ವೈದಿಕ ಪುರೋಹಿತನಿಗೆ ಬಸವನನ್ನು ತೆಗೆದು ಶ್ರೀಕೃಷ್ಣ ಎಂಬ ನಾಮಾಂಕಿತವನ್ನು ಸೇರಿಸಿದ ಮಾತ್ರಕ್ಕೆ ದಲಿತರ ಉದ್ಧಾರ ಸಾಧ್ಯವೇ? ಅಥವಾ ಗೊಲ್ಲರ, ಕುರುಬರ ಸಮಾಜದ ಉದ್ಧಾರ ಸಾಧ್ಯವೇ? ದೀನದಲಿತರ, ಅಲ್ಪಸಂಖ್ಯಾತರ ಉದ್ಧಾರ ಸಾಧ್ಯವೇ? ಶ್ರೀಕೃಷ್ಣನ ಪರಮಾತ್ಮ ಭಕ್ತ-ಕನಕನ ಗೋಪುರವನ್ನು ವೈದಿಕರು ಕೆಡವಿದಾಗ ಇವರೇನು ಮಾಡುತ್ತಿದ್ದರು?

ಆದರೆ ಇಲ್ಲೂ ಇವರು ಮೂಗು ತೂರಿಸುವುದೇಕೆ? ಇವರೇನು ಜಗದೋದ್ಧಾರಕರೇ? ಕೇವಲ ಬ್ರಾಹ್ಮಣ ಹಿತೈಷಿಗಳು, ಕೇವಲ ಅವರ ಉದ್ಧಾರಕರು. ಸ್ವಜನಪಕ್ಷಪಾತಿಗಳು. ಇವರ ಚೇಷ್ಟೆಗಳಿಗೆ ಶೂದ್ರ ಸ್ವಾಮಿಗಳು ಬಲಿಯಾಗದಂತೆ ಈಗಲಾದರೂ ಎಚ್ಚರವಿರಲಿ.

-ಡಿ.ಎಲ್.ನಾಗರಾಜ್, ಹರಪನಹಳ್ಳಿ

ತೀಸ್ತಾ ಸೆತಲ್‌ವಾಡ್‌ರವರು ಸುಪ್ರೀಂಕೋರ್ಟಿನ ಬಗ್ಗೆ ಎತ್ತಿರುವ ಪ್ರಶ್ನೆಗಳು ಗಮನಾರ್ಹವಾದವು. ಭಾರತದ ಸಂವಿಧಾನ ಮೂಲಭೂತ ಹಕ್ಕುಗಳ ರಕ್ಷಕನ ಜವಾಬ್ದಾರಿಯನ್ನು ಅಂತಿಮವಾಗಿ ಸುಪ್ರೀಂಕೋರ್ಟಿಗೆ ನೀಡಿದೆ. ಅದು ನಾಗರಿಕರಿಗೆ ಲಭ್ಯವಾಗುವ ಅಂತಿಮ ಆಶಾಕಿರಣ ತಮ್ಮ ಹಕ್ಕುಗಳ ರಕ್ಷಣೆಗೆ. ಸುಪ್ರೀಂಕೋರ್ಟಿನ ತೀರ್ಮಾನಗಳು ಕೆಲವೊಮ್ಮೆ ವಿರೋಧಾಭಾಸಗಳನ್ನು ಸೃಷ್ಟಿಸಿರುವುದು ನಿಜ. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ನಿರ್ದಿಷ್ಟವಾಗಿ 1976ರಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ನ್ಯಾಯಮೂರ್ತಿ ಎಚ್.ಆರ್. ಖನ್ನಾರವರು ವ್ಯಕ್ತಪಡಿಸಿದ ಅಭಿಪ್ರಾಯ ನಮಗೆ ಪ್ರೇರಕಶಕ್ತಿಯಾಗಬೇಕು. ಆದ್ದರಿಂದ ನ್ಯಾಯಮೂರ್ತಿಗಳು ತೀಸ್ತಾರವರು ಎತ್ತಿರುವ ಪ್ರಶ್ನೆಗಳನ್ನು Natural justice ನ ಆಳವಾದ ನೆಲೆಯಲ್ಲಿ ಗ್ರಹಿಸಿ ನ್ಯಾಯವನ್ನು ಯಾವುದೇ ಪೂರ್ವಾಗ್ರಹಗಳಿಂದ ಮುಕ್ತವಾಗಿ ಎತ್ತಿ ಹಿಡಿಯಬೇಕು. ನ್ಯಾಯಾಂಗದಲ್ಲಿಟ್ಟಿರುವ ಅಚಲ ನಂಬಿಕೆಯೇ ಈ ತೆರನಾದ ಪ್ರಶ್ನೆಗಳನ್ನು ಕೇಳಲು ಪ್ರೇರೇಪಿಸುವುದೇ ಹೊರತು ಅವಮಾನ ಮಾಡುವುದಕ್ಕಲ್ಲ. ಪ್ರಶ್ನಿಸುವ ಮನೋಧರ್ಮದ ಸದಾಶಯ ಮನವರಿಕೆಯಾದಾಗ ವ್ಯವಸ್ಥೆಯೂ ಜನಪರವಾಗುತ್ತದೆ. ಉತ್ತರ ನೀಡುವುದು ಜವಾಬ್ದಾರಿಯ ಮಾನದಂಡವಾಗುತ್ತದೆ.

-ವಿದ್ಯಾಧರ ರೈ, ಮಡಿಕೇರಿ

ಇತಿಹಾಸಗಳನ್ನು ತಿರುಚುವ ಪ್ರಥಮ ಪ್ರವರ್ತಕ ವೀರ(!) ಸಾವರ್ಕರ್ ಪರಿಣಾಮವು ಅವರು ಕಂಡಂತೆ (ನಾವು ಕಾಣುವಂತೆ) ಹಿಂದೂತ್ವದ ಬಿರುಗಾಳಿಯು ಮನುಷ್ಯ ಮನುಷ್ಯರೊಳಗೆ ವೈಷಮ್ಯದ ಕಿಡಿಯನ್ನು ಹೊತ್ತಿಸಿದೆ. ಅದನ್ನು ಕಂಡೂಕಾಣದಂತಿರುವವರು ಬಾಯಿಗೆ ಬೀಗವನ್ನು ಬಿಗಿಸಿಕೊಂಡಿದ್ದಾರೆ. ನಾವು ಸುಖವಾಗಿದ್ದರೆ ಸಾಕು ಎನ್ನುವ ಭಾವನೆಯವರಿಗೆ ನಾವೆಲ್ಲಿದ್ದೇವೆ ಎನ್ನುವುದು ಮರೆತುಹೋಗಿದೆಯೋ ಇಲ್ಲ ಹಾಗೆ ನಟಿಸುತ್ತಿರುವರೋ ಎನ್ನುವುದೋ ಗೊತ್ತಾಗುತ್ತಿಲ್ಲ. ಕನ್ನಡ ಕವಿ ನಿಸಾರ್ ಅಹಮದ್‌ರ ಕವಿತೆಗಳನ್ನು ಹಾಡಲು ಚೆಡ್ಡಿ ಗಾಯಕರ ವಿರೋಧ ಅದಕ್ಕೆ ನಿದರ್ಶನ.

ರಾಮಭಕ್ತರಿಗೆ-ಮುನ್ನೂರು ರಾಮಾಯಣಗಳ ಸಂಪಾದಕ ಎ.ಕೆ. ರಾಮಾನುಜರವರೇ ರಾಮ ವಿರೋಧಿಯಾಗಿದ್ದಾರೆ. ಇದನ್ನು ಏನೆಂದು ಕರೆಯೋಣ?

ಜನಜಾಗೃತಿಯ ಸಾರಥ್ಯವನ್ನು ಪತ್ರಿಕೆಯು ನಿರ್ವಹಿಸುತ್ತಿದೆ. ಅದು ಸಂದರ್ಭೋಚಿತ ಸಾರ್ಥಕವಾಗಿದೆ.

-ಪಿ. ಗೋಕುಲ್‌ದಾಸ್, ಮಂಗಳೂರು

ಚೆಕ್ಕಮಾಳಿಗೆ ಕೊಳ್ಳೇಗಾಲ ಅವರು ಬರೆದ 'ಹೊಗೇನಕಲ್ ವಿವಾದ ತಮಿಳುನಾಡಿನ ಮತ್ತೊಂದು ಕಿತಾಪತಿ' ಎಂಬುದು ಎಲ್ಲರೂ ಬಲ್ಲ ವಿಚಾರವೇ. ಅದು ನಮ್ಮ ಜನಪರ, ರೈತ ಸಂಘಟನೆಗಳನ್ನು ಕೆರಳಿಸಿದೆ. ಅದನ್ನು ಚಾಮರಾಜನಗರ ಜಿಲ್ಲೆಯ ಜನ ಸದ್ಯ ಸಾಂಕೇತಿಕವಾಗಿ ಪ್ರತಿಭಟಿಸಿದ್ದಾರೆ. ಆದರೆ ಇದು ಇಷ್ಟು ಸಾಲದು. ಅವರ ಕಿತಾಪತಿ ಯನ್ನು ರಾಜ್ಯಮಟ್ಟದಲ್ಲಿ ಪ್ರತಿಭಟಿಸಿ, ನ್ಯಾಯ ಕೇಳಬೇಕಾಗಿದೆ. ಹೊಗೇ ನಕಲ್ ನಡುಗಡ್ಡೆ ಪ್ರದೇಶ ಎರಡೂ ರಾಜ್ಯಗಳ ನಡುವೆ ಇನ್ನೂ ವಿವಾದಗ್ರಸ್ತವಾಗಿಯೇ ಉಳಿದಿದೆ. ಆದರೂ ತಮಿಳುನಾಡು ಸರ್ಕಾರ ಫೆ. 26 ರಂದು ಜಪಾನ್ ಸಹಯೋಗದೊಂದಿಗೆ ಅಲ್ಲಿ ಕುಡಿಯುವ ನೀರಿಗೆಂದು ಸುಮಾರು 1340 ಕೋಟಿ ಅಂದಾಜಿನ ಕಾಮಗಾರಿಗೆ ನಿರಾತಂಕ ಅಕ್ರಮ ಶಂಕುಸ್ಥಾಪನೆ ನೆರವೇರಿಸಿದೆ; ಅದೂ ಕಾವೇರಿ ನ್ಯಾಯಾಧೀಕರಣ ಆ ರಾಜ್ಯಕ್ಕೆ ನೀರು ಹರಿಸುವ ಪ್ರಮಾಣವನ್ನು ನಿಗದಿಗೊಳಿಸಿರುವ ಬಿಳಿಗುಂಡ್ಲು ಜಲಾಶಯಕ್ಕಿಂತ ಮೇಲೆ.

ನಾವು ಕಾವೇರಿ ಕಣಿವೆ ಪ್ರದೇಶದಲ್ಲಿ ಒಂದು ತುಂಡು ಕಾಲುವೆ ತೋಡಿಕೊಳ್ಳಬೇಕಾದರೂ ಟ್ರಿಬ್ಯೂನಲ್ ಅನುಮತಿ ಪಡೆಯಬೇಕೆಂದು ಕೂಗೆಬ್ಬಿಸುವ ಆ ರಾಜ್ಯ ನಮ್ಮಲ್ಲಿ ಚುನಾಯಿತ ಸರ್ಕಾರವಿಲ್ಲದ ಸಮಯವನ್ನೇ ಸಾಧಿಸಿ, ಇಷ್ಟು ದೊಡ್ಡಕಾಮಗಾರಿಯನ್ನು ತರಾತುರಿಯಲ್ಲಿ ಹಮ್ಮಿಕೊಂಡಿದೆ ಎಂಬುದು ಸುಸ್ಪಷ್ಟ.

ಈಗ ರಾಷ್ಟ್ರಪತಿ ಆಳ್ವಿಕೆಯಲ್ಲಿರುವ ಕರ್ನಾಟಕಕ್ಕೆ ಎಲ್ಲಿಂದಲೋ ಬಂದಿರುವ ರಾಜ್ಯಪಾಲರಿಗಾದರೂ ಕರ್ನಾಟಕದ ಹಿತ ಕಾಯುವ ದರ್ದು ಎಲ್ಲಿಂದ ಬರಬೇಕು? ಚುನಾಯಿತ ಸರ್ಕಾರ ಬಂದು ನೋಡಿಕೊಳ್ಳಲಿ ಎಂದು ಅವರು ಆಸಕ್ತಿ ತೋರಲಾರರು. ಆದ್ದರಿಂದ ಈಗಲಾದರೂ ರಾಜ್ಯ ಎಂಎಲ್‌ಸಿಗಳು ಹಾಗೂ ಸಂಸದರು ಪಕ್ಷಭೇದ ಮರೆತು ಒಗ್ಗಟ್ಟಾಗಿ ಪ್ರತಿಭಟನೆ ಸಲ್ಲಿಸಿ, ನ್ಯಾಯಾಲಯದ ಮೂಲಕವಾದರೂ ತಮಿಳುನಾಡಿನ ಕಾಮಗಾರಿಯನ್ನು ತಡೆಯಬೇಕು. ಯಾಕೆಂದರೆ ಟ್ರಿಬ್ಯೂನಲ್ ಹೈತೀರ್ಪು ಕರ್ನಾಟಕಕ್ಕೊಂದು ತಮಿಳುನಾಡಿಗೊಂದು ಆಗಬಾರದಷ್ಟೇ!

ಈ ಸಂದರ್ಭದಲ್ಲಿ ರಾಜ್ಯದ ಜನತೆ, ಜನಪರ ಸಂಘಟನೆಗಳು ಹಾಗೂ ರಾಜಕಾರಣಿಗಳು, ಕುಂಭಕರ್ಣ ನಿದ್ದೆಯಿಂದ ಎಚ್ಚೆತ್ತು, ಕೈಮೀರಿ ಹೋಗುವ ಮುನ್ನ ತೀವ್ರ ಪ್ರತಿಭಟನೆಗೆ ಸಜ್ಜಾಗಬೇಕು. ಜೊತೆಗೆ ಜವಾಬ್ದಾರಿ ಸರ್ಕಾರದ ಅಗತ್ಯದ ಬಗ್ಗೆ ಪಾಠ ಕಲಿಯಲೂ ಈ ಘಟನೆ ನೆರವಾಗುವುದೆಂಬುದರಲ್ಲಿ ಸಂಶಯವಿಲ್ಲ. ಇಲ್ಲವಾದರೆ ಇನ್ನೇನು ಕೆಲ ವರ್ಷಗಳಲ್ಲಿಯೇ ನಾವು ನಮ್ಮ ನೆಲ ಜನ, ಭಾಷಾ ಸಂಸ್ಕೃತಿಗಳಿಗೆ ಎರವಾಗಬೇಕಾಗುತ್ತದೆ.

-ಪ್ರೊ. ಶಿವರಾಮಯ್ಯ, ಬೆಂಗಳೂರು

ಇದು ಪ್ರೇಮ್ ಕಹಾನಿ

'ನೀನಾಸಂ' ಎಂಬ ರಂಗ ತಂಡದಲ್ಲಿ ನಟನೆಯನ್ನು ಕಲಿತು, ಶಶಿಕಾಂತ ಯಡಹಳ್ಳಿಯವರ ನಿರ್ದೇಶನದ ನಾಟಕಗಳಲ್ಲಿ ಅಭಿನಯಿಸಿ, ಚಿತ್ರರಂಗ ಪ್ರವೇಶಿಸಿ 'ಒಳ್ಳೆ ಹೀರೋ' ಎನಿಸಿಕೊಂಡು ಅಪಾರ ಮಹಿಳಾ ಅಭಿಮಾನಿಗಳನ್ನು ಹೊಂದಿರುವ ನಟ ಪ್ರೇಮ್. ಆದರೆ ಈ ಪ್ರೇಮ್ ಎಂಬ ಮುದ್ದು ಮುಖದ ನಟ 'ನೆನಪಿರಲಿ' ಚಿತ್ರದ ಯಶಸ್ಸಿನ 'ಜೊತೆಜೊತೆಯಲಿ' ನಾಗಿ 'ಪಲ್ಲಕ್ಕಿ' ಏರಿದ್ದೇ ಬಂತು. ಆನಂತರ ಸಿಕ್ಕಿದ್ದು ಮೂರು ಭರ್ಜರಿ ಸೋಲುಗಳು!

ಇದೀಗ ದಿನೇಶ್ ಬಾಬು ನಿರ್ದೇಶನದ 'ಜನುಮ ಜನುಮದಲ್ಲೂ' ಚಿತ್ರದ ಬಹುತೇಕ ಚಿತ್ರೀಕರಣವನ್ನು ಮುಗಿಸಿರುವ ಪ್ರೇಮ್ ಕೈಯಲ್ಲಿ ಸದ್ಯಕ್ಕಿರುವುದು ಅಶೋಕ್ ಕಶ್ಯಪ್ ನಿರ್ದೇಶಿಸಲಿರುವ 'ಸಿಹಿಮುತ್ತು' ಮಾತ್ರ. ಹಾಗಾದರೆ ಕೇವಲ ಮೂರು ವರ್ಷಗಳ ಹಿಂದೆ ಚಿತ್ರರಂಗಕ್ಕೆ ಎಂಟ್ರಿ ಪಡೆದ ಪ್ರೇಮ್ ಇಷ್ಟು ಬೇಗ ತನ್ನ ತಾರಾಮೌಲ್ಯ ಕಳೆದುಕೊಂಡರೆ? ಮೊನ್ನೆ 'ಲಂಕೇಶ್' ಜೊತೆ ತನ್ನ ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ ಪ್ರೇಮ್ ಮಾತನಾಡಿದ್ದು ಇಲ್ಲಿದೆ....

ಪ್ರೇಮ್ ಎಂಬ ಯಶಸ್ವಿ ನಟ ಬರುಬರುತ್ತಾ ಸೋಲಿನ ಸರಪಳಿಯಲ್ಲಿ ಸಿಲುಕಿರುವುದೇಕೆ? ನಿಮ್ಮ ಕತೆ ಮುಗಿದೇ ಹೋಯ್ತು ಅನ್ನೋ ಮಾತು ಗಾಂಧಿನಗರದಲ್ಲಿ ಕೇಳಿಬರುತ್ತಿದೆಯಲ್ಲಾ?

ಸದ್ಯಕ್ಕೆ ಸೋಲಿನ ಸರಪಳಿಯಲ್ಲಿ ಸಿಲುಕಿರುವುದು ನಿಜ. ಆದರೆ ನನ್ನ ಕತೆ ಇನ್ನೂ ಮುಗಿದಿಲ್ಲ. ನಾನು ಈಗಲೂ ಚಾಲ್ತಿಯಲ್ಲಿದ್ದೇನೆ.

ನಿಮ್ಮ ಸೋಲಿಗೆ ಕಾರಣ?

'ಸವಿಸವಿ ನೆನಪು' ಮತ್ತು 'ಹೊಂಗನಸು' ಕಮರ್ಷಿಯಲ್ಲಾಗಿ ಸೋತಿರಬಹುದು. ಆ ಎರಡೂ ಚಿತ್ರಗಳು ಪ್ರಯೋಗಾತ್ಮಕ ಚಿತ್ರಗಳಾಗಿದ್ದವು. ಹಾಗೆ ನೋಡಿದರೆ, ಗಿರೀಶ್ ಕಾಸರವಳ್ಳಿಯವರಂಥ ಹಿರಿಯ ನಿರ್ದೇಶಕರ ಎಷ್ಟೋ ಸಿನಿಮಾಗಳು ಬಿಡುಗಡೆಯಾಗುವುದೇ ಇಲ್ಲ. ಆ ಲೆಕ್ಕದಲ್ಲಿ ಆ ಎರಡು ಚಿತ್ರಗಳು ಸೋತವು ಎಂದು ನಾನು ಭಾವಿಸುವುದಿಲ್ಲ. ಆ ಚಿತ್ರಗಳ ಸೋಲು ನನ್ನಲ್ಲಿ ಬೇಸರವನ್ನೇನೂ ಮೂಡಿಸಿಲ್ಲ. ಆದರೆ 'ಗುಣವಂತ' ಚಿತ್ರ ಸೋತಿದ್ದನ್ನು ನಾನು ಒಪ್ಪುತ್ತೇನೆ. ನಾನು ಆ ಚಿತ್ರದಲ್ಲಿ ನಟಿಸಿದ್ದೇ ದೊಡ್ಡ ತಪ್ಪು.

ಅದರಲ್ಲಿ ನಟಿಸುವ ಮುನ್ನ ಇದೆಲ್ಲ ಅರಿವಾಗಲಿಲ್ಲವಾ?

'ಗುಣವಂತ' ಚಿತ್ರದ ನಿರ್ದೇಶಕ ರಘುವರ್ಧನ್ ಮೊದಲು ಕತೆ ಹೇಳಿದಾಗ ನಿಜಕ್ಕೂ ಚೆನ್ನಾಗೇ ಹೇಳಿದ್ದರು. ಆದರೆ ಸಿನಿಮಾ ಮುಗಿಸುವ ಹೊತ್ತಿಗೆ ಎಲ್ಲಾ ಗಬ್ಬೆದ್ದು ಕೂತಿತ್ತು. ಜೊತೆಗೆ ಯಾವುದೇ ಪ್ರಚಾರ ಇಲ್ಲದೆ ಏಕಾಏಕಿ ಚಿತ್ರದ ರಿಲೀಸ್‌ಅನ್ನು ಕೂಡಾ ಮಾಡಿದರು. ಇವೆಲ್ಲವೂ ಚಿತ್ರದ ಸೋಲಿಗೆ ಕಾರಣವಾದವು.

ಚಿತ್ರರಂಗದಲ್ಲಿ ನಿಮಗೆ 'ಪ್ರಾಣ' ಕೊಟ್ಟ ಮೊದಲ ಸಿನಿಮಾವನ್ನು ಎಲ್ಲೂ ಹೇಳುವುದಿಲ್ಲ ಎಂಬ ಆಪಾದನೆ ನಿಮ್ಮ ಮೇಲಿದೆಯಲ್ಲಾ?

ನನಗೆ ಚಿತ್ರರಂಗದಲ್ಲಿ ಮೊದಲಿಗೆ ಸ್ಥಾನ ಕಲ್ಪಿಸಿಕೊಟ್ಟದ್ದು 'ಪ್ರಾಣ' ಸಿನಿಮಾ. ಈ ಚಿತ್ರದಲ್ಲಿ ಅವಕಾಶ ಮಾಡಿಕೊಟ್ಟ ಅದರ ನಿರ್ದೇಶಕ ಪ್ರಕಾಶ್‌ರನ್ನು ನಾನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ. ಆದರೆ 'ನೆನಪಿರಲಿ' ಯಶಸ್ವಿಯಾದ್ದರಿಂದ ಎಲ್ಲರೂ ಇದೇ ನನ್ನ ಮೊದಲ ಸಿನಿಮಾ ಎಂದು ಅಪಾರ್ಥ ಮಾಡಿಕೊಂಡಿದ್ದಾರೆ. ನಾನು ಮಾತ್ರ ಎಲ್ಲೂ ನನ್ನ ಮೊದಲ ಸಿನಿಮಾ 'ನೆನಪಿರಲಿ' ಎಂದು ಹೇಳಿಲ್ಲ.

■ *ಯಶಸ್ಸು ಕೈಗೆಟುಕುತ್ತಿದ್ದಂತೇ 'ರಿಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ' ಎಂಬ ಹೇಳಿಕೆ ನೀಡಿದಿರಿ. ಈಗ ಸೋಲಿನಲ್ಲಿ ಸಿಲುಕಿರುವಾಗ ಆ ಹೇಳಿಕೆಯ ಬಗ್ಗೆ ಪಶ್ಚಾತ್ತಾಪವಾಗುತ್ತಿದೆಯಾ?*

ಒಮ್ಮೊಮ್ಮೆ ಹಾಗೆ ಅನ್ನಿಸುತ್ತದೆ. ಆದರೂ ನನ್ನನ್ನು ನಾನೇ ವಿಮರ್ಶಿಸಿಕೊಂಡಾಗ, ನನ್ನ ಹೇಳಿಕೆ ಸರಿ ಎಂದೇ ಎನಿಸುತ್ತದೆ. ಬರೀ ಗೆಲುವಿಗಾಗಿ ಅಥವಾ ಹಣ ಮಾಡುವ ಉದ್ದೇಶದಿಂದ ನನ್ನ ಆದರ್ಶಗಳನ್ನು ಮತ್ತು ನಾನು ನಂಬಿರುವ ಸಿದ್ಧಾಂತಗಳನ್ನು ಬಲಿ ಕೊಡಬಾರದು ಅನ್ನೋದು ನನ್ನ ಅಚಲವಾದ ನಂಬಿಕೆ.

■ *ಈಗ ಬರುತ್ತಿರುವ ಅವಕಾಶಗಳು ಹೇಗಿವೆ?*

ದಿನೇಶ್ ಬಾಬು ಅವರ 'ಜನುಮ ಜನುಮದಲ್ಲೂ' ಚಿತ್ರದ ಟಾಕಿ ಭಾಗ ಮುಗಿಸಿದ್ದೇವೆ. ಎರಡು ಹಾಡುಗಳು ಮಾತ್ರ ಬಾಕಿ ಇವೆ. ಈ ಚಿತ್ರ ತುಂಬಾ ದೊಡ್ಡ ಹಿಟ್ ಆಗುತ್ತದೆ ಎಂಬುದು ನನ್ನ ನಂಬಿಕೆ. ದಿನೇಶ್ ಬಾಬು ಅವರ ನಿರ್ದೇಶನದೊಂದಿಗೆ ಮನೋಮೂರ್ತಿಯವರ ಮ್ಯೂಸಿಕ್ ಈ ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಲಿದೆ. ಸೂಪರ್ಬ್ ಎನ್ನಿಸುವಂತಹ ಟ್ಯೂನ್‌ಗಳನ್ನು ನೀಡಿದ್ದಾರೆ ಮನೋಮೂರ್ತಿಯವರು.

ಇದರೊಂದಿಗೆ ರೇಖಾರಾಣಿ ಕಥೆ ಬರೆದು ಅವರ ಪತಿ ಅಶೋಕ್ ಕಶ್ಯಪ್ ನಿರ್ದೇಶಿಸುತ್ತಿರುವ 'ಸಿಹಿಮುತ್ತು' ಎಂಬ ಚಿತ್ರಕ್ಕೂ ಕಮಿಟ್ ಆಗಿದ್ದೇನೆ. ಈ ಚಿತ್ರವೂ ಒಂದು ರೀತಿಯಲ್ಲಿ ಹೊಸ ಪ್ರಯೋಗದಂತಿದೆ.

■ *ಈಗಾಗಲೇ ಎರಡು, ಮೂರು ಪ್ರಯೋಗಗಳಲ್ಲಿ ಸೋತಿದ್ದೀರಿ. ಆದರೂ ಮತ್ತೆ ಪ್ರಯೋಗಾತ್ಮಕ ಚಿತ್ರಗಳಲ್ಲಿ ನಟಿಸುತ್ತೀರಾ?*

ಇಲ್ಲ, ಈ ಪ್ರಯೋಗದ ಮೇಲೆ ನನಗೆ ಬಹಳ ಭರವಸೆ ಇದೆ. ಮೊದಲ ಬಾರಿಗೆ ಶಿವಣ್ಣನೊಂದಿಗೆ ಅದರಲ್ಲಿ ನಟಿಸುತ್ತಿದ್ದೇನೆ. ಜೊತೆಗೆ ಧ್ಯಾನ್ ಕೂಡಾ ಇದ್ದಾರೆ. ಈ ಚಿತ್ರದ ಮತ್ತೊಂದು ವಿಶೇಷವೆಂದರೆ ಕನ್ನಡ ಚಿತ್ರರಂಗದಲ್ಲೇ ಮೊಟ್ಟ ಮೊದಲ ಬಾರಿಗೆ ಇಡೀ ಸಿನಿಮಾವನ್ನು ಅಲ್ಟ್ರಾ ಫೈನ್ ಲೆನ್ಸ್ 535B ಕ್ಯಾಮರಾದಲ್ಲಿ ಚಿತ್ರೀಕರಿಸುತ್ತಿದ್ದಾರೆ. ಅಶೋಕ್ ಕಶ್ಯಪ್‌ರೊಂದಿಗೆ ಸಂತೋಷ್ ರೈ ಪತಾಜೆ ಕೂಡಾ ಕ್ಯಾಮರಾ ಹಿಡಿಯುತ್ತಿದ್ದಾರೆ. ಕತೆ ಕೂಡಾ ವಿಭಿನ್ನವಾಗಿರುವುದರಿಂದ ಒಪ್ಪಿದ್ದೇನೆ.

■ *ಸಿನಿಮಾದಲ್ಲಿ ನಟಿಸುವುದರೊಂದಿಗೆ ಆಗಾಗ ಹೋರಾಟ ಬೇರೆ ಮಾಡ್ತೀರಲ್ಲ?*

ಹೌದು, ಮೊದಲಿನಿಂದಲೂ ನನಗೆ ಚಳವಳಿಗಳ, ಹೋರಾಟಗಳ ಕಡೆ ಸೆಳೆತ. ನಾಟಕಗಳಲ್ಲಿ ಅಭಿನಯಿಸುತ್ತಿದ್ದ ದಿನಗಳಲ್ಲಿ ಸಿಪಿಐ ಪಕ್ಷದ ಸಿದ್ದನಗೌಡ ಪಾಟೀಲರ ನಾಯಕತ್ವದ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಲೆಫ್ಟ್ ಮೂವ್‌ಮೆಂಟ್‌ನೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆ. ಈಗಲೂ ರಕ್ಷಣಾ ವೇದಿಕೆಯ ಹೋರಾಟಗಳಲ್ಲಿ ನಾನೇ ಸ್ವಯಂಪ್ರೇರಿತನಾಗಿ ಹೋಗಿ ಭಾಗವಹಿಸುತ್ತೇನೆ.

■ *ಅಂದರೆ, ಬರೀ ರಕ್ಷಣಾ ವೇದಿಕೆಗೆ ಮಾತ್ರ ಸೀಮಿತವಾ ನಿಮ್ಮ ಹೋರಾಟ?*

ಹಾಗಲ್ಲ, ಜಾಗತೀಕರಣ, ರೈತರ ಸಮಸ್ಯೆ, ನೇಕಾರರ ಸಮಸ್ಯೆಗಳ ವಿರುದ್ಧದ ಎಂತಹ ಹೋರಾಟವೇ ಆಗಲಿ, ಯಾವುದೇ ಸಂಘಟನೆಯಾಗಲಿ ನಾನು ಭಾಗವಹಿಸೇ ತೀರುತ್ತೇನೆ. ಬಹುಶಃ ನಾನು ಸಿನಿಮಾ ನಟನಾಗದಿದ್ದರೆ ಅಂತಹ ಕ್ರಾಂತಿಕಾರಿಯಾಗಿಬಿಡುತ್ತಿದ್ದೆ!


■ *ಅಂದಿನ ಬಡತನಕ್ಕೂ ಇಂದಿನ ನೆಮ್ಮದಿಯ ಜೀವನಕ್ಕೂ ವ್ಯತ್ಯಾಸ ಕಾಣುತ್ತಿದೆಯಾ?*

ಖಂಡಿತಾ ಇಲ್ಲ. ಮೊದಲೆಲ್ಲಾ ನಾನು ಮತ್ತು ನನ್ನ ಕುಟುಂಬದವರು ಮಗ್ಗಗಳಿಗೆ ಕೂಲಿಗೆ ಹೋಗ್ತಿದ್ವಿ. ದಿನಕ್ಕೆ ಮೂವತ್ತು, ನಲವತ್ತು ರೂಪಾಯಿಗಳ ಬಟವಾಡೆ ಸಿಗುತ್ತಿತ್ತು. ಅಷ್ಟು ಕಡಿಮೆ ಸಂಪಾದನೆಯಲ್ಲಿ ಜೀವನ ನಡೆಸಿದ ಅನುಭವ ನನಗಿದೆ. ಬಡತನದ ಎಕ್ಸ್‌ಟ್ರೀಮ್‌ನಲ್ಲಿದ್ದು ಬಂದವನು ನಾನು. ಹಾಗಾಗಿ ನನಗೆ ಈ ಲಕ್ಷ, ಲಕ್ಷಗಳ ಸಂಪಾದನೆ ತಲೆ ತಿರುಗಿಸಿಲ್ಲ, ತಿರುಗಿಸುವುದೂ ಇಲ್ಲ. ನಾನು ಚಿತ್ರರಂಗಕ್ಕೆ ಬರುವ ಮೊದಲು ಸುಂಕದಕಟ್ಟೆ ಗಿರಿಗ... ಈಗಲೂ ನಾನೇನೂ ಬಂಗಲೆಗಳನ್ನೇನೂ ಸಂಪಾದಿಸಿಲ್ಲ. ಬಸವೇಶ್ವರನಗರದ ಶಾರದಾ ಕಾಲೋನಿ ಎಂಬ ಚಿಕ್ಕ ಬಡಾವಣೆಯಲ್ಲಿ ಏಳು ಸಾವಿರ ರೂಪಾಯಿಗಳ ಬಾಡಿಗೆ ಮನೆಯಲ್ಲಿ ಬದುಕುತ್ತಿದ್ದೇನೆ. ಜೀವನವಿಡೀ ಕಷ್ಟಪಟ್ಟು ಮಗ್ಗಗಳಲ್ಲಿ ಬೆವರು ಸುರಿಸಿದ ನನ್ನ ಮನೆಯವರನ್ನು ಮಾತ್ರ ಕೆಲಸಕ್ಕೆ ಕಳಿಸದೇ ಸ್ವಲ್ಪ ವಿರಾಮ ನೀಡಿದ್ದೇನೆ. ಅದೇ ನನಗೆ ದೊಡ್ಡ ತೃಪ್ತಿ....

ಇದು ಪ್ರೇಮ್‌ನ ಮನದ ಮಾತುಗಳು. ಇತ್ತೀಚೆಗೆ ಚಿತ್ರರಂಗದಲ್ಲಿ ಹಲವಾರು ಹೊಸ ಮುಖಗಳು ಬರುತ್ತಿವೆ, ಹೋಗುತ್ತಿವೆ. ಆದರೆ ಅವರೆಲ್ಲರ ಮಧ್ಯೆ ಪ್ರೇಮ್ ತಾನೊಬ್ಬ ಪ್ರಜ್ಞಾವಂತ ಮತ್ತು ಪ್ರತಿಭಾವಂತ ನಟ ಎಂಬುದನ್ನು ಈಗಾಗಲೇ ಸಾಬೀತು ಮಾಡಿದ್ದಾನೆ. ಎಲ್ಲಕ್ಕಿಂತ ಮುಖ್ಯವಾಗಿ ಸಾಹಿತ್ಯಜ್ಞಾನವೇ ಇರದ ಗಾಂಧಿನಗರದ ಮಂದಿಯ ಮಧ್ಯೆ ಮಹಾಶ್ವೇತಾದೇವಿ, ಪಿ. ಲಂಕೇಶ್, ತೇಜಸ್ವಿ... ಹೀಗೆ ಹಲವಾರು ಲೇಖಕರ ಸಾಹಿತ್ಯಗಳನ್ನು ಓದಿಕೊಂಡಿರುವ ನಟ ಪ್ರೇಮ್.

ಇಂಥ ಪ್ರೇಮ್ ಗಾಂಧಿನಗರದೆಂಬ ಕೂಪದಲ್ಲಿ ಕಳೆದುಹೋಗದೆ, ಯಶಸ್ಸಿನ ಹಾದಿ ತನ್ನದಾಗಿಸಿಕೊಳ್ಳಲಿ ಎಂಬುದು 'ಲಂಕೇಶ್' ಹಾರೈಕೆ.

■ ಸಂದರ್ಶನ : ಅರುಣ್.ಬಿ





ಡೈನಮಿಕ್ ಡೈರೆಕ್ಷನ್‌ನಲ್ಲಿ ಪ್ರಜ್ವಲ್

'ಡೈನಮಿಕ್ ಹೀರೋ' ದೇವರಾಜ್ ಈಗ ನಿರ್ದೇಶಕರಾಗಿದ್ದಾರೆ. ಹಾಗಂತ ನೀವು "ಹೌದಾ?" ಎಂದು ಹುಬ್ಬೇರಿಸಬೇಡಿ. ದೇವರಾಜ್ ನಿರ್ದೇಶಕ ನಾಗಿರುವುದು ರೀಲ್ ಲೈಫ್‌ನಲ್ಲಲ್ಲ, ರಿಯಲ್ ಲೈಫ್‌ನಲ್ಲಿ. ಅರ್ಥಾತ್ ತನ್ನ ಸುಪುತ್ರ ಪ್ರಜ್ವಲ್ ದೇವರಾಜ್ ಚಿತ್ರರಂಗದಲ್ಲಿ ಯಾವ ರೀತಿ ಒಂದೊಂದೆ ಹೆಜ್ಜೆ ಮುಂದಿಟ್ಟು ಪ್ರಜ್ವಲಿಸಬೇಕು ಎಂದು ದೇವರಾಜ್ ನಿರ್ದೇಶನ ನೀಡುತ್ತಿದ್ದಾರೆ. ಅಪ್ಪನ ನಿರ್ದೇಶನದಂತೆ ನಟಿಸುತ್ತಿರುವ ಪ್ರಜ್ವಲ್ ಕೆರಿಯರ್‌ಗ್ರಾಫ್ ಹೀಗಿದೆ.

ಈತ 'ಸಿಕ್ಸರ್' ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟವನು. ಆನಂತರ 'ಗೆಳೆಯ' ಎಂಬ ಚಿತ್ರವೂ ತೆರೆಕಂಡಿತು. ಆದರೆ ಈ ಎರಡು ಚಿತ್ರಗಳ ಸರದಾರ ಪ್ರಜ್ವಲ್ ಇಂದು ಯುವ ನಾಯಕನಟರಲ್ಲೇ ಅತ್ಯಂತ ಬೇಡಿಕೆಯಲ್ಲಿರುವ ನಟ. ಈಗಾಗಲೇ ಈತನ ನಾಲ್ಕು ಚಿತ್ರಗಳು ಬಿಡುಗಡೆಗೆ ರೆಡಿಯಾಗಿವೆ. ಇದೆಲ್ಲ ಸಾಧ್ಯವಾಗಿದ್ದು ಆತನ ತಂದೆಯ ಅನುಭವದ ಮೂಸೆಯಿಂದ.

ಸದ್ಯದಲ್ಲೇ ಸಾಧುಕೋಕಿಲ ನಿರ್ದೇಶನದ 'ಗಂಗೆಬಾರೆ ತುಂಗೆಬಾರೆ' ತೆರೆಕಾಣಲಿದೆ. "ಈ ಚಿತ್ರ ನನ್ನ ವೃತ್ತಿಜೀವನಕ್ಕೆ ಹೊಸ ಬ್ರೇಕ್ ನೀಡಲಿದೆ" ಎನ್ನುವ ಆತ್ಮವಿಶ್ವಾಸ ಈ ಆರಡಿ ಎತ್ತರದ ಹುಡುಗನದ್ದು. ಒಂದು ವೇಳೆ 'ಗಂಗೆ' ಬ್ರೇಕ್ ನೀಡದಿದ್ದರೆ ಆ ಚಿತ್ರದ ಬೆನ್ನಿಗೇ 'ಮೆರವಣಿಗೆ' ತೆರೆಕಾಣುತ್ತದೆ. ಇದನ್ನು ನಿರ್ದೇಶಿಸಿರುವುದು ಯಶಸ್ವಿ ಯುವ ನಿರ್ದೇಶಕ ಮಹೇಶ್ ಬಾಬು. ಹೀಗಾಗಿ ಈ ಚಿತ್ರದ ಮೇಲೆ ಏನೋ ಒಂಥರಾ ಹೋಪ್‌ಅನ್ನು ಪ್ರಜ್ವಲ್ ಇಟ್ಟುಕೊಂಡಿದ್ದಾನೆ. ಅಕಸ್ಮಾತ್ 'ಮೆರವಣಿಗೆ' ಹೆಚ್ಚು ಕಮ್ಮಿಯಾದರೆ ಅದರ ಹಿಂದೆಯೇ ಪಕ್ಕಾ ಕಮರ್ಷಿಯಲ್ ಚಿತ್ರ 'ಕೆಂಚ' ರೆಡಿಯಾಗಿದೆ. ಇದು ರಮೇಶ್ ಯಾದವ್ ನಿರ್ಮಾಣದ ಚಿತ್ರ. ಈ ಚಿತ್ರದ ಮುಖಾಂತರ ಪ್ರಜ್ವಲ್ ಬಿ ಮತ್ತು ಸಿ ಕೇಂದ್ರಗಳ ಡಾರ್ಲಿಂಗ್ ಆಗುವ ಸಾಧ್ಯತೆಯಿದೆ. ಈ ಮೂರೂ ಚಿತ್ರ ಬಿಡುಗಡೆಯಾಗುವ ಮುನ್ನವೇ ಈಗ ರಾಮು ನಿರ್ಮಾಣದ 'ಗುಲಾಮ' ಚಿತ್ರದ ಮುಹೂರ್ತ ಮೊನ್ನೆ ನಡೆಯಿತು.

ನಿಮಗೆ ನೆನಪಿರಬಹುದು, ಹಿಂದೊಮ್ಮೆ ದೇವರಾಜ್‌ಗೆ ಸ್ಟಾರ್ ವ್ಯಾಲ್ಯೂ ತಂದುಕೊಟ್ಟಿದ್ದೇ ರಾಮು ನಿರ್ಮಾಣದ 'ಗೋಲಿಬಾರ್', 'ಲಾಕಪ್‌ಡೆತ್' ಮೊದಲಾದ ಚಿತ್ರಗಳು. ಅಪ್ಪನಿಗೆ ಬ್ರೇಕ್ ನೀಡಿದ ರಾಮು ಮಗನಿಗೂ ಬ್ರೇಕ್ ನೀಡಲಾರರೇ?

ಈ ವರ್ಷದ ಕೊನೆಯ ಒಳಗೆ ಈ ನಾಲ್ಕರಲ್ಲಿ ಯಾವುದಾದರೂ ಒಂದು ಚಿತ್ರ ಸೂಪರ್ ಹಿಟ್ ಆದರೆ ಮುಂದಿನ ವರ್ಷ ಈತನ ಕಾಲ್‌ಶೀಟ್‌ಅನ್ನು ಕಳ್ಳೇಪುರಿ ಥರ ಎಲ್ಲರಿಗೂ ಹಂಚುವ ಸಾಧ್ಯತೆಯಿದೆ ಅಥವಾ ಈತನೂ ಕನ್ನಡದ ನಿರ್ಮಾಪಕರಿಗೆ ಗಗನಕುಸುಮವಾಗಿ ತೆಲುಗು ಅಥವಾ ತಮಿಳಿಗೆ ಹಾರಿಹೋದರೂ ಅಚ್ಚರಿಯಿಲ್ಲ. ಉತ್ತಮ ಪ್ರೈಕ್ಸಿನ ಆರಡಿ ಎತ್ತರದ ಈ ಹುಡುಗ ಪ್ರತಿಭಾವಂತ ಎಂಬುದರಲ್ಲಿ ಸಂಶಯವಿಲ್ಲ. ಎಲ್ಲಾ ಹೀರೋಗಳು ನಿರೀಕ್ಷಿಸುವಂತಹ ಒಂದು ಭಿಗ್ ಬ್ರೇಕ್ ಈಗ ಆತನಿಗೆ ಬೇಕಾಗಿದೆ.

'ಪ್ರೀತಿ' ಬದಲಾಗಿ 'ರಾಜ್' ಆಗಿದ್ದು



ಪುನೀತ್ ರಾಜ್‌ಕುಮಾರ್ ಅಭಿನಯದ, ಪ್ರೇಮ್ ನಿರ್ದೇಶನದ ಹೊಸ ಚಿತ್ರದ 'ಪ್ರೀತಿ' ಹೆಸರನ್ನು ಜನಾಭಿಪ್ರಾಯ ಮತ್ತು ಪಾರ್ವತಮ್ಮನವರ ಅಸಮಾಧಾನಕ್ಕೆ ಮಣಿದು ಬದಲಾಯಿಸಲಾಗಿದೆ. ಈಗ ಈ ಚಿತ್ರಕ್ಕೆ 'ರಾಜ್' ಎಂದು ಹೆಸರಿಡಲಾಗಿದೆ.

ಹಾಗೆ ನೋಡಿದರೆ ಪ್ರೇಮ್ ನಿರ್ದೇಶನದ ಮೊದಲ ಚಿತ್ರ 'ಕರಿಯ' ಸಂದರ್ಭದಲ್ಲಿ ಇದೇ ತರಹದ ಸಮಸ್ಯೆ ಎದುರಾಗಿತ್ತು. "ಚಿತ್ರದ ಟೈಟಲ್‌ಅನ್ನು ಬದಲಾಯಿಸಿದರೆ ಮಾತ್ರ ನಾನು ನಟಿಸುತ್ತೇನೆ" ಎಂದು ಶಿವರಾಜ್‌ಕುಮಾರ್ ಆಗ ಹೇಳಿದ್ದರು ಎಂಬ ಸುದ್ದಿ ಹರಡಿತ್ತು. ಆದರೆ ಟೈಟಲ್ ಬದಲಾಯಿಸುವ ಬದ್ದಲಿಗೆ ಅಂದು ಪ್ರೇಮ್ ನೇರ ದರ್ಶನ್ ಬಳಿಗೆ ಹೋಗಿ ಆತನನ್ನು ಒಪ್ಪಿಸುವ ಮೂಲಕ ನಾಯಕ ನಟನನ್ನೇ ಬದಲಾಯಿಸಿದ್ದರು. ಪ್ರೇಮ್ ನಿರ್ದೇಶನದ ಮೊದಲ ಚಿತ್ರವಾಗಿದ್ದ 'ಕರಿಯ' ಸೂಪರ್ ಹಿಟ್ ಆಗಿತ್ತು.

ಆದರೆ ಈಗ ಕಾಲ ಬದಲಾಗಿದೆ. 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರ ಮಾಡಿ ಕುಗ್ಗಿರುವ ಪ್ರೇಮ್ ಈ ಬಾರಿ ಹೀರೋ ನನ್ನೇ ಬದಲಾಯಿಸುವ ಸಾಹಸಕ್ಕೆ ಕೈಹಾಕದೇ ಟೈಟಲ್ ಅನ್ನು ಬದಲಾಯಿಸಿದ್ದಾರೆ. ಇದು ಪ್ರೇಮ್ ಕಾಲಚಕ್ರದ ಒಂದು ಸುತ್ತು...

R B P LANKESH, Kannada Weekly Price Rs. 12/- 26-3-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



ಮನೋಮೂರ್ತಿಯ ಬಾಲಿವುಡ್ ಪಯಣ

ಕರ್ನಾಟಕದ ಜನರ ಮನ ಮಾತಾಗಿರುವ ಮತ್ತು ಗಾಂಧಿನಗರದ ನಿರ್ಮಾಪಕರ ಪಾಲಿಗೆ ಚಿನ್ನದ ಮೊಟ್ಟೆಯಿಡುವ ಕೋಳಿ ಎನಿಸಿಕೊಂಡಿರುವ ಸಂಗೀತ ನಿರ್ದೇಶಕ ಮನೋಮೂರ್ತಿ ಇನ್ನುಮುಂದೆ ಕನ್ನಡಿಗರ ಪಾಲಿಗೆ ಕೈಗಟುಕದೇ ಇರುವ ಸಾಧ್ಯತೆಯಿದೆ.

ಸದ್ಯಕ್ಕೆ ಮನೋಮೂರ್ತಿ ಮೇಲೆ ಆರು ದೊಡ್ಡ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡುವ ಜವಾಬ್ದಾರಿಯಿದೆ. ಈ ಚಿತ್ರಗಳನ್ನು ಮುಗಿಸಿದ ನಂತರ ಮನೋಮೂರ್ತಿ ಬಾಲಿವುಡ್ ಚಿತ್ರವೊಂದಕ್ಕೆ ಸಂಗೀತ ನಿರ್ದೇಶಿಸುವುದು ಬಹುತೇಕ ಗ್ಯಾರಂಟಿಯಾಗಿದೆ. ಈ ಕಾರಣದಿಂದಲೇ ಅವರು ಕನ್ನಡದ ಹೊಸ ಚಿತ್ರಗಳಿಗೆ ಸಹಿ ಹಾಕುತ್ತಿಲ್ಲ. ಆದರೆ ನಿರ್ಮಾಪಕರೆಲ್ಲಾ "ನಮಗೊಂದೇ ಒಂದು ಚಿತ್ರಮಾಡಿಕೊಟ್ಟು ಹಿಂದಿಗೆ ಹೋಗಿ" ಎಂದು ದುಂಬಾಲು ಬೀಳುತ್ತಿದ್ದಾರೆ. ಯಾಕೆಂದರೆ ಈಗ ಜನರೂ, ಕ್ಯಾಸೆಟ್ ಉದ್ಯಮಿಗಳೂ ಮನೋಮೂರ್ತಿ ಬಿಟ್ಟರೆ ಬೇರೆ ಯಾರ ಹಾಡನ್ನೂ ಇಷ್ಟಪಡುತ್ತಿಲ್ಲ.

'ಮುಂಗಾರು ಮಳೆ' ಚಿತ್ರದ ಮುಖಾಂತರ ಮನೋ ಮೂರ್ತಿ ಕರ್ನಾಟಕದ ಮೂಲೆಮೂಲೆಗೂ ಪರಿಚಿತರಾದರೂ ವಾಸ್ತವವಾಗಿ ಅದಕ್ಕಿಂತ ಬಹಳ ಹಿಂದೆ 'ಅಮೆರಿಕ ಅಮೆರಿಕ', 'ನನ್ನ ಪ್ರೀತಿಯ ಹುಡುಗಿ', 'ಪ್ರೀತಿ ಪ್ರೇಮ ಪ್ರಣಯ' ಮೊದಲಾದ ಚಿತ್ರಗಳ ಸಂಗೀತದಿಂದ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಆದರೆ ಗಾಂಧಿನಗರಿಗಳು ಮುಗಿಬೀಳಲು ಆರಂಭಿಸಿದ್ದು ಮಾತ್ರ '.... ಮಳೆ' ಬಂದ ನಂತರ.

ಆರಂಭದಲ್ಲಿ ಅಮೆರಿಕದಲ್ಲಿ ಇದ್ದೇ ಇಂಟರ್‌ನೆಟ್ ಮುಖಾಂತರ ಟ್ಯೂನುಗಳನ್ನು ನೀಡಿ ಹಾಬಿಯಾಗಿ ಮನೋಮೂರ್ತಿ ಈ ಕೆಲಸ ಆರಂಭಿಸಿದರು. ಕ್ರಮೇಣ ಅವರಿಗೆ ಬೇಡಿಕೆ ಜಾಸ್ತಿಯಾದಂತೆ ಅಮೆರಿಕದಲ್ಲಿ ಕೈತುಂಬ ಸಂಬಳದ ಕೆಲಸ ಬಿಟ್ಟು ಗಾಂಧಿನಗರದಲ್ಲಿ ಮನೆ ಮಾಡಿದರು. ಈಗ ಗಾಂಧಿನಗರದ ಮನೆ ಖಾಲಿ ಮಾಡಿ ಮುಂಬೈಗೆ ಹೊರಟುನಿಂತಿದ್ದಾರೆ. ಅಮೆರಿಕಾ ಟು ಗಾಂಧಿನಗರ, ಗಾಂಧಿನಗರದಿಂದ ಬಾಲಿವುಡ್.... ಹೇಗಿದೆ ನೋಡಿ ಮನೋಮೂರ್ತಿಯವರ ಪ್ರವಾಸ. ಏನೇ ಆಗಲಿ ಕನ್ನಡದ ಪ್ರತಿಭೆಯೊಂದು ರಾಷ್ಟ್ರಮಟ್ಟದಲ್ಲಿ ಅನಾವರಣಗೊಳ್ಳುತ್ತಿರುವುದು ನಾವೆಲ್ಲಾ ಹೆಮ್ಮೆ ಪಡಬಹುದಾದ ವಿಷಯ.

ಮನೋಮೂರ್ತಿ ಬಾಲಿವುಡ್‌ಗೆ ಹಾರುವುದೇನೋ ಸಂತೋಷದ ವಿಷಯ. ಆದರೆ ಕಳೆದ ಎರಡು ವರ್ಷಗಳಿಂದ ಮಧುರವಾದ ಟ್ಯೂನ್‌ಗಳನ್ನು ನೀಡಿ ಕನ್ನಡ ಸಂಗೀತ ಲೋಕದಲ್ಲಿ ಆಹ್ಲಾದಕರ ವಾತಾವರಣ ಸೃಷ್ಟಿಸಿದ್ದ ಇವರ ಗೈರುಹಾಜರಿಯಿಂದಾಗಿ ಮತ್ತೆ ಹಳೆಯ ಅಬ್ಬರದ ಸಂಗೀತ ಬಂದುಬಿಡಬಹುದೋ ಎಂಬ ಗಾಬರಿಯಂತೂ ಇದ್ದೇ ಇದೆ. ಮೂರ್ತಿಯವರು ಆ ಕಡೆ ಹೋದರೆ ಈ ಕಡೆ ಗುರುಕಿರಣ್ ಮತ್ತು ಹರಿಕೃಷ್ಣ ಅವರ ಅದೃಷ್ಟವೇ ಬದಲಾಗಬಹುದು. ಆದರೆ ಯಾರ್‍ಯಾರ ಅದೃಷ್ಟ ಎಷ್ಟೆಷ್ಟು ಎಂದು ಹೇಳಲು ಮಾತ್ರ ಸಾಧ್ಯವಿಲ್ಲ.

ಬಾಲಿವುಡ್ಡಿನಲ್ಲೂ ಮನೋಮೂರ್ತಿ ಕರ್ನಾಟಕದ ತರಹ ಸಂಗೀತದ 'ಮಳೆ'ಯನ್ನು ಸುರಿಸುವಂತಾಗಲಿ....

ಪುಟಾಣಿಗಳ ಚಿತ್ರದಲ್ಲಿ ಪುನೀತ್!




ಪುನೀತ್ ರಾಜ್‌ಕುಮಾರ್‌ಗೆ ಮಕ್ಕಳ ಚಿತ್ರವೊಂದನ್ನು ನಿರ್ದೇಶಿಸಬೇಕು ಎಂಬ ಆಸೆ ಇದೆಯಂತೆ. ಅಮೀರ್ ಖಾನ್ ನಿರ್ದೇಶನದ 'ತಾರೆ ಜಮೀನ್ ಪರ್' ಚಿತ್ರವನ್ನು ನೋಡಿದ ನಂತರ ಅಥವಾ ಅದು ಬಾಕ್ಸಾಫೀಸಿನಲ್ಲಿ ಬಂಪರ್ ಹೊಡೆದ ನಂತರ ಹೀಗೆ ಅನಿಸಿರಬಹುದೇ? ಎಂದು ನೀವು ಭಾವಿಸಿದರೆ, ಅದು ತಪ್ಪು ಎನ್ನುತ್ತಾರೆ ಪುನೀತ್.

'ಬೆಟ್ಟದ ಹೂವು' ಚಿತ್ರದಲ್ಲಿ ಬಾಲನಟನಾಗಿ ನಟಿಸುತ್ತಿದ್ದಾಗಲೇ ನಿರ್ದೇಶನದ ಬಗ್ಗೆ ಒಂದು ರೀತಿಯ ಆಕರ್ಷಣೆ ಮತ್ತು ಒಲವು ಅವರಲ್ಲಿ ಹುಟ್ಟಿತಂತೆ. ಈಗ ನಟನೆಯೊಂದಿಗೆ ಚಿತ್ರ ನಿರ್ಮಾಣದ ತಾಂತ್ರಿಕತೆಯನ್ನು ಅರಿತುಕೊಂಡ ನಂತರ ಆ ಒಲವು ಮತ್ತು ಆಸೆಗೆ ನೀರೆರೆದಂತಾಗಿದೆಯಂತೆ. ಹೀಗಾಗಿ ಮಕ್ಕಳ ಚಿತ್ರವೊಂದನ್ನು ನಿರ್ದೇಶಿಸಬೇಕು ಎಂಬ ಆದಮ್ಯ ಉತ್ಸಾಹ ಹೆಚ್ಚುತ್ತಿದೆ ಎಂದರು ಪುನೀತ್.

ಅದೇನೇ ಇರಲಿ, ಚಿಕ್ಕ ವಯಸ್ಸಿನಲ್ಲೇ ಬಾಲನಟನಾಗಿ ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಯನ್ನು ತನ್ನ ಹೆಗಲಿಗೇರಿಸಿಕೊಂಡ ಪುನೀತ್ ಈಗ ಮಕ್ಕಳ ಚಿತ್ರವನ್ನು ನಿರ್ದೇಶಿಸುವ ಮುಖಾಂತರ ಹೊಸ ಪಯಣವನ್ನು ಆರಂಭಿಸಲು ಸಿದ್ಧರಾಗಿದ್ದಾರೆ. **We wish him a happy journey.**

ಮೊಗ್ಗಿನ ಜೊತೆ ಗೂಳಿ ಕಾಳಗ!



ಬಹಳ ಸಮಯದ ನಂತರ ಸುದೀಪ್ ಚಿತ್ರವೊಂದು ತೆರೆಕಾಣುತ್ತಿದೆ. ಚಿತ್ರದ ಹೆಸರು 'ಗೂಳಿ'. ಅದೇ ಸಮಯದಲ್ಲಿ ಮೂರು ಜನ ಹೊಸ ಹುಡುಗಿಯರು ನಟಿಸಿರುವ, ಶಶಾಂಕ್ ನಿರ್ದೇಶನದ 'ಮೊಗ್ಗಿನ ಮನಸ್ಸು' ಕೂಡ ಬಿಡುಗಡೆಯಾಗುತ್ತಿದೆ. ಅಲ್ಲಿಗೆ ಮುಂದಿನ ವಾರ ಗೂಳಿಯೊಂದಿಗೆ ಮೊಗ್ಗಿನ ಮನಸ್ಸಿನ ಹುಡುಗಿಯರು ಕಾದಾಡಲು ಹೊರಟಿದ್ದಾರೆ.

ಹಿಂದೊಮ್ಮೆ ಸುದೀಪ್ ಮತ್ತು ದರ್ಶನ್ ಚಿತ್ರಗಳು ಒಂದೇ ದಿನ ಬಿಡುಗಡೆಯಾದಾಗ ಅವರಿಬ್ಬರ ಅಭಿಮಾನಿ ವಲಯಗಳಲ್ಲಿ ತವಕ, ತಲ್ಲಣ ಉಂಟಾಗುತ್ತಿತ್ತು. ಈಗ ಸುದೀಪ್ ಅಭಿಮಾನಿಗಳ ಪಾಲಿಗೆ ಬೇರೊಂದು ರೀತಿಯ ತವಕ. ಯಾಕೆಂದರೆ ಈಗ ಕನ್ನಡ ಚಿತ್ರರಂಗದಲ್ಲಿ ಹೊಸ ಯುವಕ ಯುವತಿಯರನ್ನು ಪ್ರೇಕ್ಷಕ ಎರಡೂ ಕೈಯಿಂದ ಅಪ್ಪಿಕೊಂಡು ಸ್ವಾಗತಿಸುತ್ತಿದ್ದಾನೆ. ಇಂತಹ ವಾತಾವರಣದಲ್ಲಿ ಶಶಾಂಕ್ ನಿರ್ದೇಶನದ 'ಮೊಗ್ಗಿನ ಮನಸ್ಸಿ'ನಲ್ಲಿ ನಟಿಸಿರುವ ಶುಭಾ ಪೂಂಜ, ರಾಧಿಕಾ ಪಂಡಿತ್, ಸಂಗೀತಾ ಶೆಟ್ಟಿ ಎಂಬ ಹೊಸ ಬೆಡಗಿಯರ ಬಗ್ಗೆ ಉದ್ಯಮಕ್ಕೆ ಹೆಚ್ಚು ನಂಬಿಕೆಯಿದೆ. ಅಂದರೆ ಗಾಂಧಿನಗರದ ಬೆಟ್ಟಿಂಗ್ ಪಂಡಿತರ ಒಲವು 'ಮೊಗ್ಗಿನ ಮನಸ್ಸಿ'ನ ಮೇಲಿದೆ.



ಹಂಗಂತ 'ಗೂಳಿ'ಯನ್ನು ತಳ್ಳಿಹಾಕುವಂತಿಲ್ಲ. ದರ್ಶನ್ 'ಗಜ' ಚಿತ್ರದ ಮುಖಾಂತರ ಹೇಗೆ ಇದೇ ಗಾಂಧಿನಗರದ ಪಂಡಿತರ ಲೆಕ್ಕಾಚಾರಗಳನ್ನು ಸುಳ್ಳು ಮಾಡಿದರೋ ಅದೇ ರೀತಿ 'ಗೂಳಿ' ಕೂಡಾ ಮುನ್ನುಗ್ಗಿ ಎಲ್ಲರನ್ನೂ ಬದಿಗೊತ್ತಿದರೂ ಆಶ್ಚರ್ಯಪಡುವಂತಿಲ್ಲ.



ಕುಳ್ಳನ ಕಳ್ಳಾಟ

ಕಳೆದ ವಾರ 'ಮಂದಾಕಿನಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭದಲ್ಲಿ ರಿಮೇಕ್ ರಾಜ ದ್ವಾರಕೀಶ್ ರಿಮೇಕ್ ವಿರುದ್ಧ ಸಮರವನ್ನೇ ಸಾರುವ ರೀತಿಯಲ್ಲಿ ಭಾಷಣ ಮಾಡಿದರು.

ಅವರ ಪ್ರಕಾರ ಅವರು ರಿಮೇಕ್ ಚಿತ್ರಗಳನ್ನ ಮಾಡಿಲ್ಲವಂತೆ. ಆದರೆ 'ಆಪ್ತಮಿತ್ರ' ರಿಮೇಕ್ ಚಿತ್ರವಾಗಿತ್ತಲ್ಲವೇ? ಎಂದು ಕೇಳಿದರೆ "ಅದು ಸರಕಾರದ ನೀತಿ ನಿಯಮದೊಳಗಿರುವ ರಿಮೇಕ್ ಚಿತ್ರ. ಅಷ್ಟೇ ಅಲ್ಲ, ಈ ಚಿತ್ರವನ್ನು 13 ವರ್ಷಗಳ ನಂತರ ನಾನು ಮಾಡಿದ್ದೇನಲ್ಲದೆ ಅದಕ್ಕೆ ಬೇಕಾದ ಬದಲಾವಣೆಗಳನ್ನು ಮಾಡಿಕೊಂಡಿದ್ದೇನೆ" ಎಂದು ಹೇಳುವ ಮೂಲಕ ಈ ಅಸಾಧ್ಯ ಕುಳ್ಳ ಮಾಲು ಸಮೇತ ಸಿಕ್ಕಿಬಿದ್ದಿದ್ದರೂ ತನ್ನ ಚೋರತನವನ್ನು ಸಮರ್ಥಿಸಿಕೊಳ್ಳುತ್ತಾರೆ.



"ರಿಮೇಕ್ ಮಾಡುವುದೆಂದರೆ ಹೆತ್ತ ತಾಯಿಗೆ ಅನ್ಯಾಯ ಮಾಡಿದಂತೆ" ಎಂದು ಘೋಷಿಸಿರುವ ದ್ವಾರಕೀಶ್ "ರಿಮೇಕ್ ಮಾಡಿದರೂ ನಾನು ಸರಕಾರಕ್ಕೆ ಟ್ಯಾಕ್ಸ್ ಕಟ್ಟುವುದರಲ್ಲಿ ಮೋಸ ಮಾಡುವುದಿಲ್ಲ" ಎಂದೂ ಹೇಳಿ ಹಾಸ್ಯಾಸ್ಪದರಾಗಿದ್ದಾರೆ.

'ಆಪ್ತಮಿತ್ರ' ಚಿತ್ರದ ಮುಖಾಂತರ ತನ್ನ ಕೋಟ್ಯಂತರ ರೂಪಾಯಿ ಸಾಲವನ್ನು ತೀರಿಸಿಕೊಂಡ ಮತ್ತು ಅಷ್ಟೇ ಲಾಭವನ್ನೂ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಈ ಕುಳ್ಳ ಜನ್ಮಜನ್ಮಾಂತರಕ್ಕೂ ರಿಮೇಕ್ ಚಿತ್ರಗಳಿಗೆ ಋಣಿಯಾಗಿರಬೇಕು. ಆದರೆ ಹೊಟ್ಟೆ ತುಂಬಿದ ಮೇಲೆ ಕೆಟ್ಟ ನಾಥದ ಹೂಸು ಬಿಟ್ಟರು ಎಂಬಂತೆ ಈ ಕುಳ್ಳ ವರ್ತಿಸುತ್ತಿರುವುದು ಮಜಬೂತಾಗಿದೆ.

ಪ್ರಶಸ್ತಿಗಳ ಪ | ರಾ | ಕ್ರ | ಮ

ಇತ್ತೀಚೆಗೆ ಕನ್ನಡದ ಟಿವಿ ಚಾನೆಲ್‌ಗಳು ಒಂದರ ಹಿಂದೊಂದು ಎಂಬಂತೆ ಸರದಿಯಲ್ಲಿ ಚಲನಚಿತ್ರ ಪ್ರಶಸ್ತಿಗಳನ್ನು ಪ್ರದಾನ ಮಾಡಲಾರಂಭಿಸಿವೆ.

ಎರಡು ವಾರಗಳ ಹಿಂದೆ 'ಕಸ್ತೂರಿ' ಚಾನಲ್‌ನವರು ಅರಮನೆಯ ಗಾಯತ್ರಿ ವಿಹಾರದಲ್ಲಿ ಚಲನಚಿತ್ರ ಪ್ರಶಸ್ತಿ ಸಮಾರಂಭವನ್ನು ಬಹಳ ಆಡಂಬರದಿಂದ ನಡೆಸಿದರು. ಇದಾದ ಒಂದೇ ವಾರಕ್ಕೆ ಅದೇ ಸ್ಥಳದಲ್ಲಿ 'ಉದಯ ಟೀವಿ'ಯವರು ಕೂಡಾ ಅದೇ ಮಾದರಿಯಲ್ಲಿ ಚಲನಚಿತ್ರ ಪ್ರಶಸ್ತಿ ಸಮಾರಂಭ ನಡೆಸಿದರು. ಈಗ 'ಝೀ' ಮತ್ತು 'ಸುವರ್ಣ' ಟೀವಿಯವರು ಕೂಡಾ ಅದೇ ಅರಮನೆ ಆವರಣದಲ್ಲಿ ಅಂತಹದ್ದೇ ಸಮಾರಂಭಗಳನ್ನು ನಡೆಸುವ ಪ್ಲಾನ್ ಮಾಡುತ್ತಿದ್ದಾರೆ. ಅಲ್ಲಿಗೆ ಒಂದೇ ತಿಂಗಳಲ್ಲಿ ನಾಲ್ಕು ಚಾನೆಲ್‌ಗಳು ನಾಮುಂದು ತಾಮುಂದು ಎಂಬಂತೆ ಪ್ರಶಸ್ತಿಗಳನ್ನು ವಿತರಿಸಿದಂತಾಗುತ್ತದೆ.

ಎಸ್ಸೆಮ್ಮೆಸ್ ಆಯ್ಕೆ ಎಷ್ಟು ನಿಜ?

ಟಿವಿ ಚಾನೆಲ್‌ನವರು ನೀಡುವ ಪ್ರಶಸ್ತಿಗಳ ಆಯ್ಕೆಗೆ ಯಾವುದೇ ಒಂದು ಪರಿಣಿತರ ಸಮಿತಿಗಳಿರುವುದಿಲ್ಲ. ಬದಲಿಗೆ ಸಾಮಾನ್ಯ ಜನರು ಕಳುಹಿಸುವ ಎಸ್ಸೆಮ್ಮೆಸ್ ಮೂಲಕ ಅರ್ಹರನ್ನು ಆಯ್ಕೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಯಾವ ಚಿತ್ರಕ್ಕೆ ಎಷ್ಟು ಎಸ್ಸೆಮ್ಮೆಸ್‌ಗಳು ಬಂದವು ಎಂಬುದನ್ನು ನಿಗೂಢವಾಗಿಡಲಾಗುತ್ತದೆ.

ಇನ್ನೊಂದು ಕುತೂಹಲಕರ ವಿಷಯ ಯಾವುದೆಂದರೆ, ಪ್ರಶಸ್ತಿಗಳಿಗೆ ಇವರು ಆಯ್ಕೆ ಮಾಡುವ ಚಿತ್ರಗಳು ಕೂಡ ಆ ಸಾಲಿನಲ್ಲಿ ತಯಾರಾದ ಎಲ್ಲಾ ಕನ್ನಡ ಚಿತ್ರಗಳಾಗಿರುವುದಿಲ್ಲ. ಬದಲಿಗೆ ಯಾವ ಚಿತ್ರಗಳ ಟಿವಿ ಹಕ್ಕುಗಳನ್ನು ಆ ಚಾನೆಲ್‌ನವರು ಖರೀದಿಸಿರುತ್ತಾರೋ ಆ ಸಿನಿಮಾಗಳನ್ನು ಮಾತ್ರ ಪ್ರಶಸ್ತಿಗೆ ಆಯ್ಕೆ ಮಾಡುತ್ತಾರೆ. ಇದರ ಹಿಂದೆ ದುಡ್ಡಿನ ಲೆಕ್ಕಾಚಾರವಂತೂ ಇದ್ದೇ ಇದೆ. ಅದೇನೆಂದರೆ, ಪ್ರಶಸ್ತಿ ಪ್ರದಾನ ಕಾರ್ಯಕ್ರಮದಿಂದ ಪುಕ್ಕಟೆ ಪ್ರಚಾರವೂ ಸಿಕ್ಕಿತು, ತಾವೇ ಪ್ರಶಸ್ತಿ ನೀಡಿದ ಚಿತ್ರಗಳನ್ನು ಪ್ರಸಾರ ಮಾಡಿದಾಗ ಹೆಚ್ಚಿನ ಜಾಹೀರಾತುಗಳನ್ನೂ ಪಡೆಯಲು ಸುಲಭವಾದ ಮಾರ್ಗವನ್ನು ಕಂಡುಕೊಂಡಂತಾಯಿತು!

ಒಟ್ಟಾರೆಯಾಗಿ ಈ ಪ್ರಶಸ್ತಿ ವಿತರಣಾ ಸಮಾರಂಭಗಳು ಟಿವಿ ಚಾನೆಲ್‌ನವರ ಲಾಭಕ್ಕಾಗಿ ನಡೆಯುತ್ತಿವೆ ಎಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ಇನ್ನು ಮುಂದಾದರೂ ಟಿವಿ ಚಾನೆಲ್‌ನವರು ಬಿಟ್ಟಿ ಪ್ರಚಾರಕ್ಕಾಗಿ ಹಾತೊರೆಯದೇ ನಿಜವಾಗಿಯೂ ಕಲಾವಿದರ ಪ್ರತಿಭೆಯನ್ನು ಗೌರವಿಸುವಂತಾಗಲಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44